ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನ

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು
ಶ್ರೀ ಪ್ರಕಾಶ ಚನ್ನಪ್ಪ ಕಂಬಾರ

ಮಾರ್ಗದರ್ಶಕರು
ಡಾ. ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ,
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಬೆಳಗಾವಿ.

ಚರಿತ್ರೆ ವಿಭಾಗ,
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ. ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನ

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು
ಶ್ರೀ ಪ್ರಕಾಶ ಚೆನ್ನಪ್ಪ ಕಂಬಾರ

ಮಾರ್ಗದರ್ಶಕರು
ಡಾ. ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ,
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಬೆಳಗಾವಿ.

ಚರಿತ್ರೆ ಅಧ್ಯಯನ ವಿಭಾಗ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ. ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೨

ಪ್ರಮಾಣ ಪತ್ರ

'ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನ' ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ಸ್ಮಿತಾ ವಿ. ಸುರೇಬಾನಕರ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇದನ್ನು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಮುಗಳಖೋಡ
ದಿನಾಂಕ : ೧೪-೦೬-೨೦೧೨

ಶ್ರೀ ಪ್ರಕಾಶ ಚನ್ನಪ್ಪ ಕಂಬಾರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಪ್ರಕಾಶ ಚನ್ನಪ್ಪ ಕಂಬಾರ ಇವರು 'ಮುಗಳಖೋಡ : ಒಂದು **ಚಾರಿತ್ರಿಕ ಅವಲೋಕನ'** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೪-೦೬-೨೦೧೨

ಡಾ. ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ,
ರಾಣಿ ಪಾರ್ವತಿದೇವಿ ಕಲಾ ಮತ್ತು
ವಾಣಿಜ್ಯ ಮಹಾವಿದ್ಯಾಲಯ,
ಬೆಳಗಾವಿ.

[illegible]

[illegible]

[illegible]

ಕೃತಜ್ಞತೆಗಳು

ಹಲವು ವರ್ಷಗಳಿಂದ ಪಿ.ಎಚ್.ಡಿ ಮಾಡುವ ನನ್ನ ಬಯಕೆಯನ್ನು ಗುರುಗಳಾದ ಡಾ. ವ್ಹಿ. ಎಸ್. ಮಾಳಿಯವರಲ್ಲಿ ನಿವೇದಿಸುತ್ತಲೇ ಬಂದಿದ್ದೆ. ಅವರು ಮೊದಲು ಎಂ.ಫಿಲ್. ಮಾಡುವುದು ಸೂಕ್ತವೆಂದು ಹೇಳಿ ನನ್ನನ್ನು ಸಂಶೋಧನೆಯ ಗರಡಿ ಮನೆಗೆ ಕರೆತಂದರು. ಆದರೆ ಬಿಡುವಿಲ್ಲದ ಹಲವಾರು ಕೆಲಸಗಳ ಮಧ್ಯದಲ್ಲಿರುವ ನನ್ನಂಥವರಿಗೆ ಸಂಶೋಧನೆ ಸಾಧ್ಯವೇ ಎಂಬ ಅಳುಕು ಆರಂಭದಲ್ಲಿ ಕಾಡಿತು. ಆಗ ಆತ್ಮೀಯ ಭಾವನೆಯ, ಸರಳತೆಯ ಸಾಕಾರಮೂರ್ತಿಯಾದ ಡಾ. ವ್ಹಿ. ಎಸ್. ಮಾಳಿ ಗುರುಗಳು, "ಪ್ರಕಾಶ" ನೀನೂ ಸಂಶೋಧನಾ ಅಧ್ಯಯನ ಮಾಡಬಹುದು, ನಿನ್ನಲ್ಲಿ ಸಾಮರ್ಥ್ಯವಿದೆ ಎಂದು ಹುರುಪು ತುಂಬಿದರು. ಆ ಪ್ರೇರಣೆಯ ಫಲಿತವೇ ಈ ನಿಬಂಧ. ಮಾಳಿ ಗುರುಗಳು ತಮ್ಮ ಅನುಭವದ ಮೂಸೆಯಲ್ಲಿ, ನನ್ನನ್ನು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ರೂಪಿಸಿದ್ದು ಎಂದೂ ಮರೆಯಲಾಗದ ಒಂದು ನೆನಪು.

ಪಿ.ಎಚ್.ಡಿ. ಮಾಡುವ ಆಸೆ ಕೈಗೂಡದಿದ್ದರೂ ಕೂಡ ಎಂ.ಫಿಲ್. ಮಾಡುವ ಮೂಲಕ ಸಂಶೋಧನೆಯ ಒಂದು ಮೈಲುಗಳನ್ನು ದಾಟಿದ ನೆಮ್ಮದಿ ದೊರಕಿದೆ. ಬಿ.ಆರ್. ದರೂರ ಸಂಶೋಧನಾ ಕೇಂದ್ರ ನಿರ್ದೇಶಕರಾದ ಡಾ. ವ್ಹಿ. ಎಸ್. ಮಾಳಿಯವರ ಸೂಚನೆಯಂತೆ "ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನ" ಎಂಬ ವಿಷಯವನ್ನು ಆಯ್ದುಕೊಂಡು ಡಾ. ಸ್ಮಿತಾ ಪಿ. ಸುರೇಬಾನಕರ ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದೇನೆ.

ಮಾರ್ಗದರ್ಶಕರಾದ ಡಾ. ಸ್ಮಿತಾ ಪಿ. ಸುರೇಬಾನಕರ ಗುರುಮಾತೆಯವರು ನನ್ನ ಸಂಶೋಧನೆಯ ಎಲ್ಲಾ ಹಂತಗಳಲ್ಲೂ ಆತ್ಮೀಯವಾಗಿ ಸೂಕ್ತ ಸಲಹೆಗಳನ್ನಿತ್ತು ಸಮರ್ಥ ರೀತಿಯಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಸಂಶೋಧನಾ ಅಧ್ಯಯನ ಮುಗಿಯುವ ಹಂತದವರೆಗೂ ಸಲಹೆ ಸೂಚನೆ ನೀಡಿದ ಡಾ. ವ್ಹಿ. ಎಸ್. ಮಾಳಿ, ಡಾ. ಪಿ. ಬಿ. ಕೊರವಿ, ಪ್ರೊ. ಎಮ್. ಕೆ. ಬೀಳಗಿ ಮತ್ತು ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗಕ್ಕೂ ನನ್ನ ಅನಂತ ವಂದನೆಗಳು.

ಸಂಶೋಧನಾ ನಿಬಂಧ ರಚನೆಗೆ ಪ್ರೇರೆಪಿಸಿದ ಪೂಜ್ಯ ತಂದೆ-ತಾಯಿಗಳಿಗೆ ಹಾಗೂ ನನ್ನ ಸಹೋದರರಿಗೂ ಅನಂತ ವಂದನೆಗಳು. ವೃಷಬೇಂದ್ರ ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ಹಾಗೂ ಸಂಶೋಧನಾ ಕೇಂದ್ರದ ರೂವಾರಿ ಶ್ರೀ ಬಿ. ಆರ್. ದರೂರ ಅವರನ್ನು ಸದಾಕಾಲವು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ನನ್ನ ಸ್ನೇಹಿತರಾದ ಮುರಗೇಶ ಕೌಲಾಪೂರ ಅವರಿಗೆ ವಂದನೆಗಳು.

ಶ್ರೀ ಪ್ರಕಾಶ ಚನ್ನಪ್ಪ ಕಂಬಾರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ

• ಪರಿವಿಡಿ •

ಅಧ್ಯಾಯ – ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಪ್ರಪಂಚದ ಎಲ್ಲ ಕ್ಷೇತ್ರಗಳಲ್ಲಿ ಈಗಾಗಲೇ ಅನೇಕ ಪ್ರಕಾರ ಅಧ್ಯಯನ ಶಾಖೆಗಳು ಬೆಳಕನ್ನು ಕಂಡಿವೆ. ಬೆಳಕು ಕಾಣಬೇಕಾಗಿರುವ ಇನ್ನೂ ಹಲವು ಶಾಖೆಗಳು ಅಜ್ಞಾನವಾಗಿಯೇ ಉಳಿದುಕೊಂಡಿವೆ. ಅಂತಹ ಕ್ಷೇತ್ರಗಳಲ್ಲಿ "ಚಾರಿತ್ರಿಕ" ಅವಲೋಕನವು ಒಂದು. ಅಂದರೆ ಪ್ರತಿಯೊಂದು ಗ್ರಾಮವು **ನಿರ್ಮಾಣವಾಗುವುದರೊಂದಿಗೆ ಚಾರಿತ್ರಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಅರ್ಥೈಸಬೇಕಾಗಿದೆ.** ಇದು ಇಂದಿನ ಅಧ್ಯಯನದ ಸಂದರ್ಭದಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸವಾಗಿದೆ.

ಯಾವುದೇ ಒಂದು ಪ್ರದೇಶದ ಇತಿಹಾಸವನ್ನು ಅರಿಯಲು ಆ ಪ್ರದೇಶದಲ್ಲಿ ದೊರಕುವ ಎಲ್ಲ ಇತಿಹಾಸ ಮೂಲ ಆಕರಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲಿ ಶಾಸನಗಳು, ಸ್ಮಾರಕಗಳು, ಸಾಹಿತ್ಯಿಕ ಕೃತಿಗಳು ಮೊದಲಾದ ಮೂಲ ಆಕರಗಳನ್ನು ಅಧ್ಯಯಿನಿಸಿ ವಾಸ್ತವಿಕ ಸಂಗತಿಗಳನ್ನು ವಿವೇಚಿಸಬೇಕಾಗುತ್ತದೆ. ಇಂತಹ ಆಕರಗಳ ವೈಜ್ಞಾನಿಕ ಅಧ್ಯಯನದಿಂದ ಒಂದು ಪ್ರದೇಶದ ಇತಿಹಾಸವನ್ನು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

೧.೧ ಅಧ್ಯಯನದ ಸ್ವರೂಪ :

ಇತ್ತೀಚಿನ ದಿನಗಳಲ್ಲಿ ಜನತ್ತಿನಾದ್ಯಂತ ಕುತೂಹಲ ಕೆರಳಿಸುತ್ತಿರುವ ಅಧ್ಯಯನಗಳಲ್ಲಿ 'ಚಾರಿತ್ರಿಕ' ಅವಲೋಕನವು ಒಂದು ಗ್ರಾಮದ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ ಮೊದಲಾದ ಬೆಳೆದು ಬಂದಿರುವುದನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದರೊಂದಿಗೆ ಅದರ ಮಹತ್ವವನ್ನು ಗುರುತಿಸುವುದು ಇಲ್ಲಿ ಪ್ರಮುಖವಾಗಿದೆ.

ನಮ್ಮ ಚೆಲುವ ಕನ್ನಡ ನಾಡು ಸುಮಾರು ೨೦೦೦ ವರ್ಷಗಳಿಗೂ ಹೆಚ್ಚು ಕಾಲ ಐತಿಹಾಸಿಕ ಪರಂಪರೆಯನ್ನು ಒಳಗೊಂಡಿದೆ. ಈ ವೇಳೆಯಲ್ಲಿ ಕಲೆ ಮತ್ತು ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿಗಳು ವಿಫುಲವಾಗಿ ಬೆಳೆದು ಈ ನಾಡಿನ ಇತಿಹಾಸವನ್ನು ಭವ್ಯವಾಗಿ ಬೆಳೆಸಿವೆ. ನಾವು ಒಂದು ನಾಡಿನ ನಾಗರಿಕತೆಯನ್ನು ತಿಳಿಯಲು ಅದರ ಕಲಾ ಪರಂಪರೆಯ ಸ್ವರೂಪವನ್ನು ನೋಡಬಹುದಾಗಿದೆ. ವಾಸ್ತುಶಿಲ್ಪ ಇವು ಕುಶಲಕಲೆಯಾಗಿದ್ದು ಪ್ರಾಚೀನ ಇತಿಹಾಸದ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತವೆ. ಪ್ರತಿಯೊಂದು ವಾಸ್ತುಶಿಲ್ಪವು ಉದ್ದೇಶಿತ ಪ್ರತಿಬಿಂಬಗಳ ಸೃಷ್ಟಿಯಾಗಿವೆ. ಇವು

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪ್ರಾಚೀನ ಜನವಸತಿ ನೆಲೆಗಳು ಕುರಿತು ಹಾಗೂ ಸ್ಮಾರಕಗಳಾದ ದೇವಾಲಯಗಳು, ಮಠಗಳು ಕುರಿತು ಮುಂತಾದವುಗಳ ಸ್ವರೂಪದಲ್ಲಿ ನಿರ್ಮಿತಗೊಂಡಿದೆ. ಇವೆಲ್ಲವುಗಳ ಅಧ್ಯಯನದಿಂದ ಒಂದು ಸ್ಥಳದ ಅಧ್ಯಯನ ಒಂದು ಸ್ಥಳದ ಪ್ರಾಚೀನತೆಯನ್ನು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮೊದಲಾದ ಸ್ಥಿತಿಗತಿಗಳನ್ನು ತಿಳಿಯಬಹುದಾಗಿದೆ.

೧.೨ ಉದ್ದೇಶ :

ನಮ್ಮ ಬೆಳಗಾವಿ ಜಿಲ್ಲೆಯು ಭವ್ಯ ಪರಂಪರೆ ಹಾಗೂ ಇತಿಹಾಸವನ್ನು ಹೊಂದಿರುವ ನಾಡಾಗಿದೆ. ಬೆಳಗಾವಿಯು ಶಾತವಾಹನರ ಆಡಳಿತಕ್ಕೆ ಒಳಪಟ್ಟಿತ್ತೆಂಬುದು ೧೯೬೫ ರಲ್ಲಿ ವಂಡಗಾಂವ – ಮಾಧವಪುರದಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ ನಾಣ್ಯಗಳಿಂದ ತಿಳಿದುಬರುತ್ತದೆ. ಆ ನಾಣ್ಯಗಳು ಶ್ರೀ ಶಾತಕರ್ಣಿ, ವಶಿಷ್ಠ ಪುತ್ರ ಪುಳಮಾಯಿ ಮೊದಲಾದವರ ನಾಣ್ಯಗಳಾಗಿವೆ. ಕದಂಬರ ಕಾಲದಲ್ಲಿ ಅವರ ಆಡಳಿತಕ್ಕೆ ಒಳಪಟ್ಟಿದ್ದು ಇವರ ಕಾಲದಲ್ಲಿ ಈ ಜಿಲ್ಲೆಯ ಹಲಸಿಯು (ಖಾನಾಪೂರ ತಾಲೂಕ) ಅವರ ಎರಡನೇ ರಾಜಧಾನಿಯಾಗಿತ್ತು. ಎಕ್ಕೇರಿ ಮತ್ತು ಗೊಡಚಿ ಶಾಸನ ಹಾಗೂ ಹೂಲಿಯ (ಸವದತ್ತಿ ತಾಲೂಕು) ತಾಮ್ರಪಟ ಶಾಸನಗಳು, ಬದಾಮಿ ಚಾಳುಕ್ಯರು ಈ ಪ್ರದೇಶವನ್ನು ಆಳ್ವಿಕೆ ಮಾಡಿದರ ಬಗ್ಗೆ ಬೆಳಕು ಚೆಲ್ಲುತ್ತವೆ. ಅಲ್ಲದೇ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದ ರಟ್ಟರು ಈ ಪ್ರದೇಶವನ್ನು ಆಳಿದರು. ಸವದತ್ತಿಯು ಇದರ ರಾಜಧಾನಿಯಾಗಿದ್ದರಿಂದ ಇವರನ್ನು ಸವದತ್ತಿಯ ರಟ್ಟರೆಂದು ಕರೆಯಲಾಗಿದೆ. ಈ ಜಿಲ್ಲೆಯನ್ನು ಪ್ರಮುಖವಾಗಿ ಆಳಿದವರು ಕಲ್ಯಾಣದ ಚಾಳುಕ್ಯರು. ಈ ಜಿಲ್ಲೆಯು ಎಲ್ಲ ಕಡೆಗಳಲ್ಲಿ ಕಲ್ಯಾಣದ ಚಾಳುಕ್ಯರು ಹಾಗೂ ಸವದತ್ತಿಯ ರಟ್ಟರು ನಿರ್ಮಿಸಿದ ದೇವಾಲಯಗಳಲ್ಲಿ ದೊರೆಯುತ್ತವೆ.

ಉದಾ : ಸೊಗಲದ ಸೋಮೇಶ್ವರ ದೇವಾಲಯ, ರಾಯಬಾಗದ ಸೋಮನಾಥ ದೇವಾಲಯ, ಸಂಕೇಶ್ವರದ ಶಂಕರಲಿಂಗ ದೇವಾಸ್ಥಾನ, ರಾಯಬಾಗದ ಸಿದ್ಧೇಶ್ವರ ದೇವಾಲಯ ಮುಂತಾದವುಗಳು.

ನಮ್ಮ ಜಿಲ್ಲೆಯು ದೆಹಲಿ ಸುಲ್ತಾನರು, ಬಹುಮನಿ ಸುಲ್ತಾನರು, ವಿಜಯನಗರದ ಅರಸರು, ಆದಿಲಷಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಸಂಗೊಳ್ಳಿರಾಯಣ್ಣ, ಬೆಳವಡಿ ಮಲ್ಲಮ್ಮ, ಕಿತ್ತೂರ ರಾಣಿ ಚೆನ್ನಮ್ಮ ಮೊದಲಾದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಪಾತ್ರಗಳು ಈ ಜಿಲ್ಲೆಯಲ್ಲಿ ಇತಿಹಾಸವನ್ನು ವೈಭವಿಕರಿಸಿವೆ.

ಬೆಳಗಾವಿಯಲ್ಲಿ ೧೯೨೪ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ದೇಶದ ಇತಿಹಾಸದಲ್ಲಿಯೇ ಮಹತ್ವದಾಗಿದೆ. ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಭಾಗವಹಿಸಿದ ಪ್ರಥಮ ಹಾಗೂ ಕೊನೆಯ ಅಧಿವೇಶನ ಇದಾಗಿದೆ. ಈ ಅಧಿವೇಶನದಲ್ಲಿ ಆಲೂರು ವೆಂಕಟರಾಯರು, ಮುದವಿಡು ಕೃಷ್ಣರಾಯರು, ಹುಯಿಲಗೋಳ ನಾರಾಯಣರು, ಗಂಗಾಧರರಾವ ದೇಶಪಾಂಡೆಯವರು ಮೊದಲಾದವರು

[illegible]

ಇದರಲ್ಲಿ ಭಾಗವಹಿಸಿದರು. ಇದೇ ವೇಳೆಯಲ್ಲಿ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಾಕಷ್ಟು ಜನರು ಸಾಕಷ್ಟು ಸಂಖ್ಯೆಯಲ್ಲಿ ಸೇರಿ ಮಹತ್ವದ ಪಾತ್ರವಹಿಸಿದರು. ಅದರೊಂದಿಗೆ ಅಧಿವೇಶನದಲ್ಲಿ **"ಉದಯುವಾಗಲಿ ನಮ್ಮ ಚೆಲುವ ಕನ್ನಡ ನಾಡು"** ಎಂಬ ಗೀತೆಯನ್ನು ಹುಯಿಲಗೋಳ ನಾರಾಯಣರವರು ಹಾಡಿ ಐತಿಹಾಸಿಕತೆಯನ್ನು ಮೆರೆದಿರುವರು.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕವು ಪ್ರಾಚೀನ ಕಾಲದಿಂದಲೂ ವೈಭವವನ್ನು ಒಳಗೊಂಡಿದೆ. ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ದೆಹಲಿ ಮೊಗಲರು, ಬದಾಮಿ ಚಾಳುಕ್ಯರು, ರಾಷ್ಟ್ರಕೂಟರು, ವಿಜಾಪೂರದ ಆದಿಲ್‌ಷಾಹಿಗಳು, ವಿಜಯನಗರದ ಅರಸರು, ಮರಾಠರು ಅಧೀನದಲ್ಲಿ ಅನೇಕ ಐತಿಹಾಸಿಕ ಸ್ಥಿತ್ಯಂತರ ಕಂಡಿದೆ. ಕಂಕಣೂರು ಈಗಿನ ಕಂಕಣವಾಡಿ ಕೇಂದ್ರವಾಗಿಯೂ ಕ್ರಿ.ಶ. ೯೩೦ ರಿಂದ ೧೨೫೦ ರವರೆಗೆ ರಟ್ಟರ ಉಪರಾಜಧಾನಿಯಾಗಿಯೂ ಸರ್ವಧರ್ಮ ಸಮನ್ವಯದ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ವ್ಯಾಪಾರಿ ಕೇಂದ್ರವಾಗಿ ಮೆರೆದಿವೆ. ಇಲ್ಲಿ ಕಂಡು ಬರುವ ಶಿಲಾಶಾಸನಗಳು, ವಿವಗಲ್ಲುಗಳು, ದೇವಾಲಯಗಳು ರಾಯಬಾಗದ ಇತಿಹಾಸವನ್ನೇ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ.

ರಾಯಬಾಗ ತಾಲೂಕಿನ ಗ್ರಾಮಗಳಲ್ಲಿ ಒಂದಾದ ಮತ್ತು ಪ್ರಸ್ತುತ ಪ್ರಬಂಧದ ಕೇಂದ್ರ ವಿಷಯವಾದ ಮುಗಳಖೋಡವು ಐತಿಹಾಸಿಕ ಪ್ರಾಮುಖ್ಯತೆಯನ್ನು ಒಳಗೊಂಡಿರುತ್ತದೆ. ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ತನ್ನ ವಿಶೇಷತೆಯನ್ನು ಬೆಳೆಸಿಕೊಂಡು ಬಂದಿದೆ. ಈ ಗ್ರಾಮವು ರಾಯಬಾಗದಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೫ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಐತಿಹಾಸಿಕ ಪುಣ್ಯಕ್ಷೇತ್ರವಾಗಿದೆ. ಈ ಭಾಗದ ಕೃಷಿಕರಿಗೆ ಘಟಪ್ರಭಾ ನದಿಯ ವರದಿಂದ ಕಾಲುವೆಗಳು ವರದಾನವಾಗಿದೆ. ಇಲ್ಲಿ ನೈರುತ್ಯ ಮಾನಸೂನ ಮಳೆಗಳು ಕೂಡಾ ಬೀಳುತ್ತದೆ. ಅದರೊಂದಿಗೆ ಭೌಗೋಳಿಕವಾಗಿ ಫಲವತ್ತಾದ ಭೂಮಿಗಳನ್ನು ಒಳಗೊಂಡಿದೆ.

ಮುಗಳಖೋಡವು ವಿಶೇಷವಾಗಿ ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು ಹಾಗೂ ಕಲ್ಯಾಣದ ಕಲಚೂರರಿಗೆ ಮಾಂಡಲಿಕರಾಗಿ ಮತ್ತು ಕೆಲಕಾಲ ಸ್ವತಂತ್ರವಾಗಿ ಸುಮಾರು ೩೦೦ ವರ್ಷಗಳ ಕಾಲ ಅಂದರೆ ೯೩೦ ರಿಂದ ೧೨೩೦ ರವರೆಗೆ ಕೂಹೂಂಡಿ ಮೂಸಾಸಿರ ೩೦೦೦ ಮಂಡಲವನ್ನು ಸವದತ್ತಿಯ ರಟ್ಟರು, ಮರಾಠರು ಹಾಗೂ ಪೇಶ್ವೆಯವರ ಆಳ್ವಿಕೆಗೆ ಒಳಪಟ್ಟಿರುವುದು. ಸಾಂಸ್ಕೃತಿಕವಾಗಿ ಎಲ್ಲ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ, ಸಾಹಿತ್ಯಿಕ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮತ್ತು ಸುಧಾರಣೆಗಳನ್ನು ಕೈಗೊಂಡಿರುವ ವಿಷಯವನ್ನು ತಿಳಿಸಲಾಗಿದೆ. ಇಲ್ಲಿ ವಿವಿಧ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟು ಸರ್ವಧರ್ಮಗಳ ಸಹಿಷ್ಣುತೆಯನ್ನು ತಿಳಿಸುವ ಉದ್ದೇಶವಾಗಿದೆ. ಅವರ ಕಾಲದಲ್ಲಿನ ಸಾಧನೆಗಳನ್ನು ವರ್ಣಿಸಿ ಹಿರಿಮೆಯನ್ನೇ ವ್ಯಕ್ತಗೊಳಿಸಲಾಗಿದೆ. ಅನುವಂಶಿಯ ಅರಸೊತ್ತಿಗೆ ಹಾಗೂ ಅವರ ಸೈನಿಕ ಕಾರ್ಯಾಚರಣೆಗಳ ಚರಿತ್ರೆಯನ್ನು ತಿಳಿಸುವಲ್ಲಿ ಈ ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶವಾಗಿರುತ್ತದೆ.

"**ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನ**" ಈ ಪ್ರಬಂಧವು ಒಂದು ಪ್ರದೇಶದ ಭೌಗೋಳಿಕತೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವುದಾಗಿದೆ. ಭೌಗೋಳಿಕವಾಗಿ ಒಂದು ನೆಲೆಯ ಅಥವಾ ಪ್ರದೇಶದ ವಾಸ್ತವಿಕ ಅಂಶಗಳನ್ನು ತಿಳಿಯಲು ಅಲ್ಲಿನ ಪುರಾವೆಗಳು ಮುಖ್ಯ ಆಕರಗಳಾಗಿವೆ. ವ್ಯವಸಾಯ, ವ್ಯಾಪಾರ ಮತ್ತು ವಾಣಿಜ್ಯ ಇವುಗಳ ಆಧಾರವಾಗಿ ವಿಶ್ಲೇಷಣೆಯನ್ನು ಪಡೆದು ಮುಗಳಖೋಡವು ಯಾವ ಮಟ್ಟದಲ್ಲಿ ವ್ಯವಹಾರ ಹೊಂದಿದೆ ಎಂಬುದಾಗಿ ತಿಳಿಯುತ್ತದೆ. ನೈಸರ್ಗಿಕವಾಗಿ ಸಂಪತ್ಭರಿತ ನಿಸರ್ಗ ಸೌಂದರ್ಯದಿಂದ ಕೂಡಿದ ಪ್ರದೇಶವಾಗಿದೆ. ಈ ಗ್ರಾಮವು ರಾಯಬಾಗ ತಾಲೂಕಿನ ಆಗ್ನೇಯ ಭಾಗದಲ್ಲಿದೆ. ಇದು ಜತ್ತ-ಜಾಂಬೋಟಿ ಮುಖ್ಯ ರಸ್ತೆಯ ಬದಿಯಲ್ಲಿ ಬೆಳೆದು ನಿಂತಿರುವುದನ್ನು ಕಾಣಬಹುದಾಗಿದೆ. ಘಟಪ್ರಭೆ ಎಡದಂಡೆ ಕಾಲುವೆಗಳನ್ನು ಹೊಂದಿ ಇತರ ಹೊರರಾಜ್ಯಗಳ ವ್ಯಾಪಾರ ಸಂಪರ್ಕವನ್ನು ಕೂಡಾ ಹೊಂದಿದೆ.

ಮುಗಳಖೋಡದಲ್ಲಿ ಪ್ರಾಚೀನ ಕಾಲದಲ್ಲಿ ಕಲ್ಯಾಣದ ಚಾಳುಕ್ಯರು, ಸವದತ್ತಿ ರಟ್ಟರು, ದೆಹಲಿಯ ಮೊಘಲರು, ಮರಾಠರು ಮತ್ತು ಪೇಶ್ವೆಯವರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಇವರೆಲ್ಲರ ಆಳ್ವಿಕೆಯಲ್ಲಿ ಈ ಭಾಗವು ವಿಶೇಷ ಅಸ್ತಿತ್ವವನ್ನು ಪಡೆದಿರುವುದನ್ನು ಶಾಸನಗಳಲ್ಲಿ ತಿಳಿಸುವುದಾಗಿದೆ. ವಿಭಿನ್ನ ಅರಸರ ಆಳ್ವಿಕೆಯಿಂದ ಐತಿಹಾಸಿಕವಾಗಿ ಕಟ್ಟಡಗಳನ್ನು ಒಳಗೊಂಡಿದೆ. ಶೈವ, ವೈಷ್ಣವ, ಜೈನ ಹಾಗೂ ಇಸ್ಲಾಂ ಧರ್ಮಿಯರು ತಮ್ಮ ಪ್ರಭಾವವನ್ನು ಈ ಭಾಗದಲ್ಲಿ ಪ್ರಚಾರಗೊಂಡಿರುವುದು ತಿಳಿದುಬರುತ್ತದೆ. ಈ ಅಧ್ಯಯನದಲ್ಲಿ ಇವುಗಳನ್ನೆಲ್ಲ ಕುರಿತು ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ಹಲವಾರು ರಾಜಮನೆತನಗಳ ಆಳ್ವಿಕೆಯಲ್ಲಿ ಮುಗಳಖೋಡವು ಸಾಂಸ್ಕೃತಿಕವಾಗಿ ಬೆಳೆದು ಬಂದಿರುವುದು ಕಂಡುಬರುತ್ತದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಕಲೆ ಮತ್ತು ವಾಸ್ತುಶಿಲ್ಪದಿಂದ ಅವರ ಸ್ಪಷ್ಟ ಚಿತ್ರಣಗಳನ್ನು ತಿಳಿಯಪಡಿಸುವದಾಗಿದೆ. ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುವ ಕಲೆ ಮತ್ತು ವಾಸ್ತುಶಿಲ್ಪವನ್ನು ಅಧ್ಯಯನ ಮಾಡಲಾಗಿದೆ. ಕಲ್ಯಾಣದ ಚಾಳುಕ್ಯರು ಮತ್ತು ರಟ್ಟರ ಆಳ್ವಿಕೆಯಲ್ಲಿ ಹೀಗೆ ಹಲವಾರು ಸ್ಮಾರಕಗಳು ವಿಶೇಷತೆಯನ್ನು ಪಡೆದುಕೊಂಡಿದೆ. ಹೀಗೆ ಈ ಅಧ್ಯಯನದಲ್ಲಿ ಮುಗಳಖೋಡದ ಐತಿಹಾಸಿಕ ಹಿನ್ನಲೆಯನ್ನು ಅನುಸರಿಸಿ ಸಮಗ್ರ ಚಿತ್ರಣವನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ.

ಮುಗಳಖೋಡ ಗ್ರಾಮವು ರಾಷ್ಟ್ರೀಯ ಹೋರಾಟದಲ್ಲಿ ಪಾತ್ರವನ್ನು ನಿರ್ವಹಿಸುವಂತದನ್ನು ಕಾಣಬಹುದಾಗಿದೆ. ಶ್ರೀ ನಾರಾಯಣ ಭೀಮಜೀ ಕುಲಕರ್ಣಿ ಹಾಗೂ ಶ್ರೀ ಗಿರಮಲ್ಲ ಯಡವಣ್ಣಾವರ ಈ ಮಹನೀಯರು ಸ್ವಾತಂತ್ರ್ಯ ಹೋರಾಟಗಾರರಾಗಿರುವವರು ಇವರು ರಾಷ್ಟ್ರೀಯ ಚಳುವಳಿಯಲ್ಲಿ

[illegible]

ಭಾಗವಹಿಸಿ ಬ್ರಿಟಿಷರ ಬಂಧನಕ್ಕೊಳಗಾಗಿ ಜೈಲುವಾಸ ಮತ್ತು ಕಠಿಣ ಶಿಕ್ಷೆಗಳನ್ನು ಅನುಭವಿಸಿದವರು.

ಮುಗಳಖೋಡದಲ್ಲಿ ಹಿಂದೂ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ನಿರ್ಮಾಣಗೊಂಡಿರುವುದು. ಇಲ್ಲಿ ದಾನದತ್ತಿ ನೀಡಿದ ವಿಷಯಗಳನ್ನು ತಿಳಿಸುವ ಶಾಸನಗಳು ದೊರೆಯುವುದು ವಿರಳವಾಗಿದೆ. ಆದರೂ ದೇವಾಲಯಗಳನ್ನು ವಿವರಿಸುವ, ಅರ್ಥೈಸುವ ಸಂದರ್ಭದಲ್ಲಿ ಹಲವಾರು ಗ್ರಂಥಗಳ ಸಹಾಯವನ್ನು ಪಡೆಯಲಾಗಿದೆ. ಅವುಗಳಲ್ಲಿ ಕೆಲವುಗಳನ್ನು ಈ ಕೆಳಗೆ ಸೂಚಿಸಲಾಗಿದೆ. –

೧) ಡಾ. ಸೂರ್ಯನಾಥ ಕಾಮತರ – ಬೆಳಗಾವಿ ಡಿಸ್ಟ್ರೀಕ್ ಗೆಝೆಟಿಯರ್. ೧೯೮೭.
೨) ಡಾ. ಶಿ. ಬಾ. ಪಾಟೀಲ – ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ೧೯೯೫.

ಈ ಸಂಪ್ರಬಂಧ ರಚನೆಯ ಅವಧಿಯಲ್ಲಿ ಈ ಗ್ರಂಥಗಳ ಸಹಾಯವನ್ನು ಪಡೆಯುವುದಲ್ಲದೇ ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಭ್ಯಸಿಸಿರುವ ವಿಷಯಗಳನ್ನ ಸಹ ಬಳಸಿಕೊಳ್ಳಲಾಗಿದೆ.

೧.೩ ವ್ಯಾಪ್ತಿ :

ಯಾವುದೇ ಒಂದು ವಿಷಯದ ವ್ಯಾಪ್ತಿ ಎಂದರೆ, ಆ ಕ್ಷೇತ್ರದ ವೈಶಾಲ್ಯತೆ, ಹರವು ಅಧ್ಯಯನದ ಸೀಮಾರೇಖೆ ಎಂದರ್ಥ. ಈ ಅಧ್ಯಯನದ ವ್ಯಾಪ್ತಿಯು ಸ್ಪಷ್ಟವಾಗಿ ಮತ್ತು ಒಂದು ಮಿತಿಗೊಳಪಟ್ಟಿದೆ. ಸ್ಪಷ್ಟತೆ ಹಾಗೂ ನಿಖರತೆಯನ್ನು ಅಭ್ಯಸಿಸಲಾಗಿದೆ. ಮುಗಳಖೋಡದ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಗ್ರ ಚಿತ್ರಣವನ್ನು ಆಧಾರಗಳ ಮೂಲಕವಾಗಿ ವಿಶ್ಲೇಷಿಸಲಾಗಿದೆ. ಐತಿಹಾಸಿಕವಾಗಿ ಈ ಪ್ರದೇಶವು ಪ್ರಾಚೀನ ಭವ್ಯತೆಯನ್ನು ಒಳಗೊಂಡಿರುವುದು. ವಿವಿಧ ಅನೇಕ ರಾಜಮನೆತನಗಳ ಚರಿತ್ರೆಯಿಂದ ಸಾಂಸ್ಕೃತಿಕ ಬೆಳವಣಿಗೆಯಾಗಿರುವುದು ಕಂಡುಬರುತ್ತದೆ.

ಈ ಸಂಪ್ರಬಂಧ ರಚನೆಯ ಸಂದರ್ಭದಲ್ಲಿ ಅನೇಕ ಗ್ರಂಥಗಳ ಸಹಾಯವನ್ನು ಪಡೆದಿರುವುದಲ್ಲದೇ ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಭ್ಯಸಿಸಿರುವ ಅನೇಕ ವಿಷಯಗಳನ್ನು ಸಹ ಬಳಸಿಕೊಳ್ಳಲಾಗಿರುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಈ ಸಂಪ್ರಬಂಧದಲ್ಲಿ ಏಳು ಅಧ್ಯಯನಗಳನ್ನು ವಿಂಗಡಿಸಲಾಗಿದೆ. ಅವುಗಳು ಈ ಕೆಳಗಿನಂತೆ ಇವೆ.

ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿಗಳನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮುಗಳಖೋಡದ ಭೌಗೋಳಿಕ ಪ್ರದೇಶದ ಚಿತ್ರಣವನ್ನು ಹಾಗೂ ಚಾರಿತ್ರಿಕ ಹಿನ್ನಲೆಯನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸವದತ್ತಿಯ ರಟ್ಟರು, ಕಲ್ಯಾಣದ ಚಾಳುಕ್ಯರು, ಮರಾಠರು ಮತ್ತು ಪೇಶ್ವೆಯವರ ಆಳ್ವಿಕೆಯ ವಿವರಣೆಯನ್ನು ಒಳಗೊಂಡಿರುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಮುಗಳಖೋಡದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ನಾರಾಯಣ **ಭೀಮಾಜಿ ಕುಲಕರ್ಣಿ** ಮತ್ತು ಶ್ರೀ ಗೀರಮಲ್ಲ ಯಡವನ್ನವರ ವಿವರಣೆಯನ್ನು ಒಳಗೊಂಡಿರುತ್ತದೆ.

ಐದನೆಯ ಅಧ್ಯಾಯದಲ್ಲಿ ಮುಗಳಖೋಡದ ಸಾಂಸ್ಕೃತಿಕ ಪರಿಸರವನ್ನು ಒಳಗೊಂಡಿದೆ. ಇದರಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿವರಣೆಗಳನ್ನು ಒಳಗೊಂಡಿದೆ.

ಆರನೆಯ ಅಧ್ಯಾಯದಲ್ಲಿ ಮುಗಳಖೋಡದ ಕಲೆ ಮತ್ತು ವಾಸ್ತುಶಿಲ್ಪದ ಕುರಿತು ವಿವರಣೆ ಒಳಗೊಂಡಿದೆ. ಈ ಅಧ್ಯಾಯದಲ್ಲಿ ದೇವಾಲಯಗಳು, ಮಠಗಳು, ಬಸದಿಗಳು, ವೀರಗಲ್ಲುಗಳ ಕುರಿತು ವಿವರಣೆಯನ್ನು ಒಳಗೊಂಡಿದೆ.

ಏಳನೆಯ ಅಧ್ಯಾಯದಲ್ಲಿ ಸಂಪ್ರಬಂಧದ ಕುರಿತು ಆಗಿರುವ ವಿಷಯವನ್ನೇ ಆಳವಾಗಿ ಅಧ್ಯಯನಿಸಿ ಸಾಧ್ಯವಾದಷ್ಟು ವಿವರಣೆಯನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ **"ಮುಗಳಖೋಡದ : ಒಂದು ಚಾರಿತ್ರಿಕ ಅವಲೋಕನ"** ಎಂಬ ಸಂಪ್ರಬಂಧ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವ ದೃಷ್ಟಿಯಿಂದ ಅನೇಕ ಶಾಸನಗಳು, ವಾಸ್ತುಶಿಲ್ಪಗಳು, ಸ್ಮಾರಕಗಳು, ಗ್ರಂಥಗಳು ಮತ್ತು ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಭ್ಯಸಿಸಿದ ಸಂಗ್ರಹಿಸಿದ ವಿಷಯಗಳ ವಿವರಣೆಯನ್ನು ನೀಡಿವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಅಧ್ಯಾಯ - ೨

ಮುಗಳಖೋಡದ ಪರಿಚಯ

ಅಧ್ಯಾಯ – ೨

ಮುಗಳಖೋಡದ ಪರಿಚಯ

ಕನ್ನಡನಾಡಿನ ಇತಿಹಾಸ ಹಾಗೂ ಸಂಸ್ಕೃತಿಯನ್ನು ಹೊಂದಿದ್ದು, ಭಾರತದ ಚರಿತ್ರೆಯಲ್ಲಿ ತಮ್ಮದೇ ಆದ ವಿಶಿಷ್ಟತೆಯಿಂದ ಸ್ಥಾನವನ್ನು ಪಡೆದುಕೊಂಡಿದೆ. ಒಂದು ಪ್ರದೇಶದ ಚರಿತ್ರೆ ಹಾಗೂ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅಲ್ಲಿನ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಯಾವುದೇ ಒಂದು ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ವಿಭಾಗಗಳನ್ನಾಗಿ ವಿಂಗಡಿಸುವ ಸಮಯದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ನೈಸರ್ಗಿಕ ಅಂಶಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಹಾಗಾಗಿ ಇಲ್ಲಿ ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಪರಸ್ಪರ ನಿಕಟ ಸಂಬಂಧ ಹೊಂದಿರುವುದು ತಿಳಿಯುತ್ತದೆ. ಭೌಗೋಳಿಕ ವೈಶಿಷ್ಟ್ಯಗಳನ್ನು ಮರೆತು ಇತಿಹಾಸವನ್ನು ಸೃಷ್ಟಿಸಲು ಪ್ರಾರಂಭಿಸಿದರೆ ಇತಿಹಾಸವು ರೂಪುಗೊಳ್ಳುವ ಒಂದು ಪ್ರಧಾನ ನೆಲೆಯನ್ನೇ ಉಪೇಕ್ಷಿಸಿದಂತಾಗುತ್ತದೆ.

ಇತಿಹಾಸವನ್ನು ಹೊಂದಿರುವ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಬೆಳಗಾವಿಯು ಕೂಡಾ ಒಂದು. ಇದು ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡು ಇತಿಹಾಸದ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಈ ಜಿಲ್ಲೆಯ ತಾಲೂಕುಗಳಲ್ಲಿ ಕುಂತಣಬಾಗಿ, (ಪೂವಿನಬಾಗಿ) ಅಂದರೆ ರಾಯಬಾಗ ಕೂಡ ಒಂದು. ಇದು ಬೆಳಗಾವಿ ಜಿಲ್ಲೆಯ ಉತ್ತರ ಭಾಗದಲ್ಲಿ ಸ್ಥಾನೀಕರಣ ಹೊಂದಿದ್ದು ೧೬° ೨೧' ಉತ್ತರ ಅಕ್ಷಾಂಶದಿಂದ ೧೬° ೪೨' ಉತ್ತರ ಅಕ್ಷಾಂಶ ಹಾಗೂ ೭೪° ೪೨' ಪೂರ್ವ ರೇಖಾಂಶದಿಂದ ೭೫° ೦೫' ಪೂರ್ವ ರೇಖಾಂಶಗಳ ಮಧ್ಯದಲ್ಲಿ ಹರಡಿದೆ. ಸಮುದ್ರಮಟ್ಟದಿಂದ ಸರಾಸರಿ ೪೫೦ ರಿಂದ ೯೦೦ ಮೀಟರ ಎತ್ತರವಿದೆ. ಇದು ಸಮಶೀತೋಷ್ಣ ವಾತಾವರಣದಿಂದ ಕೂಡಿದ ಪ್ರದೇಶವಾಗಿದೆ[1].

ಸಹಜವಾದ ನಿಸರ್ಗ ಸೌಂದರ್ಯದಿಂದ ಕೂಡಿರುವ ರಾಯಬಾಗ ತಾಲೂಕಿನ ಪ್ರಮುಖ ಸ್ಥಳಗಳಲ್ಲಿ ಒಂದಾದ ಸುಕ್ಷೇತ್ರ ಮುಗಳಖೋಡವು ರಾಯಬಾಗದಿಂದ ಪೂರ್ವಭಾಗದಲ್ಲಿದೆ. (ಆಗ್ನೇಯ ದಿಕ್ಕಿನಲ್ಲಿ ನೆಲೆಗೊಂಡಿದೆ). ಈ ಮೇಲಿನ ಅಕ್ಷಾಂಶ ಮತ್ತು ರೇಖಾಂಶಗಳ ಮಧ್ಯದಲ್ಲಿ ಮುಗಳಖೋಡವು ಸ್ಥಾನೀಕರಣಗೊಂಡಿದೆ.

[illegible]

ರಾಯಬಾಗದ ಪ್ರಾಚೀನತೆಯನ್ನು ತಿಳಿದುಕೊಳ್ಳುವುದಾದರೆ ಕ್ರಿ.ಶ. ೧೧೮೫ರ ಹನ್ನಿಕೇರಿ ಶಾಸನದಲ್ಲಿ[೨] '**ತೆಂಕಲುಬಾಗಿ**' ಎಂದು ಕರೆಯಲಾಗಿದೆ. ಅದೇ ಶಾಸನದ ಮತ್ತೊಂದು ಕಡೆ '**ಪೂವಿನಬಾಗ**' ಪೂವಿನಬಾಗ > ಪೂವಿನಬಾಗಿ ಇಲ್ಲವೇ ಭಾಗ > ಬಾಗಿ ಎಂಬುದಾಗಿ ತಿಳಿದುಬರುತ್ತದೆ. ಇಂತಹ ಭಾಗದ ಒಂದು ಪ್ರದೇಶ ಈ ಮುಗಳಖೋಡ ಗ್ರಾಮ ಎಂದು ಹೇಳಲಾಗಿದೆ.

೨.೧ ಭೌಗೋಳಿಕ ಪರಿಸರ :

೧) ವಿಸ್ತೀರ್ಣ ಮತ್ತು ವ್ಯಾಪ್ತಿ :

ಮುಗಳಖೋಡ ಗ್ರಾಮವು ಒಟ್ಟು ೧೨,೮೬೩.೧೦ ಚ.ಮೀ.ವಿಸ್ತೀರ್ಣ ಹೊಂದಿದ್ದು, ಇದು ಕುಂತಣಬಾಗಿಯ ಆಗ್ನೇಯ ದಿಕ್ಕಿನಲ್ಲಿದೆ. ಇದು ಸಮುದ್ರ ಮಟ್ಟದಿಂದ ೨೭೩೫ ಅಡಿಗಳಷ್ಟು ಎತ್ತರವಾಗಿದ್ದು, ಪೂರ್ವ, ಪಶ್ಚಿಮ ಮತ್ತು ದಕ್ಷಿಣೋತ್ತರವಾಗಿ ತನ್ನ ವಿಸ್ತಾರವನ್ನು ಹೊಂದಿದೆ. ಈ ಗ್ರಾಮದ ಮೇರೆಗಳೆಂದರೆ –

ಮುಗಳಖೋಡದ	**ಉತ್ತರಕ್ಕೆ**	–	**ಹಾರೂಗೇರಿ**
	ದಕ್ಷಿಣಕ್ಕೆ	–	**ಹಳ್ಳೂರ**
	ಪೂರ್ವಕ್ಕೆ	–	**ಪಾಲಭಾಂವಿ**
	ಪಶ್ಚಿಮಕ್ಕೆ	–	**ಖಣದಾಳ**
	ವಾಯುವ್ಯಕ್ಕೆ	–	**ಹಿಡಕಲ್ಲ**
	ಈಶಾನ್ಯಕ್ಕೆ	–	**ಸಸಾಲಟ್ಟಿ**
	ಆಗ್ನೇಯಕ್ಕೆ	–	**ಕಪ್ಪಲಗುದ್ದಿ**
	ನೈರುತ್ಯಕ್ಕೆ	–	**ಗುರ್ಲಾಪೂರ**

ಈ ಮೇಲಿನ ಅಂಶಗಳ ಮೂಲಕ ಈ ಪ್ರದೇಶದ ವ್ಯಾಪ್ತಿಯನ್ನು ತಿಳಿಯಬಹುದಾಗಿದೆ.

೨) ಜನಸಂಖ್ಯೆ :

ಮುಗಳಖೋಡ ಗ್ರಾಮದ ಜನಸಂಖ್ಯೆಯು ೨೦೧೧ ರ ಜನಗಣತಿಯ ಪ್ರಕಾರ ಪುರುಷರು ೧೮೧೧೮ ಮಹಿಳೆಯರು ೧೬೩೯೨ ಇದ್ದು, ಒಟ್ಟು ೩೪೫೧೦ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮವು ಸುಮಾರು ೫೪೬೮ ಮನೆಗಳನ್ನು ಹೊಂದಿದೆ. ರಾಯಬಾಗವು (ಕುಂತಣಬಾಗಿ) ತಾಲೂಕಾ ಕೇಂದ್ರವಾಗಿ ಕುಡಚಿ ಹೋಬಳಿಗಳಲ್ಲಿ ಒಂದಾಗಿದೆ.

೩) **ಹವಾಗುಣ ಮತ್ತು ಮಳೆ ಪ್ರಮಾಣ :**

ಮುಗಳಖೋಡ ಗ್ರಾಮವು ಬೇಸಿಗೆಯ ಕಾಲಾವಧಿಯ ಉಷ್ಣತೆಯ ಪ್ರಮಾಣವು ೪೦ ರಿಂದ ೪೫° ಸೆಂಟಿಗ್ರೇಡ್‌ವರೆಗೆ ಇದ್ದು, ನಂತರ ಪಶ್ಚಿಮದ ಕಡೆಗೆ ಸರಿದಂತೆ ಉಷ್ಣತೆ ಕಡಿಮೆಯಾಗುತ್ತದೆ. ಡಿಸೆಂಬರ್‌ನಿಂದ ಫೆಬ್ರುವರಿಯುವರಿಗೆ ಈ ಪ್ರದೇಶದಾದ್ಯಂತ ಚಳಿಗಾಲವಿರುತ್ತದೆ.

ಈ ನಮ್ಮ ಭಾಗಕ್ಕೆ ನೈರುತ್ಯ ಮಾರುತಗಳಿಂದ ಹೆಚ್ಚಾಗಿ ಮಳೆಯನ್ನು ಪಡೆಯುವುದರಿಂದ ಈ ಭಾಗಕ್ಕೆ ವಾರ್ಷಿಕ ಸರಾಸರಿ ಮಳೆ ಉತ್ತಮವಾಗಿದೆ. ಅಲ್ಲದೇ ಇಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ಹರಿದು ವ್ಯವಸಾಯಕ್ಕೆ ಸೂಕ್ತವಾಗಿದೆ. ಇಲ್ಲಿಯ ವಾರ್ಷಿಕ ಮಳೆಯ ಪ್ರಮಾಣವು ೫೦೯.೫ ಎಂ.ಎಂ. ರಷ್ಟು ಇರುತ್ತದೆ.

೪) **ಜಲ ಸಂಪನ್ಮೂಲಗಳು :**

ಕನ್ನಡನಾಡಿನಲ್ಲಿ ಹಲವಾರು ಪ್ರಮುಖ ನದಿಗಳು ಹರಿಯುವುದನ್ನು ಕಾಣಬಹುದು. ಅದರಲ್ಲೂ ಉತ್ತರ ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದಾದ ಘಟಪ್ರಭಾ ನದಿಯು ಪಶ್ಚಿಮ ಘಟ್ಟದಲ್ಲ **"ಸುಂದರಗಡ"** ಎಂಬಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತಿದ್ದು ೬೦ ಕಿ.ಮೀ. ಗಳಷ್ಟು ದೂರ ಹರಿಯುತ್ತದೆ[೩]. ತಾಮ್ರಪಣಿ ಮತ್ತು ಹಿರಣ್ಯಕೇಶಿ ಇವು ಇದರ ಉಪನದಿಗಳಾಗಿವೆ. ಹಿರಣ್ಯಕೇಶಿ ನದಿಯು ಪಶ್ಚಿಮ ಘಟ್ಟದಲ್ಲಿ ಅಂಬೋಲಿಯ ಹತ್ತಿರ ಹುಟ್ಟಿ ಹುಕ್ಕೇರಿ ತಾಲೂಕಿನಲ್ಲಿ ಹರಿದು ಮುಂದೆ ಘಟಪ್ರಭಾ ನದಿಯನ್ನು ಸೇರುತ್ತದೆ[೪]. ಘಟಪ್ರಭಾ ನದಿಗೆ ಅಡ್ಡಲಾಗಿ ೧೯೪೯ರಲ್ಲಿ ಹಿಡಕಲ್‌ದ ಹತ್ತಿರ ಆಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ. ಹಿಡಕಲ್ ಜಲಾಶಯವು ೧೬೩ ಅಡಿಗಳಷ್ಟು ಎತ್ತರವಾಗಿದ್ದು ೫೧ ಸಾವಿರ ಮಿಲಿಯ ಘನ ಅಡಿಗಳಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ[೫]. ಈ ಘಟಪ್ರಭಾ ಎಡದಂಡೆ ಕಾಲುವೆ (ಜಿ.ಎಲ್.ಬಿ.ಸಿ) ಮುಖಾಂತರ ಮುಗಳಖೋಡ ಗ್ರಾಮದ ಭೂಮಿಗಳಿಗೆ ವ್ಯವಸಾಯಕ್ಕಾಗಿ ನೀರು ಒದಗಿಸುತ್ತದೆ. ಅಲ್ಲದೇ ಬಾವಿಗಳು, ಕೊಳವೆ ಬಾವಿಗಳು, ಕೆರೆಗಳ ಮೂಲಕ ನೀರನ್ನು ಪೂರೈಸಲಾಗುತ್ತದೆ.

೫) **ಮಣ್ಣು :**

ಮುಗಳಖೋಡವು ಸಹಜವಾಗಿ ನಿಸರ್ಗ ಸೌಂದರ್ಯವಾಗಿ ಕೂಡಿದ ಪ್ರದೇಶವಾಗಿದೆ. ಸುತ್ತಲೂ ಫಲವತ್ತಾದ ಭೂಮಿಯಲ್ಲಿ ಕೆಂಪು, ಕಪ್ಪು ಮಣ್ಣನ್ನು ಹೊಂದಿದೆ.

ಕೆಂಪು ಮಣ್ಣು :

ಈ ಕೆಂಪು ಮಣ್ಣು ನಮ್ಮ ಜಿಲ್ಲೆಯ ಪೂರ್ವಭಾಗದಲ್ಲಿ ಅಂದರೆ ವಿಶೇಷವಾಗಿ ರಾಯಬಾಗ ಗೋಕಾಕ ಮತ್ತು ಸವದತ್ತಿ ತಾಲೂಕುಗಳ ಪೂರ್ವಭಾಗದಲ್ಲಿ ಕಂಡುಬರುತ್ತದೆ. ಅಲ್ಲದೇ ಈ ಮಣ್ಣು ಮುಗಳಖೋಡದ ಭೂಭಾಗದಲ್ಲಿ ಕಾಣಿಸುತ್ತದೆ. ಇಲ್ಲಿ ಕಬ್ಬಿಣದ ಡೈ ಆಕ್ಸೈಡ ಸುಮಾರು ಶೇ. ೫ ರಿಂದ ೮ ರಷ್ಟಿದ್ದು, ಮಣ್ಣಿನ ಕೆಂಪು ಬಣ್ಣಕ್ಕೆ ಕಾರಣವಾಗಿದೆ ಮತ್ತು ಗ್ರಾನೈಟ್ ನೈಸಿಸ್ಟ ಮುಂತಾದ ಶಿಲೆಗಳ ಛಿದ್ರೀಕರಣ ಮತ್ತು ತಟಸ್ಥ ಆಮ್ಲತೆಯಿಂದ ಕೂಡಿರುವ ಬಂಡೆಗಳಿಂದ ಉತ್ಪತ್ತಿಯಾದುದಾಗಿದೆ. ಇದರಲ್ಲಿ ಶೇಕಡಾ ೧೦–೧೫ ರಷ್ಟು ಜೇಡಿ ಮಣ್ಣದ್ದು, ತೇವವಾಗುವುದನ್ನು ತಡೆಯುವ ಗುಣದಲ್ಲಿ ಕೆಂಪು ಮರಳು ಮಣ್ಣಿಗಿಂತ ಉತ್ತಮವಾಗಿದೆ. ಇದರಲ್ಲಿ ಸಾವಯುವ ಹಾಗೂ ಸಸ್ಯ ಪೋಷಕಾಂಶ ಕಡಿಮೆ ಇದ್ದು, 'ಕೈಯೋಲಿನೈಟ್' ಎಂಬ ಖನಿಜ ವಸ್ತುವಿನಿಂದ ಕೂಡಿದೆ. ಈ ಖನಿಜದ ವಿಸ್ತಾರ ಮಣ್ಣಿನ ಮೇಲ್ಭಾಗದಲ್ಲಿ ಕಡಿಮೆ ಇರುವುದರಿಂದ ಈ ಮಣ್ಣಿನ ತೇವಾಂಶವನ್ನು ಉಳಿಸಿಕೊಳ್ಳುವ ಶಕ್ತಿ ಕಪ್ಪು ಮಣ್ಣಿಗಿಂತ ಕಡಿಮೆ.

ಆದ್ದರಿಂದ ಇಲ್ಲಿ ಬೆಳೆಯುವ ಸಸ್ಯಗಳಿಗೆ ನೀರಿನ ಮತ್ತು ಗೋಬ್ಬರ ಪ್ರಮಾಣ ಹೆಚ್ಚು ಬೇಕಾಗುತ್ತದೆ. ಈ ಮಣ್ಣಿನಲ್ಲಿ ಸಾವಯುವಾಂಶಗಳಾದ ಸಾರಜನಕ, ರಂಜಕ, ಪೋಟ್ಯಾಸಿಯಂ ಮತ್ತು ಕ್ಯಾಲ್ಸಿಯಂ ಇದ್ದು ನೀರಾವರಿಯ ಅನುಕೂಲತೆ ಲಭ್ಯವಾದಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯಬಹುದಾಗಿದೆ.

ಕಪ್ಪು ಮಣ್ಣು :

ಈ ಮಣ್ಣು ನಮ್ಮ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಪೂರ್ವಭಾಗ, ರಾಯಬಾಗ ತಾಲೂಕಿನ ಉತ್ತರ ಭಾಗ, ದಕ್ಷಿಣಭಾಗ ಹಾಗೂ ಕೃಷ್ಣ ನದಿಯ ಕೊಳ್ಳದ ಭಾಗದಲ್ಲಿ ಹರಿಡಿಕೊಂಡಿರುವುದು ಕಂಡು ಬರುತ್ತದೆ. ಮುಗಳಖೋಡದಲ್ಲಿಯೂ ಕೂಡಾ ಈ ಕಪ್ಪು (ಎರಿ) ಮಣ್ಣಿನ ಭೂಮಿಗಳನ್ನು ಕಾಣಬಹುದಾಗಿದೆ. ಇದರ ಬಣ್ಣ ಕಂದಿನಿಂದ ಅಚ್ಚ ಕಪ್ಪಿನದಾಗಿದೆ. ಇದು ತೇವಾಂಶ ಇದ್ದಾಗ ಮೃದು ಮತ್ತು ಜಿಗುಟಾಗಿರುತ್ತದೆ. ಹಾಗೆಯೇ ಒಣಗಿದಾಗ ತುಂಬ ಗಟ್ಟಿಯಾಗಿರುತ್ತದೆ. ಮೆಗ್ನೇಷಿಯಂ ಆಕ್ಸೈಡ, ಟಟ್ಯಾನಿಯಂ ಆಕ್ಸೈಡ್ ಹೆಚ್ಚು ಪ್ರಮಾಣದಲ್ಲಿದ್ದು, ಮಣ್ಣಿನ ಕಪ್ಪು ಬಣ್ಣಕ್ಕೆ ಕಾರಣವಾಗಿದೆ. ಇದರಿಂದ ಮಣ್ಣಿನ ಫಲವತ್ತತೆ ನಶಿಸುವುದಿಲ್ಲ ಹಾಗೂ ಮಣ್ಣಿನ ಕೊಚ್ಚುವಿಕೆಗೂ ಅವಕಾಶವಿರುವುದಿಲ್ಲ. ಆದ್ದರಿಂದ ಕಡಿಮೆ ಮಳೆ ಅಂದರೆ ಸುಮಾರು ೪೦ ಸೆಂ.ಮೀ. ನಿಂದಲೇ ಉತ್ತಮ ಬೆಳೆ ತೆಗೆಯಲು ಈ ಮಣ್ಣು ಯೋಗ್ಯವಾಗಿದೆ. ಆದರೆ ಇದರಲ್ಲಿ ಉಪ್ಪಿನ ಕಣ ಜೋಡನೆ ಅಧಿಕ ನೀರಾವರಿಗೆ ಒಳಪಟ್ಟಾಗ ಕೃಷಿಗೆ ಹೊಂದಿಕೊಳ್ಳುವುದಿಲ್ಲ. ಇದರಿಂದ ಸಾಗುವಳಿ ಕಷ್ಟವಾಗುತ್ತದೆ.

[illegible]

೬) **ವ್ಯವಸಾಯ :**

ಆರ್ಥಿಕ ಸಂಪನ್ಮೂಲಗಳಿಂದ ಈ ಗ್ರಾಮ ಶ್ರೀಮಂತವಾಗಿದೆ. ಇಲ್ಲಿ ಸಂಪದ್ಭರಿತ ಭೂಮಿಯಿರುವುದರಿಂದ ಉತ್ತಮ ಬೇಸಾಯ ಫಲಗಳನ್ನು ನೀಡುತ್ತದೆ. ಈ ಗ್ರಾಮ ಘಟಪ್ರಭಾ ನದಿಯ ಕಾಲುವೆಯಿಂದ ಆರ್ಥಿಕ ವ್ಯವಸ್ಥೆಯಲ್ಲಿ ಸುಸ್ಥಿತಿಯಲ್ಲಿದೆ. ಇಲ್ಲಿ ವ್ಯವಸಾಯ ಒಂದು ಮುಖ್ಯ ಕಸುಬು ಆಗಿದೆ. ರೈತರು ಪ್ರಮುಖವಾಗಿ ಕಬ್ಬು, ಅರಿಶಿನ, ಗೋವಿನಜೋಳ, ಗೋಧಿ, ಜವೆಗೋಧಿ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆದು ನೆರೆಹೊರೆ ರಾಜ್ಯದೊಂದಿಗೆ ವ್ಯಾಪಾರ ವಹಿವಾಟು ಹೊಂದಿರುವರು. ಹಾಗೇ ಇನ್ನಿತರ ಬೆಳೆಗಳ ಜೊತೆಗೆ ತರಕಾರಿಗಳನ್ನು ಸಹ ಬೆಳೆಯುವರು.

೭) **ಕೈಗಾರಿಕೆಗಳು :**

ಮುಗಳಖೋಡ ಗ್ರಾಮದಲ್ಲಿ ಅಷ್ಟೊಂದು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡು ಬರುವುದಿಲ್ಲ. ಇಲ್ಲಿ ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಕಾಣಬಹುದಾಗಿದೆ. ಆಲಿ ಮನೆಗಳ ಉದ್ದಿಮೆಗಳು (ಗಾಣದ ಮನೆ) ಜೊತೆಗೆ ನೇಕಾರರು, ಬಡಿಗರು, ಕಮ್ಮಾರರು, ಚಮ್ಮಾರರು, ಮೇದಾರರು ಮೊದಲಾದ ಗೃಹ ಕೈಗಾರಿಕೆಗಳನ್ನು ಕಾಣಬಹುದಾಗಿದೆ.

೨.೨ ಚಾರಿತ್ರಿಕ ಹಿನ್ನಲೆ :

ಮುಗಳಖೋಡ ಗ್ರಾಮವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸ್ಥಾನಮಾನವನ್ನು ಉಳಿಸಿಕೊಂಡು ಬಂದಿದೆ. ಈ ಗ್ರಾಮವು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಒಂದು ಪುಣ್ಯಕ್ಷೇತ್ರವಾಗಿದೆ. ಇದು ಜತ್ತ–ಜಾಂಬೋಟಿ ಹೆದ್ದಾರಿಯ ಬದಿಯಲ್ಲಿ ಇರುವ ಒಂದು ಸಹಜ ಸುಂದರ ಗ್ರಾಮವಾಗಿದೆ. ಇದು ಐತಿಹಾಸಿಕ, ಧರ್ಮದ ಹಿರಿಮೆ, ಇತಿಹಾಸದ ಗರಿಮೆ, ಸಂಸ್ಕೃತಿಯ ಸೌಂದರ್ಯದ ಕಂಪನ್ನು ಒಳಗೊಂಡಿದೆ.

ಈ ಗ್ರಾಮದ ಸ್ಥಳದ ಬಗ್ಗೆ ಅವಲೋಕನ ಮಾಡಿದಾಗ ಈ ಗ್ರಾಮದ ಹೆಸರಿನ ಬಗ್ಗೆ ಸಾಕಷ್ಟು ವದಂತಿಗಳಿವೆ. ಬಹುಶಃ ಈ ಪ್ರದೇಶದಲ್ಲಿ ಹಿಂದೆ ಗಿಡಗಂಟೆಗಳು ಇದ್ದಿರಬೇಕು. ಎಲ್ಲ ಭಾಗವೂ ನೀರಾವರಿ ವ್ಯವಸ್ಥೆಗೆ ಒಳಪಟ್ಟಿದೆ. ಈ ವಿಷಯ ಈ ಊರಿನ ಹೆಸರಿನಲ್ಲಿಯೇ ಅಡಗಿರುವುದನ್ನು ಕಾಣಬಹುದು. **"ಮುಗಳಿ"** ಎಂದರೆ **"ಗಿಡ"** ಎಂದು, **"ಕೋಡು"** **(ಖೋಡ)** ಎಂದರೆ **"ಹೆಚ್ಚು ನೀರು ಹರಿಯುವ ಪ್ರದೇಶ"**. ತಂಪಾದ ವಾತಾವರಣ, ಜೌಗಾದ ಪ್ರದೇಶ, ಗುಡ್ಡಗಾಡು ಎಂಬ ಅರ್ಥವಾಗುತ್ತದೆ. ಇದರಿಂದಲೇ ಈ ಗ್ರಾಮಕ್ಕೆ ಮುಗಳಖೋಡ ಎಂಬ ಹೆಸರು ಬಂದಿರಬಹುದೆಂದು ಅರ್ಥೈಸಬಹುದು. ಅಲ್ಲದೇ ಗ್ರಾಮದ ಸಮೀಪದ ಮೂರು ಭಾಗಗಳನ್ನು ಒಳಗೊಂಡಿದೆ. ಅವು

ಯಾವುವೆಂದರೆ ನೀರಲಖೋಡಿ, ಹರನಕೋಡಿ, ಯ್ಯಾಧ್ಯಾನಕೋಡಿ ಎಂಬುದು ಅವು ಕೂಡಿ ಮುರಖೋಡಿ – ಮುಗಳಖೋಡ ಎಂದಾಗಿರಬಹುದು. ಆದರೆ ಈಗಿನ ವಿದ್ವಾಂಸರ ಪ್ರಕಾರ ಮುನಿಗಳ ವಾಸದಿಂದಾಗಿ ಈ ಮುಗಳಖೋಡ ಎಂಬ ಹೆಸರು ಬಂದಿರಬಹುದೆಂದು ಊಹಿಸಲಾಗಿದೆ. ಇನ್ನೊಂದು ಮಂಗಳವಾಗಿರುವ ಈ ಗ್ರಾಮಕ್ಕೆ ಮಂಗಳಖೇಡ > ಮುಗಳಖೋಡ ಅಂತಾ ಕರೆಯುವ ಸಾಧ್ಯತೆ ಇದೆ ಎಂಬುದು ಸ್ಥಳೀಯರ ಅಂಬೋಣ.

ಮುಗಳಖೋಡ ಗ್ರಾಮವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಾಮಾಜಿಕ ವ್ಯವಸ್ಥೆಯನ್ನೇ ಉಳಿಸಿ ಬೆಳೆಸಿಕೊಂಡು ಬಂದಿದೆ. ಧಾರ್ಮಿಕವಾಗಿ ಸೃಷ್ಟಿಯಲ್ಲಿರುವ ಸಮಸ್ತ ಜೀವಿಗಳ ಕಲ್ಯಾಣ ದೃಷ್ಟಿಯಿಂದಲೇ ಹಲವು ಧರ್ಮಗಳು ಹುಟ್ಟಿಕೊಂಡಿವೆ. ಇಂತಹ ಹಲವು ಧರ್ಮಗಳ ಸಂಗಮವನ್ನು ಈ ಗ್ರಾಮದಲ್ಲಿ ಕಂಡುಕೊಳ್ಳುತ್ತೇವೆ. ಬೌದ್ಧ, ಜೈನ, ಶೈವ, ವೈಷ್ಣವ ಮತ್ತು ಮುಸ್ಲಿಂ ಮತಬಾಂಧವರು ಅನ್ಯೋನ್ಯವಾಗಿ ಈ ಗ್ರಾಮದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅದರೊಂದಿಗೆ ಈ ಕ್ಷೇತ್ರವು ದಾಸೋಹದ ಮಹಾಮನೆ ಭಕ್ತರಿಗೆ ಹೃದಯದಿಂದ ಪ್ರಸಾದ ವಿತರಿಸುವ ಜಂಗಮ ಕ್ಷೇತ್ರವಾಗಿದೆ.

ಈ ಗ್ರಾಮದಲ್ಲಿ ರಾಜ್ಯ ಪದ್ಧತಿ ಆಡಳಿತವಿರುವ ಕಾಲಕ್ಕೆ ಇದು ಕುಂದರನಾಡು ಸಂಸ್ಥಾನಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಈ ಗ್ರಾಮದಲ್ಲಿ ಬ್ರಿಟಿಷರ ಜೊತೆ ಹೋರಾಡಿದ ಸ್ವತಂತ್ರ್ಯ ಹೋರಾಟಗಾರರು, ಕನ್ನಡಪರ ಚಳುವಳಿಯಲ್ಲಿ ಈ ನೆಲದ ಮೇಲೆ ನೆಲೆಸಿ ಹೋಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಐತಿಹಾಸಿಕ ಹಿರಿಮೆಯನ್ನು ಪಡೆದು ಪ್ರಾಚೀನ ಕಾಲದಲ್ಲಿ **"ಕುಹೂಂಡಿ ಮೂರು ಸಾವಿರ"** ನಾಡಿನಲ್ಲಿ ಮುಗಳಖೋಡವು ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತು. ಅಲ್ಲದೇ ಈಗಲೂ ಕೂಡಾ ಸ್ಥಳೀಯರು ರಾಜಕೀಯ ರಂಗದಲ್ಲಿ ತೊಡಗಿ ಸರಕಾರಿ ಸೌಲಭ್ಯಗಳನ್ನು ಸ್ಥಳೀಯರಿಗೆ ಒದಗಿಸುವಲ್ಲಿ ನಿಪುಣರಾಗಿದ್ದಾರೆ. ವಿದ್ಯಾದೃಷ್ಟಿಯಿಂದ ಮತ್ತು ಸುಕ್ಷೇತ್ರ ದೃಷ್ಟಿಯಿಂದ ಈ ಗ್ರಾಮವು ರಾಷ್ಟ್ರಮಟ್ಟದಲ್ಲಿ ಮಿಂಚುವಂತೆ ಮಾಡುವ ಮನಸ್ಸು ಸ್ಥಳೀಯರಲ್ಲಿ ಅಡಕವಾಗಿದೆ ಎಂದು ಹೇಳಬಹುದು.

: ಅಡಿಟಿಪ್ಪಣಿಗಳು :

೧) ಹೊಂಬೆಳಕು : ವಾರ್ಷಿಕ ಸಂಚಿಕೆ : ಪುಟ ಸಂಖ್ಯೆ : ೧೦

೨) ಎಸ್. ಆಯ್. ಆಯ್. : ಸಂಪುಟ : ೨೦

೩) ಬೆಳಗಂ ಡಿಸ್ಟ್ರಿಕ್ಟ ಗೆಝೆಟೀಯರ : ಡಾ. ಸೂರ್ಯನಾಥ ಕಾಮತ : ೧೯೮೭ :
ಪುಟ ಸಂಖ್ಯೆ : ೧೫

೪) ಹುಕ್ಕೇರಿ ತಾಲೂಕು ದರ್ಶನ : ಆರ್. ಆರ್. ಮುತಾಲಿಕ : ೧೯೮೭ :
ಪುಟ ಸಂಖ್ಯೆ : ೫

೫) ಬೆಳಗಂ ಡಿಸ್ಟ್ರಿಕ್ಟ ಗೆಝೆಟೀಯರ : ಡಾ. ಸೂರ್ಯನಾಥ ಕಾಮತ : ೧೯೮೭.
ಪುಟ ಸಂಖ್ಯೆ : ೨೯೮.

* * *

ಅಧ್ಯಾಯ – ೩

ಮುಗಳಖೋಡದ ರಾಜಕೀಯ ಚರಿತ್ರೆ

ಅಧ್ಯಾಯ – ೩

ಮುಗಳಖೋಡದ ರಾಜಕೀಯ ಚರಿತ್ರೆ

"ಮುಗಳಖೋಡ" ಗ್ರಾಮವು ಕುಹೂಂಡಿ ಮೂಸಾಸಿರದ ಒಂದು ಪ್ರದೇಶವಾಗಿದೆ. ಇಂಥ ಆಡಳಿತ ಪ್ರದೇಶವು ಪ್ರಾಚೀನ ಕರ್ನಾಟಕದ ಒಂದು ಚಿಕ್ಕ ಸ್ಥಳವಾಗಿರುವುದರಿಂದ ಕರ್ನಾಟಕದ ರಾಜಕೀಯ ಚರಿತ್ರೆ ವಿಶಾಲಾರ್ಥದಲ್ಲಿ ಈ ಕುಹೂಂಡಿ ಮೂಸಾಸಿರ ಭಾಗಕ್ಕೂ ಅನ್ವಯವಾಗುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ವಿವಿಧ ರಾಜಕೀಯ ವಿಭಾಗಗಳು ಪ್ರತ್ಯೇಕ ಹೆಸರುಗಳಿಂದ ಗುರುತಿಸಲ್ಪಡುತ್ತಿದ್ದವು. ಅವುಗಳಲ್ಲಿ ಇಂದಿನ ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗ, ಪೂರ್ವ ಭಾಗ ಬಾಗಲಕೋಟ ಜಿಲ್ಲೆಯ ಮುಧೋಳ ಮತ್ತು ಜಮಖಂಡಿ ತಾಲೂಕು ಪಶ್ಚಿಮ ಭಾಗ ಮಹಾರಾಷ್ಟ್ರದ ಚಂದಗಡ, ಗಡಹಿಂಗ್ಲಜ ತಾಲೂಕುಗಳು ಸೇರಿಕೊಂಡು ಮೂರು ಸಹಸ್ರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದು, ಸಾಕಷ್ಟು ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಇಲ್ಲಿನ ದಾಖಲೆಗಳು ತಿಳಿಸುವಂತೆ ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು ಅವರ ಸಾಮಂತರಾದ ಸುಗಂಧವರ್ತಿ ಸವದತ್ತಿಯ ರಟ್ಟರು, ಕಲ್ಯಾಣದ ಚಾಳುಕ್ಯರು, ವಿಜಾಪೂರದ ಆದಿಲಷಾಹಿಗಳು, ವಿಜಯನಗರದ ಅರಸರು ಹಾಗೂ ಮರಾಠರ ಅಧೀನಕ್ಕೊಳಪಟ್ಟು ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ.

ಮುಗಳಖೋಡ ಪ್ರದೇಶವು ಕುಹೂಂಡಿ ಮೂರು ಸಾವಿರದ ಭಾಗವಾಗಿತ್ತೆಂದು ತಿಳಿದು ಬರುತ್ತದೆ[೧]. "ಕುಹೂಂಡಿ ಮೂರು ಸಾವಿರ ಪ್ರದೇಶದ ಮೇಲೆ ಬದಾಮಿ ಚಾಳುಕ್ಯರು, ರಾಷ್ಟ್ರಕೂಟರು ಪ್ರಭುತ್ವವನ್ನು ಹೊಂದಿದ್ದರೂ ಇವರ ಕಾಲದ ಯಾವುದೇ ಶಾಸನಧಾರಗಳು ದೊರೆತಿರುವುದಿಲ್ಲ. ಕಲ್ಯಾಣ ಚಾಳುಕ್ಯರು ಮತ್ತು ಅವರ ಮಾಂಡಲಿಕರಾಗಿದ್ದ ಸವದತ್ತಿಯ ರಟ್ಟರು ಈ ಪ್ರದೇಶವನ್ನು ಆಳಿದರು. ಇಲ್ಲಿ ದೊರೆತಿರುವ ಅವರ ಶಾಸನಗಳು ಈ ಸಂಗತಿಯನ್ನು ಪುಷ್ಟೀಕರಿಸುತ್ತದೆ. ರಟ್ಟರ ದೊರೆ ೪ನೇ ಕಾರ್ತವೀರ್ಯನು (ಕ್ರಿ.ಶ. ೧೯೯ – ೧೨೨೨) ರಾಜಧಾನಿಯನ್ನು ಸವದತ್ತಿಯಿಂದ ಬೆಳಗಾವಿಗೆ ವರ್ಗಾಯಿಸಿದ[೨]" ನಂತರದಲ್ಲಿ ರಾಯಬಾಗ, ಹುಕ್ಕೇರಿ ಪ್ರದೇಶಗಳಿಗೆ ಅತಿ ಮಹತ್ವ ಬಂದಿತು.

ಈ ಭಾಗದ ಶಾಸನಗಳು ಹಾಗೂ ಇತರೆ ಅಂಶಗಳಿಂದ ಇಲ್ಲಿ ಹಲವಾರು ರಾಜಮನೆತನಗಳು ಆಳ್ವಿಕೆ ನಡೆಸಿದ್ದು ತಿಳಿದುಬರುತ್ತದೆ. ಈ ಅರಸರು ಆಳ್ವಿಕೆ ನಡೆಸಿದ ಕಾಲಕ್ಕನುಗುಣವಾಗಿ ಆಯಾ ರಾಜಮನೆತನದ ರಾಜಕೀಯ ಇತಿಹಾಸವನ್ನು ಇಲ್ಲಿ ನೋಡಬಹುದಾಗಿದೆ.

೩.೧ ಬದಾಮಿ ಚಾಳುಕ್ಯರು – (ಕ್ರಿ.ಶ. ೫೦೦ ರಿಂದ ೭೫೭) :

ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಮೊದಲರಾಜ ಮನೆತನವೆಂದರೆ ಬನವಾಸಿ ಕದಂಬರು ಕ್ರಿ.ಶ. ೪–೬ ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಕದಂಬರ ಅವನತಿಯ ನಂತರ ಅವರ ಸಾಮಂತರಾಗಿದ್ದ ಬದಾಮಿ ಚಾಳುಕ್ಯರು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದರು. ಈ ರಾಜ್ಯದ ಸ್ಥಾಪನೆಯಿಂದಾಗಿ ದಕ್ಷಿಣ ಭಾಗದ ಹಾಗೂ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ನೂತನ ಅಧ್ಯಯನವು ಸ್ಥಾಪಿಸಲ್ಪಟ್ಟಿತು. ಚಾಳುಕ್ಯರ ಪರಮಾಧಿಕಾರ ಉತ್ತರದಲ್ಲಿ ನರ್ಮದಾ ತೀರದವರೆಗೆ ವ್ಯಾಪಿಸಿತ್ತು. ಹಿರಿದಾದ ಸಾಮ್ರಾಜ್ಯವನ್ನು ನಿರ್ಮಿಸಿ ಸುವ್ಯವಸ್ಥಿತ ಆಡಳಿತ ಪದ್ಧತಿಯನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಚಾಳುಕ್ಯ ಸಾರ್ವಭೌಮರು, ಧರ್ಮ, ಸಾಹಿತ್ಯ ಮತ್ತು ಕಲೆಗೆ ವಿಶೇಷ ಪ್ರೋತ್ಸಾಹ ನೀಡಿದರು. ವೈಷ್ಣವ, ಶೈವ ಹಾಗೂ ಜೈನ ಪಂಥಗಳಿಗೆ ಚಾಳುಕ್ಯ ಅರಸರು ಜೀವ ತುಂಬಿದರು. ಸದಾ ಪ್ರಜೆಗಳ ಸಂತೋಷ ಮತ್ತು ಹಿತವನ್ನು ಗಮನದಲ್ಲಿಟ್ಟುಕೊಂಡು ರಾಜ್ಯಭಾರ ಮಾಡುತ್ತಿದ್ದರು[೩]. ಅವರು ಕೈಹಾಕದ ಸಾಂಸ್ಕೃತಿಕ ವಿಭಾಗವೇ ಇಲ್ಲವೆನ್ನಬಹುದು. ಇವರ ಆಳ್ವಿಕೆಯಲ್ಲಿ ವಾಸ್ತುಶಿಲ್ಪ, ಉನ್ನತಸ್ಥಿತಿಗೆ ಬರಲು ಕಾರಣವಾಯಿತು. ಐಹೊಳೆ, ಬದಾಮಿ, ಪಟ್ಟದಕಲ್ಲು, ಮಹಾಕೂಟ ಮೊದಲಾದ ಸ್ಥಳಗಳಲ್ಲಿರುವ ಚಾಳುಕ್ಯರ ಕಲಾಕೃತಿಗಳು ಅವರ ಅದ್ಭುತ ವೈಭವ ಮತ್ತು ಹಿರಿಮೆಗೆ ಇಂದಿಗೂ ಸಾಕ್ಷಿಯಾಗಿ ಉಳಿದಿವೆ. ಈ ಅರಸರ ಉದಾರತೆಯಿಂದ ಬೆಳೆದ ವಾಸ್ತುಶಿಲ್ಪವು **"ವೇಸರಶೈಲಿ"** ಎಂಬುದಾಗಿ ಭಾರತೀಯ ವಾಸ್ತುಶಿಲ್ಪ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ[೪] ವರಾಹವು ಈ ಸಂಸ್ಕೃತಿಯ ರಾಜ ಚಿಹ್ನೆಯಾಗಿತ್ತು.

ಸ್ವತಂತ್ರವಾದ ಚಾಳುಕ್ಯ ವಂಶವನ್ನು ಸ್ಥಾಪಿಸಿದ ಕೀರ್ತಿ ರಣರಾಗನ ಮಗನಾದ ೧ನೇ ಪುಲಕೇಶಿ (ಕ್ರಿ.ಶ. ೫೪೭ ರಿಂದ ೫೬೭)ವರೆಗೆ ಸಲ್ಲುತ್ತದೆ. ಇವನು ವಾತಾಪಿಯುನ್ನು ರಾಜಧಾನಿಯುನ್ನಾಗಿ ಆಯ್ದುಕೊಂಡು ವಿಷಯು ಈತನ ಬಂಡೆಗಲ್ಲು ಶಾಸನದಿಂದ ತಿಳಿದುಬರುತ್ತದೆ[೫]. ನಂತರದಲ್ಲಿ ವಾತಾಪಿ ನಗರದ ಸುತ್ತಮುತ್ತ ಚಾಳುಕ್ಯರು ಅನೇಕ ಸ್ಮಾರಕಗಳು ತಲೆ ಎತ್ತಿದವು. ಏಕೆಂದರೆ ವಾತಾಪಿಯ ಪ್ರಕೃತಿ ಸಹಜವಾದ ರಕ್ಷಣೆಯನ್ನು ಪಡೆದಿತ್ತು. ೧ನೇ ಪುಲಕೇಶಿಗೆ ಕೀರ್ತಿವರ್ಮ ಮತ್ತು ಮಂಗಳೇಶರೆಂಬ ಈರ್ವರು ಮಕ್ಕಳಿದ್ದರು. ತಂದೆಯ ಮರಣದ ನಂತರ ೧ನೇ ಕೀರ್ತಿವರ್ಮ ಕ್ರಿ.ಶ. ೫೬೭ ರಲ್ಲಿ ಪಟ್ಟವೇರಿದನು. ಕೀರ್ತಿವರ್ಮನು ಪರಾಕ್ರಮದಿಂದ ರಾಜ್ಯದ ಮೇರೆಗಳನ್ನು ವಿಸ್ತರಿಸಿ ತನ್ನ ಪ್ರಭಾವ ಹಾಗೂ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ಮುಂದಿನ ವೈಭವ ಯುಗಕ್ಕೆ ಭದ್ರ ಅಡಿಪಾಯ ಹಾಕಿದನು.

ಕೀರ್ತಿವರ್ಮನ ನಂತರ ಮಂಗಳೇಶ ಕ್ರಿ.ಶ. ೫೯೮ ರಲ್ಲಿ ಅಧಿಕಾರಕ್ಕೆ ಬಂದನು[೬]. ಉತ್ತಮ ಆಡಳಿತಗಾರನಾಗಿದ್ದ ಈತ ರಾಜ್ಯವನ್ನು ವಿಸ್ತರಿಸಿ ತನ್ನ ಸಹೋದರನ ಕಾಲದಲ್ಲಿ ಅಪೂರ್ಣವಾಗಿದ್ದ ಬದಾಮಿ ವೈಷ್ಣವ ಗುಹಾಲಯವನ್ನು ಪೂರ್ಣಗೊಳಿಸಿ ವಿಷ್ಣುವಿನ ವಿಗ್ರಹವನ್ನು ಸ್ಥಾಪಿಸಿ **"ಪರಮಭಾಗವತ"** ಎಂಬ ಬಿರುದು ಪಡೆದನು[೭]. ಮುಂದೆ ಸಿಂಹಾಸನಕ್ಕಾಗಿ ನಡೆದ ಯಾದವೀ ಕಲಹದಲ್ಲಿ ಮಂಗಳೇಶ ರಾಜ್ಯದ ಜೊತೆಗೆ ಪ್ರಾಣವನ್ನು ಕಳೆದುಕೊಳ್ಳುವಂತಾಯಿತು.

೩.೨ ಇಮ್ಮಡಿ ಪುಲಕೇಶಿ (ಕ್ರಿ.ಶ. ೬೦೯ ರಿಂದ ೬೪೨) :

ಚಾಳುಕ್ಯ ಸಾಮ್ರಾಟರಲ್ಲೆಲ್ಲ ಅತ್ಯಂತ ಪರಾಕ್ರಮಿ ಹಾಗೂ ಪ್ರಸಿದ್ಧ ಚಕ್ರವರ್ತಿಯೆಂದರೆ **'ಇಮ್ಮಡಿ ಪುಲಕೇಶಿ'**. ಜೈನ ಕವಿಯಾದ ರವಿಕೀರ್ತಿ ರಚಿಸಿದ ಐಹೊಳೆ ಪ್ರಶಸ್ತಿ ಶಾಸನ (ಕ್ರಿ.ಶ. ೬೩೦ – ೬೩೪) ಹಾಗೂ ಹೂಯೆನ್‌ತ್ಸಾಂಗನ ಬರವಣಿಗೆಗಗಳು (ಕ್ರಿ.ಶ. ೬೪೧) ಪುಲಕೇಶಿಯ ಬಗ್ಗೆ ತಿಳಿಯಲು ಸಹಾಯಕವಾಗಿದೆ. ದಂಗೆಯೆದ್ದ ಮಾಂಡಲಿಕರು ಹಾಗೂ ಸಾಮಂತರನ್ನು ಸದೆ ಬಡೆದು ಉತ್ತರದಲ್ಲಿ ನರ್ಮದಾ ತೀರದವರೆಗೆ ರಾಜ್ಯವನ್ನು ವಿಸ್ತರಿಸಿದನು[೮].

ಗುಜರಾತವನ್ನು ಜಯಿಸಿ ತನ್ನ ಸಹೋದರರನ್ನು ಅಲ್ಲಿನ ಮುಖ್ಯಸ್ಥನ್ನನಾಗಿ ನೇಮಿಸಿದನು. ಪೂರ್ವದಲ್ಲಿ ವೆಂಗಿ ಮತ್ತು ಕಳಿಂಗವನ್ನು ಜಯಿಸಿ ಮತ್ತೊಬ್ಬ ಸಹೋದರ ಕುಬ್ಜ ವಿಷ್ಣುವರ್ಧನನ್ನು ಅಲ್ಲಿಯ ಆಡಳಿತಾಧಿಕಾರಿಯಾಗಿ ನೇಮಿಸಿದನು. ಅದೇ ರೀತಿ ದಕ್ಷಿಣದಲ್ಲಿ ಪಲ್ಲವರನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು.

ಕ್ರಿ.ಶ. ೬೪೨ ರಲ್ಲಿ ಪಲ್ಲವರ ದೊರೆ ೧ನೇ ನರಸಿಂಹವರ್ಮ ೨ನೇ ಪುಲಕೇಶಿಯನ್ನು ಸೋಲಿಸಿದ. ಪುಲಕೇಶಿ ಹೋರಾಡುತ್ತ ರಣರಂಗದಲ್ಲಿ ಮರಣ ಹೊಂದಿದನು. ಒಂದು ಸಣ್ಣ ರಾಜ್ಯದ ಸಿಂಹಾಸನವೇರಿದ. ೨ನೇ ಪುಲಕೇಶಿ ಅದನ್ನು ಭವ್ಯ ಸಾಮ್ರಾಜ್ಯವನ್ನಾಗಿ ದಕ್ಷಿಣ ಭಾರತದಲ್ಲಿ ಪ್ರಬಲ ಶಕ್ತಿಯನ್ನಾಗಿ ಮಾರ್ಪಡಿಸಿದನು. ಕದಂಬರು ಅಂಕುರಿಸಿದ ಕರ್ನಾಟಕದ ಕಲ್ಪನೆ ಹಾಗೂ ಭಾವುಕತೆಗೆ ನೀರೆರೆದು ಅದು ದೈವಿಪ್ಯವರಾನವಾಗಿ ಬೆಳಗುವಂತೆ ಮಾಡಿದ ಶ್ರೇಯಸ್ಸು ಈತನಿಗೆ ಸಲ್ಲುತ್ತದೆ. ರಾಜ್ಯದಲ್ಲಿ ಶಾಂತಿ ಸುಭದ್ರತೆ ಸ್ಥಾಪಿಸುವುದರ ಜೊತೆಗೆ ಕನ್ನಡ ನಾಡುಕಲೆ ಸಂಸ್ಕೃತಿಗಳ ಬೀಡು ಮಾಡಿ ಚರಿತ್ರೆಯಲ್ಲಿ ತನ್ನದೆಯಾದ ಸ್ಥಾನ ಉಳಿಸಿಕೊಂಡಿದ್ದಾರೆ[೯]. ೨ನೇ ಪುಲಕೇಶಿಯ ನಂತರ ೧ನೇ ವಿಕ್ರಮಾದಿತ್ಯ ಕ್ರಿ.ಶ. ೬೫೫ ರಲ್ಲಿ ಅಧಿಕಾರಕ್ಕೆ ಬಂದನು. ೨ನೇ ವಿಕ್ರಮಾದಿತ್ಯ (ಕ್ರಿ.ಶ. ೭೩೩ ರಿಂದ ೭೪೨)ನು ಈ ವಂಶದ ಕೊನೆಯ ಪ್ರಬಲ ದೊರೆ.

೩.೩ ರಾಷ್ಟ್ರಕೂಟರು (ಕ್ರಿ.ಶ. ೭೫೭ ರಿಂದ ೯೭೩) :

ಬಾದಾಮಿ ಚಾಳುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಕ್ರಿ.ಶ. ೮ನೇ ಶತಮಾನದ ಮಧ್ಯಭಾಗದಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿ ಆಳತೊಡಗಿದರು. ಚಾಳುಕ್ಯರನ್ನು ಪದಚ್ಯುತಗೊಳಿಸಿ ಕನ್ನಡ ನಾಡನ್ನು ದಕ್ಷಿಣ ಭಾರತದಲ್ಲಿ ಉಚ್ಛ್ರಾಯ ಸ್ಥಿತಿಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಕ್ರಿ.ಶ. ೧೧ನೇ ಶತಮಾನದ ಅಂತ್ಯದವರೆಗೆ ಆಳ್ವಿಕೆ ನಡೆಸಿದ ಇವರು ಕನ್ನಡನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಅದು ವಿಶಾಲವಾಗಿ, ಅಭಿವೃದ್ಧಿಗೊಳ್ಳುವಂತೆ ಶ್ರಮಿಸಿದರು. ರಾಷ್ಟ್ರಕೂಟ ಅರಸರು ತಮ್ಮ ಶೌರ್ಯ, ಸಾಹಸ ಪ್ರತಿಭೆಗಳಿಂದ ಭಾರತೀಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇವರ ಆಳ್ವಿಕೆಯ ಕಾಲವು ಕರ್ನಾಟಕದ ಇತಿಹಾಸದಲ್ಲಿ ಮಹತ್ವ ಪೂರ್ಣವಾದ ಅಧ್ಯಯನವಾಗಿದೆ. ೨ನೇ ಶತಮಾನಕ್ಕಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸಿ ಉತ್ತರ ಭಾರತದಲ್ಲಿ ತಮ್ಮ ಪ್ರಭಾವ ಬೀರಿದಷ್ಟೇ ಅಲ್ಲದೇ ಇಡೀ ಭಾರತದ ಅದೃಷ್ಟವನ್ನು ಬದಲಿಸಿದರು[೧೦]. ಇವರ ಕಾಲದಲ್ಲಿ ನಿರ್ಮಾಣವಾದ ಎಲ್ಲೋರ ಕೈಲಾಸನಾಥ ದೇವಾಲಯ ಹಾಗೂ ಎಲೆಫೆಂಟಾದ ಗುಹೆಗಳು ಪ್ರೇಕ್ಷಣೀಯ ಸ್ಥಳವಾಗಿದ್ದು ದೇಶ–ವಿದೇಶಿಗರನ್ನು ಆಕರ್ಷಿಸುತ್ತದೆ. ಈ ಮನೆತನದ ದಂತಿದುರ್ಗ[೧೧] (ಕ್ರಿ.ಶ. ೭೫೩ ರಿಂದ ೭೫೬) ಒಂದನೇ ಕೃಷ್ಣ[೧೨] (ಕ್ರಿ.ಶ. ೭೫೬ ರಿಂದ ೭೭೫) ಧ್ರುವ[೧೩] (ಕ್ರಿ.ಶ. ೭೮೦ ರಿಂದ ೭೯೩), ೨ನೇ ಗೋವಿಂದ[೧೪] (ಕ್ರಿ.ಶ. ೭೯೩ ರಿಂದ ೮೧೪), ಅಮೋಘವರ್ಷ[೧೫] (ಕ್ರಿ.ಶ. ೮೧೪ ರಿಂದ ೮೭೮), ೩ನೇ ಕೃಷ್ಣ (ಕ್ರಿ.ಶ. ೯೬೦ ರಿಂದ ೯೭೦) ಮೊದಲಾದವರು ಪರಾಕ್ರಮಿಗಳಾಗಿದ್ದು ಉತ್ತರ ಹಿಮಾಲಯದವರೆಗೆ ಯಶಸ್ವಿ ದಿಗ್ವಿಜಯಗಳನ್ನು ನಡೆಸಿದರು. ಪ್ರಜೆಗಳ ಹಿತವನ್ನು ಗಮನದಲ್ಲಿಟ್ಟುಕೊಂಡ ಆಳ್ವಿಕೆ ನಡೆಸಿದ ಮಹಾಮಹಿಮರು. ಧಾರ್ಮಿಕ ಅಸಹಿಷ್ಣುತೆ ರಾಷ್ಟ್ರಕೂಟರ ಇತಿಹಾಸದಲ್ಲಿಯೇ ಇಲ್ಲ. ಅನ್ಯ ಧರ್ಮಗಳನ್ನು ವಿಶಾಲ ದೃಷ್ಟಿಯಿಂದ ನೋಡಿ ಗೌರವಿಸಿದ ಧೀರರು, ಶಿಕ್ಷಣ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಶಿಲ್ಪಕಲೆ, ವರ್ಣಚಿತ್ರ, ಮೂರ್ತಿಶಿಲ್ಪ ಮುಂತಾದ ಎಲ್ಲ ವಿಭಾಗಗಳಲ್ಲಿ ಅವಿಸ್ಮರಣೀಯ ಸಾಧನೆ ಮಾಡಿದ್ದಾರೆ. ಕಾವೇರಿಯಿಂದ ಗೋದಾವರಿ ನದಿಯವರೆಗಿನ ವಿಶಾಲ ರಾಜ್ಯಕ್ಕೆ ಅಧಿಪತಿಗಳಾಗಿ ಆಳ್ವಿಕೆ ನಡೆಸಿದ್ದಾರೆ. ಕ್ರಿ.ಶ. ೮೫೧ ರಲ್ಲಿ ಅರಬ್ ಪ್ರವಾಸಿ ಸುಲೈಮಾನ್ ರಾಷ್ಟ್ರಕೂಟ ಆಸ್ಥಾನವನ್ನು ಸಂದರ್ಶಿಸಿ ಜಗತ್ತಿನ ನಾಲ್ಕು ಸಾಮ್ರಾಜ್ಯಗಳಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯವು ಒಂದೊಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಆ ಮೂಲಕ ದೇಶಿಯವಾಗಿದಲ್ಲದೇ ವಿದೇಶಿಯವರಿಂದಲೂ ಮೆಚ್ಚುಗೆ ಪಡೆಯುವಷ್ಟು ರಾಷ್ಟ್ರಕೂಟ ಅರಸರು ಅಗ್ರಗಣ್ಯರು. ಅಷ್ಟೇ ಅಲ್ಲದೇ ಇವರ ಕಾಲಾವಧಿಯಲ್ಲಿ ಮುಗಳಖೋಡದಲ್ಲಿ ಕೂಡಾ ಹಲವಾರು ದೇವಾಲಯುಗಳ ನಿರ್ಮಾಣವನ್ನು ಕಾಣಬಹುದು. ಅದರಲ್ಲಿಯ ಒಂದು ದೇವಾಲಯುವೆಂದರೆ **“ದೇಗುಲಗುಡಿ”**. ಈ ದೇವಾಲಯುವು ರಾಷ್ಟ್ರಕೂಟರ ದೊರೆ ಅಮೋಘವರ್ಷ ನೃಪತುಂಗನ ಕಾಲಾವಧಿಯಲ್ಲಿ ನಿರ್ಮಾಣವಾಯಿತೆಂದು ಹೇಳಲಾಗುತ್ತದೆ. ಗ್ರಾಮದಲ್ಲಿ ಇವರ ಆಳ್ವಿಕೆಯ ನಿದರ್ಶನವಾಗಿದೆ.

೩.೪ ಸವದತ್ತಿ ರಟ್ಟರು – (ಕ್ರಿ.ಶ. ೯೩೦ ರಿಂದ ೧೨೩೦) :

ಕನ್ನಡ ನಾಡಿನ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಹೊಂದಿದ್ದು, ಹಲವಾರು ಚಿಕ್ಕ ದೊಡ್ಡ ರಾಜಮನೆತನಗಳ ಆಳ್ವಿಕೆಗೆ ಕಾರಣವಾಗಿದೆ. ಅಂತಹವುಗಳಲ್ಲಿ ಸವದತ್ತಿ ರಟ್ಟರ ರಾಜ್ಯವು ಒಂದಾಗಿತ್ತು. ಇವರು ಸವದತ್ತಿಯನ್ನು ತಮ್ಮ ರಾಜಧಾನಿಯನ್ನಾಗಿಸಿಕೊಂಡು ಸವದತ್ತಿಯ ರಟ್ಟರು ಎಂದು ಪ್ರಸಿದ್ಧರಾಗಿದ್ದರು. ಇವರು ಕಲ್ಯಾಣ ಚಾಳುಕ್ಯರ ಮತ್ತು ರಾಷ್ಟ್ರಕೂಟರ ಮಾಂಡಲಿಕರಾಗಿದ್ದರು. ಇವರ ಆಳ್ವಿಕೆ ನಡೆಸಿದ ನಾಡನ್ನೂ ಕುಹೂಂಡಿ ಮೂಸಾಸಿರವೆಂದು ಕರೆಯಲಾಗಿದೆ[೧೬]. ಇಂತಹ ನಾಡಿನಲ್ಲಿ ಮುಗಳಖೋಡವು ಸೇರಿದ್ದು, ಅವರ ಆಳ್ವಿಕೆಗೆ ಒಳಪಟ್ಟಿತ್ತು. ಇವರು ತಮ್ಮನ್ನು ಲಟ್ಟಲಾಪುರಾವಧೀಶ್ವರರೆಂದು ಕರೆದುಕೊಂಡಿದ್ದಾರೆ. ಅಂದರೆ ಮಳಖೇಡದ ರಾಷ್ಟ್ರಕೂಟ ವಂಶಜರೆಂದು ಶಾಸನಗಳಲ್ಲಿ ವರ್ಣಿತವಾಗಿರುವುದು ಕಂಡುಬರುತ್ತದೆ[೧೭].

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳಲ್ಲಿ ರಾಷ್ಟ್ರಕೂಟರ ವಂಶಜರು ಪ್ರಮುಖರಾಗಿದ್ದರು. ಇವರು ಆಳ್ವಿಕೆ ನಡೆಸಿದ್ದು ೮ನೇ ಮತ್ತು ೯ನೇ ಶತಮಾನವಾಗಿತ್ತು. ಅಚ್ಚಕನ್ನಡಿಗರಾದ ಈ ವಂಶಜರ ಮೂಲ ಪುರುಷ ದಂತಿನೆಂಬುವನ್ನು ಆಗಿದ್ದನು. ಇತನ ನಂತರ ಉತ್ತರಾಧಿಕಾರಿಯಾದ ಅರಸರಲ್ಲಿ ೩ನೇ ಕರ್ಕನು ಪ್ರಮುಖನಾಗಿದ್ದನು. ಇವನಿಗೆ ರಟ್ಟ ಎಂಬ ಹೆಸರಿತ್ತು. ಅವನ ಮಗನಾದ ಇಂದ್ರನಿಗೆ ರಾಷ್ಟ್ರಕೂಟ ಎಂಬ ಬಿರುದು ಇತ್ತು[೧೮]. ರಟ್ಟ ಎನ್ನುವ ಕನ್ನಡ ಮಾತು ತೋಳಬಲವನ್ನು ಸೂಚಿಸುವ ಪದವಾಗಿದೆ. ರಟ್ಟ ಎಂಬ ಮಾತಿಗೆ ಸಮಾನವಾದ ಅರ್ಥವನ್ನು ಸೂಚಿಸುವ ಪದ 'ರಟ್ಟರು ಕೂಟ' ಎನ್ನುವುದೇ ಮುಂದೆ ರಾಷ್ಟ್ರಕೂಟ ಎಂದಾಯಿತು. ಎಂಬುದಾಗಿ 'ಕರ್ನಾಟಕ ಇತಿಹಾಸ' ದರ್ಶನದಲ್ಲಿ ಎಂ. ವಿ. ಕೃಷ್ಣರಾವ ಹಾಗೂ ಕೇಶವ ಭಟ್ಟರು ಹೇಳುತ್ತಾರೆ.

ಮುಂದೆ ಇವರು ಕಲ್ಯಾಣದ ಚಾಳುಕ್ಯರು ಮತ್ತು ಕಳಚೂರಿಗಳ ಸಾಮಂತರಾಗಿ ಮುಂದುವರೆದರು. ಆಗ ಸವದತ್ತಿ, ಗೋಕಾಕ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ ಮತ್ತು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಪಶ್ಚಿಮ ಭಾಗ ಮತ್ತು ಜಮಖಂಡಿ ತಾಲೂಕುಗಳ ಕುಹೂಂಡಿ ಮೂರು ಸಾವಿರ ಪ್ರದೇಶದ ಭಾಗಗಳಾಗಿದ್ದವು.

ರಟ್ಟರ ಆಳ್ವಿಕೆಯ ಅರಸೂರುಗಳನ್ನು ನಾವು ಈ ಕೆಳಗಿನಂತೆ ತಿಳಿಯಬಹುದಾಗಿದೆ.

೩೦೦ ವರ್ಷಗಳ ಅವಧಿಯ ರಟ್ಟರ ಸುವರ್ಣಯುಗವೆಂದು ಪ್ರಸಿದ್ಧವಾಗಿದೆ. ಇಂದಿನ ಬೆಳಗಾವಿ ಜಿಲ್ಲೆಯ ಸವದತ್ತಿ ಇವರ ರಾಜಧಾನಿಯಾಗಿತ್ತು. ಶಾಸನವೊಂದರಲ್ಲಿ ತಿಳಿಸುವಂತೆ ಇವರ ವಂಶಾವಳಿ ಈ ಕೆಳಗಿನಂತಿದೆ.

- **ನನ್ನ** (ಕ್ರಿ.ಶ. ೯೩೦)
  - **ಕತ್ತ** (ಕಾರ್ತವೀರ್ಯ ೨ (ಕ್ರಿ.ಶ. ೯೮೦) ೨ನೇ ತೈಲಪನ ಸಾಮಂತ ಇವನ ಕಾಲದ ಶಾಸನ ಸೊಗಲದಲ್ಲಿದೆ.)
    - **ದಾಯಿಗ**
    - **ಕಣ್ಣಕೈರ**
      - **ಎರಗ** (ಕ್ರಿ.ಶ. ೧೦೪೦) (ಚಾಲುಕ್ಯ ೧ನೇ ಜಯಸಿಂಹನ ಸಾಮಂತ)
      - **ಅಂಕ** (ಕ್ರಿ.ಶ. ೧೦೪೮) (೧ನೇ ಸೋಮೇಶ್ವರನ ಸಾಮಂತ)
        - **ಕಣ್ಣ** (೨ನೇ ಕಣ್ಣಕೈರ)
        - **೨ನೇ ಕಾರ್ತವೀರ್ಯ** (೨ನೇ ಸೋಮೇಶ್ವರನ ಸಾಮಂತ)
          - **ಇಮ್ಮಡಿಸೇನ**
            - **೩ನೇ ಕಾರ್ತವೀರ್ಯ**
              - **ಲಕ್ಷ್ಮೀದೇವ** (ಸ್ವತಂತ್ರ ಆಳ್ವಿಕೆ)
                - **೪ನೇ ಕಾರ್ತವೀರ್ಯ**
                  - **೨ನೇ ಲಕ್ಷ್ಮೀದೇವ**
                - **ಮಲ್ಲಿಕಾರ್ಜುನ**

ಈ ಮನೆತನದ ಮೊದಲ ದೊರೆ ನನ್ನ

ನನ್ನ :

ಈತ ಸದೃಢಕಾಯುದವನಾದುದರಿಂದ **'ನನ್ನ ಭೂಪಾನನುಪವುರೂಪಂ'** ನೆಂದು ವರ್ಣಿಸಲಾಗಿದೆ[೧೯]. ಇವನ ನಂತರ ಕತ್ತ ಅಥವಾ ಕಾರ್ತವೀರ್ಯ **'ಕುಹೂಂಡಿ ವುಊಸಾವಿರ'** ನಾಡನ್ನು ಆಳುತ್ತಿದ್ದನು. ಈತನ ಕಾಲದಲ್ಲಿ ನಾಡಿನ ಅಭಿವೃದ್ಧಿ ಕಾರ್ಯ ಪ್ರಾರಂಭವಾಯಿತು. ರಾಜ್ಯದ ವಿಸ್ತರಣೆ, ವೈಭವಕ್ಕೆ ಈತ ಬುನಾದಿ ಹಾಕಿದ. ಕಮಲಾದಿತ್ಯನೆಂಬ ಕವಿ ಈತನ ಆಶ್ರಯದಲ್ಲಿದ್ದು, ಈತನು ರಚಿಸಿದ ಶಾಸನವೊಂದು ಸೊಗಲದಲ್ಲಿದ್ದು ಈ ದೊರೆಯ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಶಾಸನ ತಿಳಿಸುವಂತೆ ಈ ನಾಡಿನ ಕಂಬಿಯೆಬ್ಬೆಯ ಸೊಗಲದಲ್ಲಿರುವ ವಿದ್ಯಾಕೇಂದ್ರದ ತಪೋವನಕ್ಕೆ ಅಲ್ಲಿಯ ಸುವರ್ಣಾಕ್ಷಿ ದೇವರಿಗೆ ದಾನ ನೀಡಿದ್ದಾಗಿ ವಿವರಿಸುತ್ತದೆ. ಕಾರ್ತವೀರ್ಯನ ಹೃದಯ ವೈಶಾಲ್ಯತೆಯಿಂದಾಗಿ ಧನವಂತ ಸ್ತ್ರೀಪುರುಷರು ಸತ್ಕಾರ್ಯಕ್ಕೆ, ದಾನಧರ್ಮಕ್ಕೆ ಮನಸ್ಸುಳ್ಳವರು ಎಂಬುದು ತಿಳಿದು ಬರುತ್ತದೆ[೨೦]. ಇವನ ನಂತರ ಹಿರಿಯ ಮಗ ದಾವರಿ ಪಟ್ಟಕ್ಕೆ ಬಂದನು.

ದಾವರಿ (ದಾಯಿಗ) :

'ರಾಜನ್ವತಃ ಪ್ರಜಾಜಾತ ದಾವರಿನಾಮ' ಎನ್ನುವ ಈತ ಉತ್ತಮ ದೊರೆಯಾಗಿದ್ದನು. ರಟ್ಟ ರಾಜ್ಯವನ್ನು ವಿಸ್ತರಿಸಿ **'ರಟ್ಟರ ಮೇರು'** ಎಂಬ ಪ್ರಶಸ್ತಿಗೆ ಪಾತ್ರನಾಗಿದ್ದನು. ಇವನನ್ನು ಮನುನಿಭನೆಂದು **'ಕಾರ್ಯನಿಧಿ'**, **'ದಯಾಪರ'** ಎಂಬುದಾಗಿ ಶಾಸನದಲ್ಲಿ ವರ್ಣಿಸಲಾಗಿದೆ[೨೧].

ಕಣ್ಣ (ಕಣ್ಣಕೈರ) :

'ತನ್ನನುತ ಪ್ರತಾಪಿಸ್ಯಾತ್ ಕನ್ನಕೈರೋ ವುಹಪತಿ' ಎಂದು ಸವದತ್ತಿ ಶಾಸನ ತಿಳಿಸುತ್ತದೆ. ಅಣ್ಣ ದಾಯಿಗನ ನಂತರ ಅಧಿಕಾರಕ್ಕೆ ಬಂದ ಈತನೂ ಧೀರನೂ, ಉದಾರಿಯೂ ಆಗಿದ್ದನು.

ಎರಗ (ಕ್ರಿ.ಶ. ೧೦೪೦) :

ಕಲ್ಯಾಣ ಚಾಳುಕ್ಯರ ದೊರೆ ೨ನೇ ಜಯಸಿಂಹನೊಂದಿಗೆ **'ಸಿಂಗನ ಗರುಡ'** ಎಂಬ ಬಿರುದನ್ನು ಪಡೆದ ಎರಗನು ಉತ್ತಮ ಆಡಳಿತಗಾರನೂ ಹೌದು. ರಾಜ್ಯವನ್ನು ರಕ್ಷಿಸಿದಷ್ಟೇ ಅಲ್ಲದೇ ಶೂರನು ಹಾಗೂ ದಕ್ಷ ಮಂತ್ರಿಯನ್ನು ಪಡೆದಿದ್ದನು.

> **"ಕುಂಡಿ ಪಟ್ಟಣದ ರಾಜ್ಯದೊಳ ರಾಜ್ಯಂಗೆಯ್ಯುತ್ತಮಿರ್ದು ಎರಗ ದೇವರಸರ ಶ್ರೀ ಮನ್ಮಹಾ ಪ್ರಧಾನಂ ಧನ್ನಾಕರ್ಗೆಕೊಂಡಿ ಮೂರು ಸಾಸಿರದ ಕುರಂಬೆಟ್ಟಂಗಪಣದ ಬಳಿಯ ಬಾಡ ಕಂಕನೂರ ಪ್ರಭುತ್ವಮಂ ಅಷ್ಟಭೋಗ ತೇಜ ಸಾಮ್ಯಸಹಿಮತಂ ದಾರಾಪೂರ್ವಕಂ"**

ಅಂದರೆ ಎರಗ ದೇವರಸನು ಮಹಾಪ್ರಧಾನ ದಂಡನಾಯಕನಾಗಿ ಮಾಡಿ ರಾಜನಿಗೆ ಕುರಂ ಬೆಟ್ಟ ಕಂಪಣದ ಬಳಿಯ ಬಾಡಕಂಕನೂರು ಪ್ರಭುತ್ವವನ್ನು ವಹಿಸಿಕೊಟ್ಟದ್ದನ್ನು ಕ್ರಿ.ಶ. ೧೦೪೧ರ ರಾಯಬಾಗ ಶಾಸನ ವಿವರಿಸುತ್ತದೆ[೨೨]. ಎರಗನು ಕೇವಲ ಪರಾಕ್ರಮ ಯೋಧನಲ್ಲದೇ ಸಾಹಿತ್ಯ ಲಲಿತ ಕಲೆಗಳ ಆರಾಧಕನೂ, ಸಂಗೀತ ಅಭಿರುಚಿಯುಳ್ಳವನೂ, ಕಲಾವಿದರ ಕವಿಗಳ ಆಶ್ರಯದಾತನೂ ಆಗಿದ್ದನು. **'ಸರಸ್ವತಿ ಕರ್ಣಕುಂಡಲ'** ಎಂಬುದಾಗಿ ಗೌರವಿಸಲ್ಪಟ್ಟಿದ್ದನು.

ಅಂಕ (ಸು. ಕ್ರಿ.ಶ. ೧೦೪೮) :

ಅಂಕನ ಕಾಲಕ್ಕೆ ರಟ್ಟರ ಪ್ರಾಬಲ್ಯ ಹೆಚ್ಚಿತ್ತು. ಮಧ್ಯ ಪರಾಕ್ರಮಿಯಾಗಿದ್ದ ಅಂಕನು ಅನೇಕ ಯುದ್ಧಗಳನ್ನು ಎದುರಿಸಿದನು. ದಕ್ಷಿಣದ ಚೋಳರು ದಂಡೆತ್ತಿ ಬಂದಾಗ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ಆ ರಾಜ್ಯವನ್ನು ರಕ್ಷಿಸಿದ ಕೀರ್ತಿ ಅಂಕನಿಗೆ ಸಲ್ಲುತ್ತದೆ. ನಂತರ ಸುಗಂಧವರ್ತಿ ರಾಜಧಾನಿಯಾಗಿ ಅಸ್ತಿತ್ವಕ್ಕೆ ಬಂದದ್ದು ಈ ಕಾಲದಲ್ಲೇ. ವಿದ್ಯಾಪ್ರೇಮಿಯಾಗಿದ್ದ ಕೊಕಟನೂರ (ಈಗಿನ ಅಥಣಿ ತಾಲೂಕಿನ)ನಲ್ಲಿ ವಿದ್ಯಾಕೇಂದ್ರ ಸ್ಥಾಪಿಸಿ ಉಪಾಧ್ಯಯರಿಗೆ, ವಿದ್ಯಾರ್ಥಿಗಳಿಗೆ ಬೂಧಾನ ಮಾಡಿದ ವಿವರ ಶಾಸನದಲ್ಲಿದೆ[೨೩].

ಸೇನ (ಕಾಳಸೇನ) :

೬ನೇ ವಿಕ್ರಮಾದಿತ್ಯನ ಸಾವಂತ ಸೇನ ದಕ್ಷ ಆಡಳಿತಗಾರ. ಈತನ ರಾಣಿ ಮೈಳಲದೇವಿ. ಪ್ರಜೆಗಳು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಈತನು ಪರಾಕ್ರಮಿಯೂ ಹೌದು. ಈ ದಂಪತಿಗಳ ಮಗನೇ ಕಣ್ಣ.

ಕಣ್ಣ (೨ನೇ ಕಣ್ಣಕೈರ) (ಸು. ಕ್ರಿ.ಶ. ೧೦೮೮) :

ಸೇನನ ನಂತರ ಕಣ್ಣ ಸಿಂಹಾಸನಕ್ಕೆ ಬಂದನು. ಸಹೋದರ ೩ನೇ ಕಾರ್ತವೀರ್ಯನು ಈತನಿಗೆ ಬೆಂಗಾವಲಾಗಿದ್ದನು. ಲಾಟರ ವಿರುದ್ಧ ದಂಡಯಾತ್ರೆ ಕೈಗೊಂಡು ಯಶಸ್ವಿಯಾಗಿದ್ದರಿಂದ ಈತನೊಂದಿಗೆ ವೈವಾಹಿಕ ಸಂಬಂಧ ನೆರವೇರಿಸಿ ತಮ್ಮ ರಾಜಕುಮಾರಿಯನ್ನು ದೊರೆಗೆ ವಿವಾಹ ಮಾಡಿಕೊಟ್ಟಿದ್ದರು.

ದಕ್ಷನೂ, ಪರಾಕ್ರಮಿಯೂ, ಧರ್ಮಪುತ್ರನೂ ಆಗಿದ್ದನು. ಚಕ್ರವರ್ತಿ ೬ನೇ ವಿಕ್ರಮಾದಿತ್ಯನಿಗೆ ಈತ ಆಡಳಿತ ಸಲಹೆಗಾರನಾಗಿದ್ದನು. ಕಣ್ಣನಿಗೆ **'ಕನಕಪ್ರಭಾಸಿದ್ಧಾಂತದೇವ'** ನೆಂಬ ಗುರುವಿದ್ದು ಆತನು ವೇದಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನು. ಅವನು ಶಿಷ್ಯ ಕಣ್ಣಕೈರನೂ ವೇದಾಂತ ಧರ್ಮದಲ್ಲಿ ಆಸಕ್ತಿ ಹೊಂದಿದನೆಂಬುದಕ್ಕೆ ಕಣ್ಣಕೈರ ವೃಪಃ ಖ್ಯಾತೋನೃತ್ಯಗೀತಾದಿ ಕೋವಿದ[೨೪] ಬಹುಮುಖ ಪ್ರತಿಭೆಯುಳ್ಳ ಈತ ಸಾಕಷ್ಟು ಜನಪ್ರಿಯತೆ ಗಳಿಸಿದ್ದನು.

೨ನೇ ಕಾರ್ತವೀರ್ಯ (ಕ್ರಿ.ಶ. ೧೦೮೦ ರಿಂದ ೧೦೯೬) :

ಕಣ್ಣಕೈರನ ನಂತರ ಅವನ ಸಹೋದರ ಕಾರ್ತವೀರ್ಯ ಅಧಿಕಾರಕ್ಕೆ ಬಂದನು. ಈತನಿಗೆ **'ಯುದ್ಧಭಯಂಕರ'**ನೆಂಬ ಬಿರುದು ಇತ್ತು. ಕಾಮಧೇನುವಿನಂತೆ ಸುಂದರವಾಗಿದ್ದ ಈತನ ವರ್ಣನೆ ಶಾಸನದಲ್ಲಿದೆ[೨೫]. "ಲತ್ತಲೂರ್ಪುರವರಾಧೀಶ್ವರಂ ತ್ರಿವಳಿತೂರ್ಯ್ಯನಿಗೋಷಣಂ ರಟ್ಟ ಕುಳಭೂಪ ಸಿಂಧೂರ ಲಾಂಛನಂ ವಿವೇಕ ವಿರಂಚನಂ ಸುವರ್ಣ ಗರುಡ ಧ್ವಜಂ ಸಹಜ ಮಕರ ಧ್ವಜ ನಾಮಾದಿ ಸಮುಸ್ತ ಪ್ರಶಸ್ತಿ ಸಹಿತಂ ಶ್ರೀಮುನ್ಮ ಹಾಮುಣ್ಣಳೇಶ್ವರ ಕಾರ್ತವೀರ್ಯನೃಪ;". ಈತನ ರಾಣಿ ಬಾಗಲಾದೇವಿ, ದಾನಧರ್ಮಕ್ಕೆ ಹೆಸರಾಗಿದ್ದಳು. ಪ್ರಜೆಗಳಿಂದ ವಿಶ್ವಮಾತೆಯೆನಿಸಿದ್ದಳು. ಮತ್ತೊಬ್ಬ ರಾಣಿ ಮೈದಲದೇವಿ ಪಾರ್ವತಿಯಂತಿದ್ದ ಇವಳನ್ನು **'ಗಿರಿಸುತೆ'** ಎಂದು ಸಂಭೋಧಿಸುತ್ತಿದ್ದರು. ಇವರ ಮಗನೇ ೨ನೇ ಸೇನ.

೨ನೇ ಸೇನ (ಕಾಲಸೇನ) (ಕ್ರಿ.ಶ.೧೦೯೬) :

ಈವರೆಗಿನ ರಟ್ಟ ಸಂತತಿಯಲ್ಲಿ ಪ್ರಮುಖ ದೊರೆ ೨ನೇ ಸೇನ. ಕುಹೂಂಡಿ ಮೂಸಾಸಿರ ನಾಡಿಗೆ ಅಧಿಪತಿ ೪೭ ವರ್ಷಗಳ ದೀರ್ಘ ಆಳ್ವಿಕೆ ರಟ್ಟ ಇತಿಹಾಸದಲ್ಲಿ ಅವಿಸ್ಮರಣೀಯ ಘಟನೆ. ಪ್ರಜೆಗಳು ಹೆಮ್ಮೆಯಿಂದ **'ಪೃಥ್ವಿವಲ್ಲಭ'**ನೆಂದು ಹೊಗಳಿದ್ದಾರೆ. ಶತೃಗಳ ಶಿರ ಚಂಡಾಡುವುದರಲ್ಲಿ ಈತ ನಿಪುಣ, ದುಷ್ಟ ಶಿಕ್ಷಕ, ಶಿಷ್ಟ ರಕ್ಷಕನಾಗಿ ದಕ್ಷತೆಯಿಂದ ರಾಜ್ಯಭಾರ ಮಾಡಿ ಜನಮೆಚ್ಚುಗೆ ಪಡೆದಿದ್ದನು. ರಾಜ್ಯ ಸಂಪತ್ತಿನ ಒಂದು ಭಾಗವನ್ನು ದೊರೆಯು ಕಲಾಭಿವೃದ್ಧಿಗಾಗಿ ವಿನಿಯೋಗಿಸುವುದರ ಜೊತೆಗೆ ಒಂದು ವಿದ್ವಾಂಸರಿಗೆ ಉದಾರ ಪ್ರೋತ್ಸಾಹ ನೀಡಿದ್ದನು. ಸ್ವತಃ ವಿದ್ವಾಂಸನಾಗಿದ್ದು ವಿದ್ಯಾಭಿಮಾನಿಯೂ, ವಿದ್ವಾಂಸರ ಸಭೆಯಲ್ಲಿ ಸೂರ್ಯನಂತೆ ಶೋಭಿಸುತ್ತಿದ್ದನೆಂದು ಶಾಸನ ಉಲ್ಲೇಖಿಸುತ್ತದೆ[೨೬]. ಈತನ ಪಟ್ಟಮಹಿಷಿ ಲಖುವಾದೇವಿ ಮಹಾದಾನಿಯಾಗಿದ್ದಳು. ಹಲವಾರು ದೇವಾಲಯಗಳನ್ನು ಹಾಗೂ ಬಸದಿಗಳನ್ನು ಕಟ್ಟಿಸಿದ ಹಾಗೂ ಜೀರ್ಣೋದ್ಧಾರ ಮಾಡಿದ ವಿವರಗಳನ್ನು ಶಾಸನ ತಿಳಿಸುತ್ತದೆ[೨೭].

೩ನೇ ಕಾರ್ತವೀರ್ಯ (ಕ್ರಿ.ಶ. ೧೧೩೦ – ೧೧೫೩) :

ಸೇನನ ನಂತರ ಅಧಿಕಾರಕ್ಕೆ ಬಂದ ೩ನೇ ಕಾರ್ತವೀರ್ಯನ ಆಳ್ವಿಕೆಯಲ್ಲಿ ರಟ್ಟರ ಕೀರ್ತಿ ಉತ್ತುಂಗಕ್ಕೇರಿತು. ತಾನು ಸ್ವತಂತ್ರನಾಗಲು ಬಯಸಿದ ಕಾರ್ತವೀರ್ಯ ನೇಸರಗಿಯಲ್ಲೊಂದು ರಾಜಧಾನಿ ಸ್ಥಾಪಿಸಿದನು. ನಂತರ ಕ್ರಿ.ಶ. ೧೧೮೪ರ ವೇಳೆಗೆ ಹೊಯ್ಸಳ ಹಾಗೂ ಯಾದವರ ಪ್ರಾಬಲ್ಯ ಕುಂಠಿತಗೊಂಡ ನಂತರ ಸಂಪೂರ್ಣ ಸ್ವತಂತ್ರಗೊಂಡು ಸವದತ್ತಿಯಿಂದ ಬೆಳಗಾವಿಗೆ ರಾಜಧಾನಿ ಸ್ಥಳಾಂತರಗೊಂಡಿತು[೩೮]. ಈತ ಸರ್ವಧರ್ಮಕ್ಕೆ ಪ್ರೋತ್ಸಾಹ ನೀಡಿದ್ದನು. ಅನೇಕ ದೇವಾಲಯಗಳನ್ನು ನಿರ್ಮಿಸಿದ್ದನು. ಈತನ ಪತ್ನಿ ಪದ್ಮಲಾದೇವಿ ರೂಪವತಿಯೂ, ಕಲಾಕೌಶಲ್ಯವುಳ್ಳವಳೂ ಹೌದು. ಈಕೆ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದಳು. ಈ ಅರಸನ ಆಜ್ಞೆಯ ಮೇರೆಗೆ ಮಾಂಡಳಿಕ ಗೊಂಕರಸನು ತೇರದಾಳದಲ್ಲಿ ಜಿನಾಲಯ ಕಟ್ಟಿಸಿ ಅದಕ್ಕೆ ಗೊಂಕ ಜಿನಾಲಯವೆಂದು ಹೆಸರಿಸಿ ಅಲ್ಲಿಗೆ ಮಾಘನಂದಿ ಸೈದ್ಧಾಂತಿಕರನ್ನು ಕರೆಸಿ ಶ್ರೀನೇಮಿನಾಥನನ್ನು ಪ್ರತಿಷ್ಠೆ ಮಾಡಿಸಿದ್ದನು ಎಂದು ರಾಯಬಾಗ ಶಾಸನ ತಿಳಿಸುತ್ತದೆ[೩೯].

ಲಕ್ಷ್ಮೀದೇವ (ಕ್ರಿ.ಶ. ೧೧೭೦ – ೧೧೯೦) :

ಸುಮಾರು ೨೦ ವರ್ಷ ಆಳಿದ ಲಕ್ಷ್ಮೀದೇವ ಅತ್ಯಂತ ಸಮರ್ಥದೊರೆ ಗೋವೆ ಕದಂಬರಿಂದ ವೇಣುಗ್ರಾಮವನ್ನು ಗೆದ್ದು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಪ್ರಜೆಗಳಿಂದ ಈತ ಮನ್ಮಥ, ಚಂದ್ರ ಎಂಬುದಾಗಿ ಕರೆಸಿಕೊಂಡಿದ್ದರು. **'ರಟ್ಟರ ಕುಲಾಗ್ರಣಿ"** ಎಂದು ಶಾಸನದಲ್ಲಿ ಹೇಳಲಾಗಿದೆ. ಬಲಚಕ್ರವರ್ತಿ ಎಂಬ ಬ್ರಾಹ್ಮಣರಿಗೆ ದಾನ ನೀಡಿದ್ದನು. ಈತನ ರಾಣಿ ಚಂದ್ರಕಾದೇವಿ ಇವರ ಗುಣ ವಿಶೇಷತೆಗಳನ್ನು ನೇಮಿಚಂದ್ರನೆಂಬ ಪ್ರಸಿದ್ಧ ಜೈನ ಕವಿ ಮುಕ್ತವಾಗಿ ಹೊಗಳಿದ್ದಾನೆ[೪೦].

೪ನೇ ಕಾರ್ತವೀರ್ಯ (ಕ್ರಿ.ಶ. ೧೧೯೯) :

ಅಲ್ಪ ಕಾಲದಲ್ಲಿ ಮಹತ್ವದ ಸಾಧನೆ ೪ನೇ ಕಾರ್ತವೀರ್ಯನ ಕಾಲಕ್ಕೆ ನಡೆಯಿತು. ರಾಜ್ಯ ವಿಸ್ತರಣೆಗೆ ಹಾಗೂ ಸಂಸ್ಕೃತಿಯ ಬೆಳವಣಿಗೆ ಏಕಕಾಲದಲ್ಲಿ ನಡೆದವು. ರಾಜ್ಯದೆಲ್ಲೆಡೆ ಸುಖಶಾಂತಿ ನೆಲೆಸಿತ್ತು. ಈತನಿಗೆ ಇಬ್ಬರು ರಾಣಿಯರಿದ್ದು ದಾನಧರ್ಮ ಪರಾಯಣರಾಗಿದ್ದರು. ಚತುರ್ಭಾಷಾ ಕವಿ ಬಾಳಚಂದ್ರನು ರಚಿಸಿದ ಬೆಳಗಾವಿ ಶಾಸನದಲ್ಲಿ ಇವರ ಸಾಧನೆಯನ್ನು ವರ್ಣಿಸಿದ್ದಾನೆ. ಈ ಕಾಲದಲ್ಲಿ ನಿರ್ಮಾಣಗೊಂಡ ಶಾಂತಿನಾಥ ಜಿನಾಲಯಕ್ಕೆ ಕೆಲಭೂಮಿ ಹಾಗೂ ಗ್ರಾಮಗಳನ್ನು ದತ್ತಿಯಾಗಿ ನೀಡಿದ್ದನು. ಅದೇ ಶಾಸನ ವಿವರಿಸುತ್ತದೆ[೪೧]. ಈ ದೊರೆಯ ಸಾಧನೆ ಕಲ್ಲೊಳ್ಳಿ ಶಾಸನದಲ್ಲಿಯೂ ಮುಂದುವರೆದಿದೆ. ಈ ಶಾಸನದ ರಚನಕಾರ ಪಾರ್ಶ್ವಪಂಡಿತ ಈತ ಜನ್ನನ ಸಮಕಾಲೀನನಾಗಿದ್ದು ಪಾರ್ಶ್ವನಾಥ ಪುರಾಣವನ್ನು ಚಂಪೂಕಾವ್ಯದಲ್ಲಿ ರಚಿಸಿದ್ದಾನೆ. ಈ ೨ನೇ ಗುಣವರ್ಮನು ಪುಷ್ಪದಂತ ಪುರಾಣವನ್ನು ಚಂದ್ರನಾಥಾಷ್ಟಕರವನ್ನು ರಚಿಸಿದ್ದಾನೆ. ಇದರಿಂದಾಗಿ ಕಲೆ ಮತ್ತು ಸಾಹಿತ್ಯ ಈ ಕಾಲದಲ್ಲಿ ಅಭಿವೃದ್ಧಿ ಹೊಂದಿತು.

[illegible]

[illegible]

[illegible]

[illegible]

[illegible]

[illegible]

[illegible]

೨ನೇ ಲಕ್ಷ್ಮೀದೇವ (ಕ್ರಿ.ಶ. ೧೨೨೮) :

ರಟ್ಟವಂಶದ ಕೊನೆಯ ಪ್ರಬಲ ದೊರೆ ಎಂದರೆ ೨ನೇ ಲಕ್ಷ್ಮೀದೇವ. ಈತನಿಗೆ **'ಬೊಪ್ಪನಸಿಂಗ'** ಎಂಬ ಬಿರುದು ಇತ್ತು. ಈತನಿಗೆ ಮುನಿಚಂದ್ರನೆಂಬುವರ ಶಸ್ತ್ರ, ಶಾಸ್ತ್ರ, ಶಿಕ್ಷಾಗುರು ಮತ್ತು ಸಚಿವರಾಗಿ ದೊರೆತಿದ್ದನು. ಆಸ್ಥಾನದಲ್ಲಿ ಶಾಂತಿನಾಥ ಮತ್ತು ಮಲ್ಲಿಕಾರ್ಜುನರೆಂಬ ಅಮಾತ್ಯರಿದ್ದರು. ಮುನಿಚಂದ್ರನೂ ರಾಜತಂತ್ರ ನಿಪುಣನೂ, ಕವಿಯೂ ಆಗಿದ್ದನು. ಲಕ್ಷ್ಮೀದೇವನ ಮೊದಲ ರಾಜಧಾನಿ ಸುಗಂಧವರ್ತಿಯ ಹೊರವಲಯದಲ್ಲಿ ನಾಗರಿಕತೆಯ ಬಳಿ ತನ್ನ ತಂದೆಯ ಸ್ಮರನಾರ್ಥ ಮಲ್ಲಿನಾಥ ದೇವಾಲಯವನ್ನು ಕಟ್ಟಿಸಿದನು. ಶ್ರೀಶೈಲ ಪರ್ವತಕ್ಕೆ ಬೇಟಿ ನಿಡಿ ಅಲ್ಲಿನ ಶಿಲಾರಚಿತ ಲಿಂಗವನ್ನು ತಂದು ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿದನು[೩೨]. ಇವನ ಆಳ್ವಿಕೆಯ ನಂತರ ರಟ್ಟರ ಅವನತಿ ಪ್ರಾರಂಭವಾಗಿ ಮುಂದುವರೆದರು ಅಷ್ಟೇ ಅಲ್ಲದೇ ಈ ಮುಗಳಖೋಡದಲ್ಲಿಯು ಕೂಡಾ ಇವರ ಆಳ್ವಿಕೆಯನ್ನು ಕಾಣಬಹುದಾಗಿದೆ.

೩.೫ ಕಲ್ಯಾಣ ಚಾಳುಕ್ಯರು – (ಕ್ರಿ.ಶ. ೯೩೩ ರಿಂದ ೧೧೯೮) :

ಕಲ್ಯಾಣದ ಚಾಳುಕ್ಯರು ತಾವು ಬದಾಮಿಯ ಚಾಳುಕ್ಯರ ವಂಶಜರೆಂದೇ ಹೇಳಿಕೊಂಡಿದ್ದಾರೆ. ಬಾದಾಮಿಯ ಎರಡನೇ ವಿಕ್ರಮಾದಿತ್ಯನ ಸಹೋದರನಾದ ಭೀಮನ ನಂತರ ಮೂರನೇ ಕೀರ್ತಿವರ್ಮನು ಪ್ರಮುಖ ಆಡಳಿತ ನಡೆಸಿದನು. ಅನಂತರ ಇವನ ಮಗನಾದ ಒಂದನೇ ತೈಲನು ತನ್ನ ಉತ್ತರಾಧಿಕಾರತ್ವವನ್ನು ಮುಂದುವರೆಸಿದನು. ಮೂರನೇ ವಿಕ್ರಮಾದಿತ್ಯ, ವಿಕ್ರಮಾದಿತ್ಯನ ಎರಡನೇ ಭೀಮ, ಭೀಮನ ಪುತ್ರ ಒಂದನೇ ಅಯ್ಯಣ, ಅಯ್ಯಣನ ನಂತರ ಅವನ ಮಗ ತನುಜ, ನಾಲ್ಕನೆಯ ವಿಕ್ರಮಾದಿತ್ಯ ಇವರೆಲ್ಲರ ನಂತರ ವಿಕ್ರಮನ ಮಗನಾದ ಎರಡನೇ ತೈಲಪ ರಾಷ್ಟ್ರಕೂಟರನ್ನು ಪದಚ್ಯುತಿಗೊಳಿಸಿ ಅಧಿಕಾರ ವಹಿಸಿಕೊಂಡನು. ಒಂದನೇ ಭೀಮನ ನಂತರ ಏಳು ತಲೆಮಾರುಗಳ ಕಾಲ ಅಧಿಕಾರಚ್ಯುತರಾಗಿ ಚಾಲುಕ್ಯರು ಉಳಿಯಬೇಕಾಯಿತು.

ರಾಷ್ಟ್ರಕೂಟರ ಸಾಮಂತರಾಗಿ ಇವರು ಕರ್ನಾಟಕದಲ್ಲಿ ಆಳುತ್ತಿದ್ದರು. ಕ್ರಿ.ಶ. ೯೭೩ ರಲ್ಲಿ ಮಳಖೇಡದಲ್ಲಿ ಅಧಿಕಾರಗ್ರಹಣ ಮಾಡಿದ ತೈಲಪನು, ನಾಲ್ಕನೆಯ ವಿಕ್ರಮ ಮತ್ತು ತ್ರಿಪುರಿಯ ಕಳಚೂರಿ ವಂಶದ ರಾಜಕುಮಾರಿ ಬೊಂತಾದೇವಿಯ ಮಗ ಕ್ರಿ.ಶ. ೯೬೫ರ ಒಂದು ಶಾಸನದಂತೆ ಅವನು ತರ್ಡವಾಡಿ ೧೦೦೦ದ ಮಹಾ ಸಾಮಂತನಾಗಿದ್ದನು[೩೩]. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಈ ಭಾಗದಲ್ಲಿ ನಡೆದಿರುವುದು ತಿಳಿಯುತ್ತದೆ. ಕಲೆ ಹಾಗೂ ವಾಸ್ತುಶಿಲ್ಪಗಳು ಅವರ ಆಳ್ವಿಕೆಯ ನಿದರ್ಶನಗಳಾಗಿವೆ.

ಕಲ್ಯಾಣದ ಕಳಚೂರಿಗಳು – (ಕ್ರಿ.ಶ. ೧೧೫೬ – ೧೧೮೪) :

ಕಲಚೂರಿಗಳು ಕಲ್ಯಾಣದ ಚಾಳುಕ್ಯರ ಮಹಾಮಂಡಳೇಶ್ವರರಾಗಿ ಮುಂದೆ ಜಗದೇಕಮಲ್ಲನ ಆಳ್ವಿಕೆಯ ಅವಧಿಯಲ್ಲಿ ಸ್ವತಂತ್ರರಾದರು. ಇವರು ತಮ್ಮ ರಾಜ್ಯವನ್ನು ಉತ್ತರ ಕರ್ನಾಟಕದಾದ್ಯಂತ ವಿಸ್ತರಿಸಿಕೊಂಡಿದ್ದರು. ಗೋಕಾಕ ತಾಲೂಕಿನ ಉಮರಾಣಿ ಮತ್ತು ಅಥಣಿ ತಾಲೂಕಿನ ಕೊಕಟನೂರ ಶಾಸನ ತಿಳಿಸುವಂತೆ ಪೆರ್ಮಾಡಿ ದೊರೆ ಕರಹಾಡ–೪೦೦ದ ಆಳ್ವಿಕೆ ನೋಡಿಕೊಳ್ಳುತ್ತಿದ್ದನು. (ಪ್ರಸ್ತುತ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ) ಈ ಪೇರ್ಮಾಡಿಯು ೬ನೇ ವಿಕ್ರಮಾದಿತ್ಯನ ಮಗಳಾದ ನಾಗಲಾದೇವಿಯನ್ನು ವಿವಾಹವಾದನು.

ಎರಡನೇ ಬಿಜ್ಜಳ ಕ್ರಿ.ಶ. ೧೧೩೦ – ೬೮ ರವರೆಗೆ ರಾಜ್ಯವಾಳಿದನು. ಈತನು ಕಲ್ಯಾಣ ಚಾಳುಕ್ಯರ ಮಹಾಮಂಡಳೇಶ್ವರನಾಗಿದ್ದನು. ಹುಲಿ, ರಾಮತೀರ್ಥ, ಕೊಕಟನೂರು, ತೇಲಸಂಗ ಮೊದಲಾದ ಪ್ರದೇಶಗಳಲ್ಲಿ ದೊರೆತ ಶಾಸನಗಳು ಇವರ ಆಳ್ವಿಕೆಯ ವಿಷಯ ತಿಳಿಸುತ್ತವೆ. ರಾಮತೀರ್ಥ ಶಾಸನ ಆತನನ್ನು **"ಬುಜಬಲ ಚಕ್ರವರ್ತಿ ಬಿಜ್ಜಳದೇವ"** ಎಂದು ಕರೆಯುತ್ತದೆ. ಇವರ ಕಾಲದಲ್ಲಿ ಈ ರಾಜ್ಯದಲ್ಲಿ ಬಸವಣ್ಣನವರ ಸಾಮಾಜೋಧಾರ್ಮಿಕ ಕ್ರಾಂತಿಯಾಯಿತು.

ಕ್ರಿ.ಶ. ೧೧೬೭ – ೭೬ ರಲ್ಲಿ ಬಿಜ್ಜಳನ ಮಗ ಸೋವಿದೇವ ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ಕಲ್ಯಾಣದಿಂದ ಉಳವಿಯತ್ತ ಹೊರಟ ಶರಣರು ಸವದತ್ತಿಯ ಮುರಗೋಡ[೩೪] ಮತ್ತು ಬೆಳಗಾವಿ ಖಾನಾಪೂರ ಮಾರ್ಗವಾಗಿ ಬೆಳಗಾವಿ ಜಿಲ್ಲೆಯಲ್ಲಿಯ ತಲ್ಲೂರು, ಕಡಕೋಳ, ತಡಕೋಳ, ಕಾದ್ರೋಳ್ಳಿ ಮುಖಾಂತರ ಉಳಿವಿಗೆ ಹೋದರೆಂದು ಹೇಳಲಾಗುತ್ತದೆ. ಹಾಗಾಗಿ ಸೋವಿದೇವನ ಆಡಳಿತ ಬೆಳಗಾವಿ ಜಿಲ್ಲೆಗೆ ವಿಸ್ತರಿಸಿತ್ತೆಂದು ಹೇಳಬಹುದು.

ಸೋವಿದೇವನಿಗೆ ಸಂಬಂಧಿಸಿದ ಶಾಸನಗಳು ಅಥಣಿ ತಾಲೂಕಿನ ಕೊಕಟನೂರ ಮತ್ತು ತೇಲಸಂಗ[೩೫]ದಲ್ಲಿ ದೊರೆತಿವೆ. ಕೊಕಟನೂರ ಶಾಸನ ಹೇಳುವಂತೆ ನಾಗರಹಾಳ ಅಗ್ರಹಾರ ಕೊರಗ್ಗಟನೂರ (ಇಂದಿನ ಕೊಕಟನೂರ) ಕೈಬಿಟ್ಟ ಭೂದಾನದ ವಿಷಯವನ್ನು ತಿಳಿಸುತ್ತದೆ. ಈತನ ನಂತರ ದೇವಗಿರಿಯ ಯಾದವರು ಕಳಚೂರಿಗಳನ್ನು ಸೋಲಿಸಿ ಸ್ವತಂತ್ರವಾಗಿ ರಾಜ್ಯವಾಳಿದರು.

ದೇವಗಿರಿಯ ಯಾದವರು – (ಕ್ರಿ.ಶ. ೧೦೦೦ ರಿಂದ ೧೩೧೮) :

ದಕ್ಷಿಣ ಭಾರತದ ಚರಿತ್ರೆಯಲ್ಲಿ ಪ್ರಮುಖ ಹಿಂದೂ ರಾಜಮನೆತನವಾಗಿತ್ತು. ಇವರು ೧೨ನೇ ಶತಮಾನದ ಕೊನೆಯಲ್ಲಿ ಪರಮಾಧಿಕಾರವುಳ್ಳ ದೊರೆಗಳಾಗಿ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದರು.

ಹೇಮಾದ್ರಿ ಎಂಬ ೧೩ನೇ ಶತಮಾನದಲ್ಲಿದ್ದ ಸೇವಣರ ಮಂತ್ರಿಯು ಸಂಸ್ಕೃತ ಭಾಷೆಯಲ್ಲಿ ಬರೆದ '**ಚಾತುರ್ವರ್ಗ ಚಿಂತಾಮಣಿ**' ಎಂಬ ವಿಶ್ವಕೋಶದ '**ವ್ರತಖಂಡ**' ಎಂಬ ಭಾಗದ ಆರಂಭದಲ್ಲಿ ಸೇವಣರ ಇತಿಹಾಸವನ್ನು ಸ್ವಾರಸ್ಯವಾಗಿ ನೀಡಿದ್ದನು[೬೬].

ಯಾದವ ವಂಶದ ಸಂಘಣದೇವ ಹಾಗೂ ಕೃಷ್ಣರಿಂದ ರಟ್ಟರು ಸೋಲನ್ನು ಅನುಭವಿಸಿದರು. ಅನಂತರ ಕುಹೂಂಡಿ ನಾಡು ಯಾದವರ ಆಳ್ವಿಕೆಗೆ ಒಳಪಟ್ಟಿತು.

ಸುಮಾರು ಮೂರುನೂರು ವರ್ಷಗಳ ಕಾಲ ಮಾನ್ಯಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಳುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ನಡೆಸಿದ ಯಾದವರು ದೇವಗಿರಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರು ಹೊಯ್ಸಳರೊಂದಿಗೆ ಹೋರಾಡುತ್ತ ಕರ್ನಾಟಕದ ಉತ್ತರ ಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ಇವರಲ್ಲಿ ಐದನೆಯ ಬಿಲ್ಲಮನು ಕ್ರಿ.ಶ. ೧೧೮೭ ಸಾರ್ವಭೌಮ ಪ್ರಶಸ್ತಿಯನ್ನು ಪಡೆದುಕೊಂಡಿದ್ದನು. ಇವನ ನಂತರ ಜೈತುಗಿಯು ಆಳ್ವಿಕೆ ನಡೆಸಿದನು.

ಜೈತುಗಿಯು ನಂತರ ಸುಮಾರು ಕ್ರಿ.ಶ. ೧೨೧೦ರಲ್ಲಿ ಯಾದವರ ವಂಶದ ಅತ್ಯಂತ ಪ್ರಸಿದ್ಧ ರಾಜರಲ್ಲಿ ಸಿಂಘಣನು ಅಧಿಕಾರ ವಹಿಸಿಕೊಂಡನು. ಮುಗಳಖೋಡವು ಈ ವೇಳೆಯಲ್ಲಿ ಕುಹೂಂಡಿ ಮೂರುಸಾವಿರದ ನಾಡಾಗಿದ್ದು, ಸವದತ್ತಿಯ ರಟ್ಟರ ಆಳ್ವಿಕೆಗೆ ಒಳಪಟ್ಟಿತ್ತು. ಸಿಂಘಣನು ಸವದತ್ತಿಯ ರಟ್ಟರನ್ನು ಸೋಲಿಸಿ ಗೆಲುವು ಪಡೆದು ಈ ಪ್ರದೇಶವನ್ನು ವಶಪಡಿಸಿಕೊಂಡನು. ಇವನ ಆಳ್ವಿಕೆಯ ನಂತರ ಕೃಷ್ಣನು (ಕನ್ನರ) ಉತ್ತರಾಧಿಕಾರಿಯಾಗಿ ಸಿಂಹಾಸನ ಪಡೆದನು.

ಸಿಂಘಣನು ಕಲ್ಯಾನದ ಚಾಳುಕ್ಯರ ಆರನೆಯ ವಿಕ್ರಮಾದಿತ್ಯನ ಮಾಂಡಳಿಕನಾಗಿಯೇ ಮುಂದುವರೆದು ಅವನಿಂದ ಹೆಚ್ಚಿನ ಅಧಿಕಾರವನ್ನು ಪಡೆದನು. ಇತನ ಎರಡು ಶಾಸನಗಳು ದೊರೆತಿದ್ದು (೧೧೪೦ ಮತ್ತು ೧೧೪೨) ಅವುಗಳ ಆಧಾರದಿಂದ ಇತನ ಆಡಳಿತದ ಕಾಲವು ಸುಮಾರು ೧೧೧೫ ರಿಂದ ೧೧೪೫ ರವರೆಗೆ ಎಂಬುದಾಗಿ ಊಹಿಸಬಹುದಾಗಿದೆ. ಈ ವೇಳೆಯಲ್ಲಿ ಕುಹೂಂಡಿ ಮೂರುಸಾವಿರದ ನಾಡಿನಲ್ಲಿ ಒಂದಾಗಿರುವ ಮುಗಳಖೋಡವು ಇತನ ಆಳ್ವಿಕೆಗೆ ಒಳಪಟ್ಟಿರುವುದು ತಿಳಿಯುತ್ತದೆ. ಇವನು ಸವದತ್ತಿಯ ರಟ್ಟರ ಅರಸನಾದ ಎರಡನೆಯ ಲಕ್ಷ್ಮೀದೇವನನ್ನು ಸೋಲಿಸಿ ಈ ಪ್ರದೇಶವನ್ನು ವಶಪಡಿಸಿಕೊಂಡನು. ಸಿಂಘಣ ಶೂರ ಸೇನಾನಿಯಾದ ಬಿಚ್ಚಣ್ಣ ಎಂಬುವನಿಂದ ಎರಡನೆಯ ಲಕ್ಷ್ಮೀದೇವನು ಸೋತನು. (ತಿಳವಳ್ಳಿ ಶಾಸನ ೧೨೩೮) ಈ ಯುದ್ಧದಲ್ಲಿ ಎರಡನೆಯ ಲಕ್ಷ್ಮೀದೇವನು ಮಡದಿರುವುದು ತಿಳಿದು ಬಂದಿರುವುದಿಲ್ಲ. ಧರ್ಮದಲ್ಲಿ ನಂಬಿಕೆಯುಳ್ಳ ಇತನು ರಾಜಕೀಯದಿಂದ ಸನ್ಯಾಸತ್ವ ಪಡೆದಿರುವನು ಎಂಬುದಾಗಿ ತಿಳಿಯುತ್ತದೆ.

ಸಿಂಘಣನ ಮರಣದ ನಂತರ ರಟ್ಟರೊಂದಿಗೆ ಯುದ್ಧಗಳು ನಡೆದಿವೆ ಎಂಬುದಾಗಿ ಇತಿಹಾಸಕಾರರು ಹೇಳುತ್ತಾರೆ. ಎರಡನೇ ಲಕ್ಷ್ಮೀದೇವನ ಬಂಧುವಾದ ಮೂರನೇ ಪುಷ್ಪದೇವನು ದೇವಗಿರಿಯ ಕೃಷ್ಣನ ಮೇಲೆ ಯುದ್ಧಕ್ಕೆ ಹೋಗಲು ಸಹಾಯ ಮಾಡಿದನು. ಆದರೆ ಕೃಷ್ಣನ ಮಹಾಪ್ರಧಾನಿಯಾದ ನಾಗರಸನು ರಟ್ಟರ ಅರಸರನ್ನು ಸಂಪೂರ್ಣವಗಿ ಸೋಲಿಸಿದನು. ಅಲ್ಲದೇ ಆ ಪ್ರಾಂತ್ಯವನ್ನು ಯಾದವರ ಆಳ್ವಿಕೆಗೆ ವಶಪಡಿಸಿಕೊಂಡನು. ಅನಂತರ ಕುಹೂಂಡಿ ಮೂರುಸಾವಿರ ನಾಡು ಸಂಪೂರ್ಣವಾಗಿ ಯಾದವರ ಆಳ್ವಿಕೆಗೆ ಒಳಪಟ್ಟಿತ್ತು.

ಕಲ್ಯಾನದ ಚಾಳುಕ್ಯರ ೪ನೇ ಸೋಮೇಶ್ವರನ ಆಳ್ವಿಕೆಯಲ್ಲಿ (ಕ್ರಿ.ಶ. ೧೧೮೪) ದೇವಗಿರಿ ಯಾದವರ ದಾಳಿಗಳು ಈ ಭಾಗದಲ್ಲಿ ಪ್ರಾರಂಭವಾಗಿ ಅವರ ಆಡಳಿತಕ್ಕೆ ಒಳಪಟ್ಟವು. ಯಾದವ ವಂಶದ ಅರಸರಲ್ಲಿ ಸಿಂಘನ, ಕೃಷ್ಣನ ಅಥವಾ ಕನ್ನರ, ಮಹಾದೇವ ಮತ್ತು ರಾಮಚಂದ್ರರು ಪ್ರಮುಖರಾಗಿದ್ದರು. ೧ನೇ ಸಿಂಘನ ಉತ್ತರಾಧಿಕಾರಿಯಾಗಿದ್ದ ಕನ್ನರ (ಕ್ರಿ.ಶ. ೧೨೪೭ – ೬೧) ರ ಶಾಸನವು ಕ್ರಿ.ಶ. ೧೧೬೯ರ ಕಾಲಕ್ಕೆ ಸಂಬಂಧಿಸಿದ್ದು ಬೆಳಗಾವಿಯಲ್ಲಿ ದೊರಕಿದೆ. ಇದು ದಳವಾಯಿ ಭೋಗದೇವ ಯಾದವ ಎನ್ನುವವನು ಗ್ರಾಮದೇವತೆಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ[೬೭]. ಈ ಅರಸನ ಕ್ರಿ.ಶ. ೧೨೬೦ರ ಶಾಸನವು ಅರ್ಜುನವಾಡದಲ್ಲಿ ದೊರೆತಿರುತ್ತದೆ. ಐತಿಹಾಸಿಕವಾಗಿ ಈ ಶಾಸನವು ಮಹತ್ವವನ್ನು ಪಡೆದಿರುತ್ತದೆ. ಈ ಶಾಸನವು ಬಸವೇಶ್ವರ ಅಣ್ಣನಾದ ದೇವರಾಜನ ಮೊಮ್ಮಗ ಹಾಲಬಸವಿಕ ಎಂಬುವವನಿಗೆ ಯಾದವ ಕನ್ನರನ ಮಂತ್ರಿಯಾದ ಚೌಡಿಶೆಟ್ಟಿಯು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ[೬೮]. ಇಲ್ಲಿ ಬಸವೇಶ್ವರರ ಪ್ರಸ್ತಾಪ ಬರುವುದರಿಂದ ಇತಿಹಾಸಕಾರರು ಈ ಶಾಸನಕ್ಕೆ ಮಹತ್ವವನ್ನು ನೀಡಿರುತ್ತಾರೆ. ಇಲ್ಲಿ ೧೨ನೇ ಶತಮಾನಕ್ಕೆ ಸಂಬಂಧಿಸಿದ ಸೀಮೆಯ ಕಲ್ಲು ದೊರೆತಿದ್ದು, ಇದು ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನದ ಪೀಠದಲ್ಲಿದೆ. ಬಸವಣ್ಣನವರ ವಂಶಜರ ಗ್ರಾಮದಲ್ಲಿಯೇ ಸಿಕ್ಕು ಅಪೂರ್ವತೆಯಿಂದ ಕೂಡಿದ ಇದು ಬಸವಣ್ಣನವರನ್ನು **'ದಣ್ಣಾಯಕ'** ಎಂದು ಕರೆದ ಪ್ರಥಮ ಶಾಸನವಾಗಿರುತ್ತದೆ[೬೯]. ಯಾದವರಿಗೆ ಸಂಬಂಧಿಸಿದ ಕ್ರಿ.ಶ. ೧೨೬೩ ರ ಶಾಸನವೊಂದು ಯಾದಗೂಡದಲ್ಲಿ ದೊರೆತಿದ್ದು ಹಾಳಾಗಿರುವ ಸ್ಥಿತಿಯಲ್ಲಿರುತ್ತದೆ.

೩.೬ ಹೊಯ್ಸಳರು – (ಕ್ರಿ.ಶ. ೧೦೦೬ ರಿಂದ ೧೩೪೩) :

೧೨ನೇ ಶತಮಾನದ ಕೊನೆಭಾಗದಲ್ಲಿ ಕಲ್ಯಾಣದ ಚಾಳುಕ್ಯರ ಪ್ರಭಾವ ಇಳಿಮುಖವಾಗ ತೊಡಗಿದಾಗ ಸೆವುಣರಂತೆ ಹೊಯ್ಸಳರು ಸಹ ಚಾಳುಕ್ಯರ ಸಾಮ್ರಾಜ್ಯದ ಅಧಿಪತ್ಯಕ್ಕಾಗಿ ಪ್ರಯತ್ನಿಸಿ ಕೊನೆಗೆ ಅದು ಇಬ್ಭಾಗವಾಗಿ ಹೊಯ್ಸಳರು ತುಂಗಭದ್ರೆಯ ದಕ್ಷಿಣ ಭಾಗದಲ್ಲಿ ಸ್ವತಂತ್ರವಾಗಿ ಆಳತೊಡಗಿದರು. ಆದರೆ ಇವರು ಇದಕ್ಕೂ ಮೊದಲೇ ಅಧಿಕಾರದಲ್ಲಿದ್ದರು. ಗಂಗರ ಅಳವಿನ ನಂತರ ಚೋಳರ ಅಧೀನವಾಗಿದ್ದ ಪ್ರದೇಶವನ್ನು ವಿಸ್ತರಿಸಿ ರಾಜ್ಯ ಸ್ಥಾಪಿಸಿದರು.

[illegible]

[illegible]

[illegible]

[illegible]

ಹೊಯ್ಸಳರ ಚರಿತ್ರೆಯ ಹಲವು ದೃಷ್ಟಿಗಳಿಂದ ವೈಶಿಷ್ಟ್ಯ ಪೂರ್ಣವಾಗಿದೆ. ಅಪ್ಪಟ ಕನ್ನಡಿಗರೆಂಬ ಅಭಿಮಾನವನ್ನು ಬಲವಾಗಿ ಸ್ಥಾಪಿಸಿದರು. ಮುಸ್ಲಿಂ ಆಕ್ರಮಣಕಾರರು ೧೧ನೇ ಶತಮಾನದ ನಂತರದಲ್ಲಿ ದಕ್ಷಿಣ ಭಾರತದ ಮೇಲೆ ದುರುದ್ದೇಶದಿಂದ ಆಕ್ರಮಣ ನಡೆಸಿದರು. ಅವರನ್ನು ಸಮರ್ಥವಾಗಿ ತಡೆಗಟ್ಟಿ ಕರ್ನಾಟಕದ ಅಸ್ತಿತ್ವವನ್ನು ಮತ್ತು ಭವ್ಯ ಪರಂಪರೆಯನ್ನು ಎರಡು ಶತಮಾನಗಳ ಕಾಲ ರಕ್ಷಿಸಿದ ಕೀರ್ತಿ ಹೊಯ್ಸಳರದಾಗಿದೆ. ಕ್ಷೇಮಾಭೀವೃದ್ಧಿ ಕಾರ್ಯಗಳಿಗೆ, ಧಾನಧರ್ಮಗಳಿಗೆ, ಶಿಕ್ಷಣ ಸಾಹಿತ್ಯದ ಸಂವರ್ಧನೆಗೆ ಹೊಯ್ಸಳರ ಕಾಲವು ಅದ್ವಿತೀಯವೆನಿಸಿಕೊಂಡಿರುತ್ತದೆ.

ಶಿಲ್ಪಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಹೊಯ್ಸಳರ ಸಾಧನೆ ಭಾರತವನ್ನೇ ಅಲ್ಲದೇ ಸಮಸ್ತ ಜಗತ್ತಿಗೆ ಒಂದು ಭವ್ಯ ಹಾಗೂ ಸ್ಮರಣೀಯ ಕೊಡುಗೆಯಾಗಿದೆ. ಹೊಯ್ಸಳರು ನಿರ್ಮಿಸಿದ ದೇವಾಲಯಗಳು ಭಾರತೀಯ ವಾಸ್ತುಶಿಲ್ಪ ಸೌಂದರ್ಯವನ್ನು ಶ್ರೀಮಂತಗೊಳಿಸಿದೆ. ಅದು **'ಹೊಯ್ಸಳರ ಶೈಲಿ'** ಎಂದೇ ಪ್ರಸಿದ್ಧವಾಗಿದೆ. ಭಾರತೀಯ ಚರಿತ್ರೆಯಲ್ಲಿ ವೈಭವಪೂರ್ವವೆನಿಸಿದ ವಿಜಯನಗರದ ಸ್ಥಾಪನೆಗೆ ಈ ಭೂಮಿಕೆಯನ್ನು ಸಿದ್ಧಗೊಳಿಸಿದ ಶ್ರೇಯಸ್ಸು ಹೊಯ್ಸಳರಿಗೆ ಸಲ್ಲುತ್ತದೆ. ಈ ವಂಶದ ಪ್ರಸಿದ್ಧ ದೊರೆಯೆಂದರೆ ವಿಷ್ಣುವರ್ಧನ (ಕ್ರಿ.ಶ. ೧೧೦೮ ರಿಂದ ೧೧೫೨) ಈತನ ೪೦ ವರ್ಷಗಳ ಆಳ್ವಿಕೆಯಲ್ಲಿ ಹೊಯ್ಸಳರ ರಾಜ್ಯವು ವಿಸ್ತಾರಗೊಂಡಿದಷ್ಟೇ ಅಲ್ಲದೇ ಅದಕ್ಕೊಂದು ಸ್ವತಂತ್ರ ಅಸ್ತಿತ್ವ ಒದಗಿತು. ಇವನು ವೈಷ್ಣವ ಧರ್ಮಿಯನಾಗಿದ್ದು, ಇವನ ಪಟ್ಟದ ಅರಸಿ ಶಾಂತಲಾದೇವಿ ಜೀನಭಕ್ತಿಯಾಗಿದ್ದು, ಇವರ ಧರ್ಮಸಮನ್ವಯ ಹಾಗೂ ಪರಧರ್ಮ ಸಹಿಷ್ಣುತೆಯ ನಿದರ್ಶನಗಳಾಗಿವೆ. ಶಾಂತಲೆ **'ನಾಟ್ಯರಾಣಿ', 'ನಾಟ್ಯ ಸರಸ್ವತಿ'** ಎಂಬ ಬಿರುದು ಹೊಂದಿದ್ದಳು.

ಇವನ ನಂತರ ೩ನೇ ಬಲ್ಲಾಳ (ಕ್ರಿ.ಶ. ೧೨೯೧ ರಿಂದ ೧೩೪೩) ಈ ವಂಶದ ಕೊನೆಯ ಪ್ರಬಲ ದೊರೆ ಇವನ ಕಾಲಕ್ಕೆ ಅಲ್ಲಾವುದ್ದೀನ ಖಿಲ್ಜಿ ಸಾಮ್ರಾಜ್ಯದ ಮೇಲೆ ದಾಳಿ ನಡೆಸಿದ. ಅಲ್ಲಾವುದ್ದೀನ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನ ಕೈಯಲ್ಲಿ ೩ನೇ ಬಲ್ಲಾಳ ಸೋತನು. ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಮುಸ್ಲಿಂ ಆಳ್ವಿಕೆ ಸ್ಥಾಪನೆಗೊಂಡಿತು. ಹಿಂದೂ ದೇವಾಲಯಗಳು ಧ್ವಂಸಗೊಂಡು ಅಪಾರ ಸಂಪತ್ತು ಲೂಟಿ ಆಯಿತು. ಹಿಂದೂ ಧರ್ಮ ಸಂಸ್ಕೃತಿಗಳು ವಿನಾಶದ ಅಂಚಿಗೆ ಬಂದು ನಿಂತವು. ಇಂಥ ಸಂಕಷ್ಟದ ಪ್ರಸಂಗದಲ್ಲಿ ಇವುಗಳನ್ನು ಉಳಿಸಿ ಬೆಳೆಸುವ ಮಹಾನ್ ಪ್ರಯತ್ನ ಒಂದು ನಡೆಯಿತು. ಈ ಪ್ರಯತ್ನದ ಫಲವೇ ವಿಜಯನಗರದ ಸಾಮ್ರಾಜ್ಯದ ಉದಯ.

೩.೭ ವಿಜಯ ನಗರದ ಅರಸರು – (ಕ್ರಿ.ಶ. ೧೩೩೬ ರಿಂದ ೧೬೭೫) :

ಕರ್ನಾಟಕದ ಚರಿತ್ರೆಯಲ್ಲಿ ವಿಜಯನಗರದ ಸ್ಥಾಪನೆಯೆ ಒಂದು ಅವಿಸ್ಮರಣೀಯ ಅಧ್ಯಾಯವಾಗಿದೆ. ಕನ್ನಡನಾಡಿನ ಸಂಸ್ಕೃತಿ, ಧರ್ಮ, ಕಲೆ, ಸಾಮಾಜಿಕ ಸ್ಥಿರತೆ, ಅನ್ಯಧರ್ಮಿಯರ ದಾಳಿಗೆ ತುತ್ತಾಗುತ್ತಿದ್ದು ಸಂದಿಗ್ಧ ಸನ್ನಿವೇಶದಲ್ಲಿ ಈ ನಾಡಿನವರೇ ಆದ ಹಕ್ಕ–ಬುಕ್ಕ ಸಹೋದರರು

[illegible]

[illegible]

[illegible]

[illegible]

ಶ್ರೀ ವಿದ್ಯಾರಣ್ಯ ಗುರುಗಳ ಆಶೀರ್ವಾದದಿಂದ ವಿಜಯನಗರ ಸಾಮ್ರಾಜ್ಯವನ್ನು ಕ್ರಿ.ಶ. ೧೩೩೬ ರಲ್ಲಿ ದಕ್ಷಿಣ ಭಾರತದ ಬಲಾಢ್ಯ ರಾಜವನ್ನಾಗಿ ಕಟ್ಟಿ ಬೆಳೆಸಿದರು. ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯನ್ನು ತಲುಪಿ ವಿಶ್ವದಾಖಲೆಯನ್ನು ತಲುಪಿ ಖ್ಯಾತಿಯನ್ನು ಪಡೆಯಿತು. ಸುಮಾರು ೨೩೦ ವರ್ಷಗಳ ಕಾಲ ದಕ್ಷ ಆಡಳಿತವನ್ನು ನೀಡಿ ವೈಭವ ಪೂರ್ಣವಾದ ಪರಿಸರವನ್ನು ಸೃಷ್ಟಿಸಿದ ವಿಜಯನಗರದ ಅರಸರು ಕನ್ನಡ ನಾಡಿನ ಕೀರ್ತಿ ಪತಾಕೆಯನ್ನು ದಿಗಂತಕ್ಕೆ ಹಾರಿಸಿ ಮೆರೆಸಿದರು. ಸ್ವಧರ್ಮ ಸಂರಕ್ಷಣೆ ಮತ್ತು ಪರಧರ್ಮ ಸಹಿಷ್ಣುತೆ ವಿಜಯನಗರದ ಸಾಮ್ರಾಜ್ಯದ ಘನತೆಯನ್ನು ಪರಾಕಾಷ್ಠೆಗೆ ಏರಿಸಿದ ದಿವ್ಯದರ್ಶನಗಳಾಗಿದ್ದವು. ವಿಜಯನಗರ ರಾಜಧಾನಿ ಆಗಿದ್ದ ಹಂಪಿಯು ವೈಭವನ್ನು ಅನೇಕ ವಿದೇಶಿ ಪ್ರವಾಸಿಗರು ಮುಕ್ತ ಕಂಠದಿಂದ ಪ್ರಶಂಸಿದ್ದಾರೆ.

ಕರ್ನಾಟಕದ ಚರಿತ್ರೆಯಲ್ಲಿ ವಿಜಯನಗರದ ಸಾಮ್ರಾಜ್ಯ ಸುವರ್ಣಯುಗವನ್ನಾಗಿಸಿ ಸಮಗ್ರ ರಾಜಕೀಯ ಇತಿಹಾಸಕ್ಕೆ ಒಂದು ಮಹತ್ವದ ಕಾಣಿಕೆಯನ್ನು ನೀಡಿದರು. ೧೩೭೫ ರಿಂದ ೧೪೭೨ ರವರೆಗೆ ಬೆಳಗಾಗಿ ಜಿಲ್ಲೆಯು ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತು. ಇದಕ್ಕೆ ಪ್ರಸಿದ್ಧ ಇತಿಹಾಸಕಾರರಾದ ಪೆರಿಸ್ತಾ ಎಂಬಾತನು ಬೆಳಗಾವಿ ಸುತ್ತಲಿನ ಭಾಗವು ೧೫ನೆಯ ಶತಮಾನದ ಉತ್ತರಾರ್ಧದಲ್ಲಿ ಹಿಂದೂ ಅರಸರ ಅಧೀನದಲ್ಲಿತ್ತೆಂದು ಹೇಳಿದ್ದಾನೆ. ಕ್ರಿ.ಶ. ೧೩೮೮ ರಲ್ಲಿ ರಾಯಬಾಗ, ಬೆಳಗಾವಿ ಜಿಲ್ಲೆಯ ಘಟಪ್ರಭಾ ನದಿಯ ಉತ್ತರಕ್ಕೆ ಇರುವ ಚಿಕ್ಕೋಡಿ, ಅಥಣಿ, ಹುಕ್ಕೇರಿ ಇವೆಲ್ಲವು ಮುಸ್ಲಿಂ ದೊರೆಯ ಅಧೀನದಲ್ಲಿದ್ದವು. ಘಟಪ್ರಭಾ ನದಿಯ ದಕ್ಷಿಣ ಭಾಗವು ಇವರಿಗೆ ಸೇರಿತ್ತು. ಕ್ರಿ.ಶ. ೧೩೭೫ರಲ್ಲಿ ಮುಜಾಹಿದ್ ಶಾಹ ಬಹುಮನಿ ವಿಜಯನಗರದ ಅರಸ ಬುಕ್ಕರಾಯನಿಂದ ತುಂಗಭದ್ರಾ ನದಿಯ ಪೂರ್ವದಿಕ್ಕಿನ ಪ್ರದೇಶಗಳೊಂದಿಗೆ ಬೆಳಗಾವಿಯನ್ನು ಕೊಡಬೇಕೆಂದು ಅಗ್ರಹಿಸಿದ ಅದಕ್ಕೆ ಬುಕ್ಕರಾಯ ಒಪ್ಪಲಿಲ್ಲ.

ಕ್ರಿ.ಶ. ೧೩೭೮ರಲ್ಲಿ ಮುಜಾಹಿದ್ ಶಾಹ ಬಹುಮನಿಯ ಕೊಲೆಯಾಯಿತು. ರಾಮದುರ್ಗ ತಾಲೂಕಿನ ಕಟಕೋಳ ಗ್ರಾಮದ ಕಲ್ಮೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೪೭೦ ಶಾಸನ[೧೦] ತಿಳಿಸುವಂತೆ ಸದಾಶಿವರಾಯನು ವಿಜಯ ನಗರದಲ್ಲಿರುವ ನಾವಿ ಎಂಬ ಕೆಳವರ್ಗದವರ ತೆರಿಗೆಯನ್ನು ವಿನಾಯಿತಿಗೊಳಿಸಿದ ಕುರಿತು ವಿವರಿಸುತ್ತದೆ. ತೋರಗಲ್ಲ ಪ್ರದೇಶವು ಇದರ ಅಧೀನದಲ್ಲಿತ್ತು. ಕ್ರಿ.ಶ. ೧೫೧೪ – ೧೨ರ ಎಲ್ಲಮ್ಮ ದೇವಸ್ಥಾನ ಸವದತ್ತಿಯ ಶಾಸನ ತಿಳಿಸುವಂತೆ ತುಳುವ ವಂಶದ ಕೃಷ್ಣದೇವರಾಯ ದ್ವಾರಪಾಲಕನಾದ ತಿಮ್ಮಪ್ಪ ನಾಯಕ ಎಲ್ಲಮ್ಮ ದೇವಾಲಯದ ಪಶ್ಚಿಮ ದ್ವಾರದ ಮೇಲಿನ ಗೋಪುರ ನಿರ್ಮಾಣ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಸದಾಶಿವರಾಯನ ಕಾಲದ ಇದೇ ದೇವಾಲಯದಲ್ಲಿ ದೊರೆತ ಕ್ರಿ.ಶ. ೧೫೬೦ರ ಕಾಲಮಾನದ ಶಾಸನ ತಿಳಿಸುವಂತೆ ವಿಠೋಬಾ ವೆಂಕಟಾದ್ರಿಯ ಕಾರ್ಯಕರ್ತನೆಂದು ಉಲ್ಲೇಖಿಸುವ ದೇವಾಲಯಕ್ಕೆ ಭೂಮಿದಾನ ಮಾಡಿದ ವಿಷಯವನ್ನೇ ತಿಳಿಸುತ್ತದೆ. ಕ್ರಿ.ಶ. ೧೫೫೧ ರ ಶಾಸನ[೧೧] ತಿಳಿಸುವಂತೆ ಮಲ್ಲಿಕಾರ್ಜುನ ದೇವಾಲಯಕ್ಕೆ ಸಾಮಂತ ಅಧಿಕಾರಿಯು ದತ್ತಿ ನೀಡಿದ್ದನ್ನು ವಿವರಿಸುತ್ತದೆ. ಈ ರೀತಿಯಾಗಿ ದೊರೆತ ವಿವಿಧ ದಾಖಲೆಗಳಿಂದ ತಿಳಿದುಬರುವಂತೆ

ವಿಜಯನಗರದ ಅರಸರು ಬೆಳಗಾವಿ ಜಿಲ್ಲೆಯಾದ್ಯಂತ ತಮ್ಮ ಆಡಳಿತ ಅಧಿಕಾರವನ್ನು ವಿಸ್ತರಿಸಿಕೊಂಡಿದ್ದರು.

ಈ ಸಾಮ್ರಾಜ್ಯವು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸಿ ಅವುಗಳನ್ನು ಅಭ್ಯುದಯಗೊಳಿಸಿವ ಮೂಲಕ ಕನ್ನಡ ನಾಡಿನ ವಿಶಿಷ್ಟ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸಿತು. ಧರ್ಮ, ಸಾಹಿತ್ಯ, ಕಲೆಯ ಕ್ಷೇತ್ರಗಳಲ್ಲಿ ಅಮೋಘ ಸಾಧನೆಗಳನ್ನು ಮಾಡಿತು.

೩.೮ ದೆಹಲಿ ಸುಲ್ತಾನರು :

ಮಧ್ಯಕಾಲಿನ ಚರಿತ್ರೆಯಲ್ಲಿ ದೆಹಲಿ ಸುಲ್ತಾನರ ಆಳ್ವಿಕೆ ಪ್ರಮುಖವಾಗಿದೆ. ೧೪ನೆಯ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದ ಮೇಲೆ ಮುಸ್ಲಿಂ ದಾಳಿಗಳು ಆರಂಭವಾದುದು ಕ್ರಿ.ಶ. ೧೩೧೦ ರಲ್ಲಿ. ಅಲ್ಲಾವುದ್ದೀನ ಖಿಲ್ಜಿಯ ಮಹಾದಂಡನಾಯಕ ಮಲ್ಲಿಕಾಫರ್‌ನ ನೇತೃತ್ವದಲ್ಲಿ ಸೈನ್ಯವನ್ನು ದಂಡಯಾತ್ರೆಗೆ ಕಳುಹಿಸಿದನು. ಇವನು ಕ್ರಿ.ಶ. ೧೩೧೧ ರಲ್ಲಿ ದ್ವಾತಸಮುದ್ರ ಮತ್ತು ೧೩೧೩ ರಲ್ಲಿ ದೇವಗಿರಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದನು. ಯಾದವರ ಎಲ್ಲ ಪ್ರದೇಶಗಳು ದೆಹಲಿಯ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದವು[೪೨]. ಮಹಮ್ಮದ ಬಿನ್ ತುಘಲಕ್‌ನ ಕಾಲದಲ್ಲಿ (ಕ್ರಿ.ಶ. ೧೩೨೫ – ೫೧) ಈ ಪ್ರದೇಶಗಳನ್ನು ಅವನ ಪ್ರತಿನಿಧಿಯಾದ ಪ್ರಭು ಬಸವಂತರಾಯನು ಆಳುತ್ತಿದ್ದನು. (ವೆಂಟಮುರಿ ದೇಸಾಯಿಯವರ ಮೂಲಪುರುಷ) ಆದರೆ ಕೆಲವೇ ದಿನಗಳಲ್ಲಿ ಮಹಮ್ಮದ ಬಿನ್ ತುಘಲಕನು ತನ್ನ ಮೊದಲನೆಯ ಅಮೀರನನ್ನಾಗಿ ನೇಮಿಸಿದನು.

ಕ್ರಿ.ಶ. ೧೩೪೩ ರಲ್ಲಿ ಹೊರಡಿಸಿದ ಚಕ್ರವರ್ತಿಯ ಆಜ್ಞೆಯಲ್ಲಿ ಹುಕ್ಕೇರಿಯ ಅಮೀರಿನ ಹೆಸರು ಉಲ್ಲೇಖಿತವಾಗಿದೆ[೪೩]. ಬೆಳಗಾವಿ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುವದಾಗಿ ಚಕ್ರವರ್ತಿಯು ಇಬ್ಬರು ಅಧಿಕಾರಿಗಳನ್ನು ನೇಮಿಸಿದನು. ಅವರಲ್ಲಿ ಒಬ್ಬನು ರಾಯಬಾಗದಲ್ಲಿದ್ದರೆ ಇನ್ನೊಬ್ಬ ಹುಕ್ಕೇರಿಯಲ್ಲಿದ್ದನು ಎಂಬುದಾಗಿ ಪೆರಿಸ್ತಾರವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಾಯಶಃ ಆ ಅಧಿಕಾರಿ ಗಜಬರಖಾನ ಆಗಿರಬೇಕು. ಇವನು ಈ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದನು. **'ಟಿಕರಿ ಖಾನಾಪುರ'** ರಣರಂಗದಲ್ಲಿ ಗಜಬರಖಾನನ ಮರಣವಾಯಿತು. ಇಂದಿಗೂ ಅವನ ಸಮಾಧಿಯನ್ನು ಗಜಬರವಾಡಿಯಲ್ಲಿ ಕಾಣಬಹುದು. ಈ ಸಮಾಧಿಯ ಗುಮ್ಮಟದ ಕಟ್ಟಡವನ್ನು ನದಿಯ ಕೇತುಗೌಡ ದೇಸಾಯಿಯು ಕಟ್ಟಿಸಿದನು.

[illegible]

೩.೯ ಬಿಜಾಪೂರದ ಆದಿಲ್‌ಷಾಹಿಗಳು :

ಬಿಜಾಪೂರದ ಯುಸೂಫ್ ಆದಿಲ್ ಖಾನನು ತನ್ನ ಸ್ವತಂತ್ರತೆಯನ್ನು ಘೋಷಿಸಿಕೊಂಡು ನಂತರದಲ್ಲಿ ಐನ್ - ಉಲ್ - ಮುಲ್ಕನು ತನ್ನ ನಿಷ್ಠೆಯನ್ನು ಬಿಜಾಪೂರಕ್ಕೆ ವರ್ಗಾಯಿಸಿದನು. ಇವನ ಆಡಳಿತದಲ್ಲಿ ಬೆಳಗಾವಿಯ ಬಿಜಾಪೂರದ ಆದಿಲ್‌ಷಾಹಿಗಳ ಕೈವಶವಾಯಿತು. ಆದಿಲ್‌ಷಾಹಿ ದೊರೆ ಶೇರಖಾನನು ಬೆಳಗಾವಿಯಲ್ಲಿ ರಾಜ್ಯವಾಳಿದನು. ಇವರ ಕಾಲಾವಧಿಯಲ್ಲಿ ಬೆಳಗಾವಿಯಲ್ಲಿ ಶಹಾಪುರ ಪಟ್ಟಣವನ್ನು ಕಟ್ಟಿಸಿದನು. ಬೆಳಗಾವಿಯಲ್ಲಿರುವ ಪ್ರಾಚೀನ ಕಾಲದಿಂದ ನಿರ್ಮಾಣವಾಗುತ್ತ ಬಂದ ಕೋಟೆ ಆದಿಲ್‌ಷಾಹಿ ಸರದಾರ ಅಸದಖಾನ ಕಲಾನೈಪುಣ್ಯದ ಮಾಂತ್ರಿಕ ಸ್ಪರ್ಶ ನೀಡಿ ಅದನ್ನು ಅಭಿವೃದ್ಧಿಗೊಳಿಸಿದನು. ಮುಂದೆ ಈತನಿಗೆ ಬೆಳಗಾವಿಯನ್ನು ಜಹಗಿರವಾಗಿ ನೀಡಲಾಯಿತು. ಕ್ರಿ.ಶ. ೧೫೧೧ ರಿಂದ ೧೫೪೯ರವರೆಗೆ ಬೆಳಗಾವಿ ಪ್ರದೇಶದಲ್ಲಿ ರಾಜ್ಯವಾಳಿದನು. ಈತ ಮಡಿದ ನಂತರ ಇವನ ಮಗ ಕಿಶ್ವರಖಾನನನ್ನು ಹುಕ್ಕೇರಿ, ಬೆಳಗಾವಿ, ರಾಯಬಾಗದ ಮೇಲೆ ರಾಜ್ಯ ಪಾಲನೆಂದು ನೇಮಿಸಲಾಯಿತು. ನಂತರ ಈತ ತನ್ನ ಆಡಳಿತವನ್ನು ರಾಯಬಾಗ ತಾಲೂಕಿನ ಪ್ರದೇಶಗಳಾದ್ಯಂತ ವಿಸ್ತರಿಸಿದನು. ಅಷ್ಟೇ ಅಲ್ಲದೇ ಬೆಳಗಾವಿ ಜಿಲ್ಲೆಯ ರಾಮದುರ್ಗ ಪ್ರದೇಶದಾದ್ಯಂತ ವಿಜಾಪುರ ಆದಿಲ್‌ಷಾಹಿಗಳು ತಮ್ಮ ಆಡಳಿತವನ್ನು ವಿಸ್ತರಿಸಿದ್ದನು. ಈ ಮನೆತನದ ಅಲಿಆದಿಲ್‌ಷಾಹಿ ಅದೋನಿ ಮತ್ತು ರಾಮದುರ್ಗದ ಹತ್ತಿರದ ತೋರಗಲ್ಲ ಕೋಟೆಯನ್ನು ವಶಪಡಿಸಿಕೊಂಡನು. ಈ ಪ್ರದೇಶವು ಬಿಜಾಪುರದ ಆದಿಲ್‌ಷಾಹಿನಿಂದ ಏಳು ತಿಂಗಳವರೆಗೆ ಆಡಳಿತಕ್ಕೊಳಪಟ್ಟಿತ್ತು. ಆಗಿನ ಸಂದರ್ಭದಲ್ಲಿ ಬೆಳಗಾವಿಯು ಮುತ್ತು ರತ್ನ ಹಾಗೂ ಅನೇಕ ಬೆಲೆ ಬಾಳುವ ವಸ್ತುಗಳ ವ್ಯಾಪಾರ ಕೇಂದ್ರವಾಗಿತ್ತೆಂದು ಹೇಳಲಾಗಿದೆ. ಅಷ್ಟೇ ಅಲ್ಲದೇ ಇವರ ಆಳ್ವಿಕೆಯ ಪ್ರಭಾವ ಮುಗಳಖೋಡದ ಮೇಲೆಯೂ ಆಗಿದೆ. ಇಲ್ಲಿರುವ ಮುಸ್ಲಿಂ ಜನಾಂಗ ಅದಕ್ಕೆ ನಿದರ್ಶನವಾಗಿದೆ.

೩.೧೦ ಮರಾಠರು :

ಕ್ರಿ.ಶ. ೧೬೭೨ರಲ್ಲಿ ವಿಜಾಪುರದ ಆದಿಲ್‌ಷಾಹಿ ಅರಸ ಮರಣ ಹೊಂದಿದ ನಂತರ ಆತನ ಮಗ ಅಪ್ರಾಪ್ತ ವಯಸ್ಕನಾಗಿದ್ದರಿಂದ ಸರದಾರರು ತಮ್ಮ ಪ್ರಭುತ್ವವನ್ನೇ ಬೆಳೆಸಲು ಸತತ ಪ್ರಯತ್ನ ಮಾಡಿದರು. ಇಂತಹ ಸಂದಿಗ್ಧ ಸ್ಥಿತಿಯ ಲಾಭಪಡೆದು ಶಿವಾಜಿಯು ಪನ್ಹಾಳಗಡವನ್ನು ಪುನಃ ಗೆದ್ದುಕೊಂಡನು. ಕ್ರಿ.ಶ. ೧೬೫೦ರ ಸುಮಾರಿಗೆ ದಕ್ಷಿಣದ ಮರಾಠಾ ರಾಜ್ಯ ವಿಸ್ತರಿಸುತ್ತ ಹೋರಟ ಶಿವಾಜಿ ಸಾವಂತವಾಡಿ, ಈಶಾನ್ಯ ಗೋವಾ, ಹಲಸಿ, ಬೆಳಗಾವಿ, ರಾಯಬಾಗ, ಬೆಳವಡಿ, ಧಾರವಾಡ, ಬಂಕಾಪುರ ಮೊದಲಾದವುಗಳನ್ನು ವಶಪಡಿಸಿಕೊಂಡನು. ಮುಗುಟಖಾನ ಹುಬ್ಬಳ್ಳಿ ಬೈಲಹೊಂಗಲ ತಾಲ್ಲೂಕು ಗೆಲ್ಲಲು ಹೋರಟಾಗ ದಾರಿಯಲ್ಲಿ ಬೆಳಗಾವಿಯನ್ನು ಗೆದ್ದನು. ಇವನ ಕಾಲದಲ್ಲಿ ಹುಕ್ಕೇರಿ ಕಿಲ್ಲೆಯನ್ನು ಕಟ್ಟಿಸಿ, ಅನಂತರ ಹುಕ್ಕೇರಿ ಒಂದು ದೇಶಗತಿಯಾಯಿತು.

ಶಿವಾಜಿಯ ನರಗುಂದ, ತೋರಗಲ್ಲ, ರಾಮದುರ್ಗ, ಕೊಪ್ಪಳ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡನು. ವಿಜಾಪುರವು ಮೊಘಲರಿಂದ ನಾಶವಾದ ನಂತರ ಹುಕ್ಕೇರಿ ಪ್ರದೇಶ ವಂಟಮುರಿ ದೇಸಾಯಿ ಮನೆತನದವರು ಸ್ವತಂತ್ರವಾಗಿ ಆಳಿದರು. ಕ್ರಿ.ಶ. ೧೭೬೩ ರಲ್ಲಿ ಮಾಧವರಾವ ಪೇಶ್ವೆ ಈ ಪ್ರದೇಶವನ್ನು ಕೊಲ್ಲಾಪುರದ ಸರ್ದಾರರ ಆಡಳಿತಕ್ಕೊಳಪಡಿಸಿದನು. ಪೇಶ್ವೆಯ ಪತನಾನಂತರ ಉಳಿದ ಭಾಗಗಳ ಜೊತೆಗೆ ಹುಕ್ಕೇರಿ, ರಾಯಬಾಗದ ಪ್ರದೇಶಗಳು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟವು. ೧೮೦೪ರಲ್ಲಿ ಜನರಲ್ ವೆಲ್ಲೆಸ್ಲಿಗೆ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಹುಕ್ಕೇರಿ, ಚಿಕ್ಕೋಡಿ, ಮುನವಳ್ಳಿ, ರಾಯಬಾಗ, ನಿಪ್ಪಾಣಿಯು ವಂಟಮುರಿ ದೇಸಾಯಿಯವರ ಆಳ್ವಿಕೆಗೆ ಒಳಪಟ್ಟವು. ಅನಂತರದಲ್ಲಿ ಬ್ರಿಟಿಷರ ಪ್ರಭಾವವು ಪರಿಣಾಮಕಾರಿಯಾಗಿದ್ದರಿಂದ ಅವರ ಅಧೀನತ್ವಕ್ಕೆ ಒಳಪಟ್ಟಿತು.

೩.೧೧ ಬ್ರಿಟಿಷರ ಆಳ್ವಿಕೆ :

೧೮೮೫ ರ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯ ನಂತರದಲ್ಲಿ ಈ ಭಾಗದ ಮೇಲೆ ಸಂಘಟನೆಯ ಪ್ರಭಾವವು ಬೀರಿತು. ೧೮೯೫ ರಲ್ಲಿ ಪ್ರಾಂತಿಯ ಪರಿಷತ್ ಬೆಳಗಾವಿಯಲ್ಲಿ ಸಮಾವೇಶಗೊಂಡಿತು. ಇದರ ಅಧ್ಯಕ್ಷತೆಯನ್ನು ಸರ್. ಡಿ. ಇ. ವಾಛಾರವರು ವಹಿಸಿದ್ದರು. ಇದರಲ್ಲಿ ರಾಷ್ಟ್ರೀಯ ನಾಯಕರಾದ ಫಿರೋಜಷಹ ಮೆಹತಾ, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕರು ಮುಂತಾದ ರಾಷ್ಟ್ರೀಯ ಹೋರಾಟಗಾರರು ಭಾಗವಹಿಸಿದ್ದರು. ಈ ಚಳುವಳಿಯು ಉಗ್ರರೂಪದ ಹೋರಾಟವನ್ನು ಅನುಸರಿಸಿತು. ಈ ಹೋರಾಟವು ರಾಯಬಾಗದ ಸುತ್ತಲಿನ ಪ್ರದೇಶಕ್ಕೂ ವ್ಯಾಪಿಸಿತು. ಈ ರಾಷ್ಟ್ರೀಯ ಚಳುವಳಿಯಲ್ಲಿ ಈ ಭಾಗದಿಂದ ಅನೇಕ ಜನರು ಭಾಗವಹಿಸಿದ್ದರು.

ಸ್ವಾತಂತ್ರ್ಯ ಹೋರಾಟವು ದಿನಗಳು ಕಳೆದಂತೆ ಹೆಚ್ಚಾಗ ತೊಡಗಿತು. ೧೯೧೯ ರಲ್ಲಿ ಜಾಲಿಯನ ವಾಲಾಭಾಗದಲ್ಲಿ ಹತ್ಯಾಕಾಂಡವಾಯಿತು. ಈ ಘಟನೆಯಿಂದ ದೇಶಾದ್ಯಂತ ಚಳುವಳಿ ಜರುತಿತು. ಅಪ್ಪಣ್ಣಗೌಡ ಪಾಟೀಲರು ಸಂಕೇಶ್ವರದಲ್ಲಿ ಈ ಘಟನೆಯನ್ನು ವಿರೋಧಿಸಿ ಅವರೊಂದಿಗೆ ಹಲವಾಲ ಜನರು ನಮ್ಮ ಸುತ್ತಲಿನ ಹಳ್ಳಿಗಳಲ್ಲಿ ಪ್ರತಿಭಾಟನಾ ಚಳುವಳಿಗಳನ್ನು ಕೈಗೊಂಡಿರು. ೧೯೨೦ ರಲ್ಲಿ ಅಸಹಕಾರ ಚಳುವಳಿಯು ಜರುಗಿತು. ಇದರಲ್ಲಿಯೂ ಸಹ ಈ ಭಾಗದ ಜನರು ತಮ್ಮ ಬೆಂಬಲವನ್ನು ನೀಡಿ ಚಳುವಳಿ ನಡೆಸಿದ್ದರು.

೧೯೨೯ ರಲ್ಲಿ ಲಾಹೋರಿನ ಕಾಂಗ್ರೇಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಘೋಷಣೆಯಾಯಿತು. ಇದರ ಅನ್ವಯವಾಗಿ ಗಾಂಧೀಜಿಯವರು ೧೯೩೦ ರಲ್ಲಿ ಸ್ವಾತಂತ್ರ್ಯ ದಿನಾಚರಣೆ ನೆರವೇರಿಸಲು ಕರೆ ನೀಡಿದರು. ಈ ವೇಳೆಯಲ್ಲಿ ಅಪ್ಪಣ್ಣಗೌಡರ ಕ್ರಾಂತಿ ದಳವು ಮೆರವಣಿಗೆ ಮತ್ತು ಸಮಾರಂಭವನ್ನು ಏರ್ಪಡಿಸಿ ಸಂಪೂರ್ಣ ಸ್ವಾತಂತ್ರ್ಯ ಘೋಷಣೆಯನ್ನು ಪ್ರತಿಧ್ವನಿಸಿ ಪ್ರತಿಜ್ಞೆ ಸ್ವೀಕರಿಸಿದರು.

೧೯೩೦ ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕೆ ಕರೆ ನೀಡಿದರು. ಈ ಕರೆಗೆ ರಾಯಬಾಗ ಹಾಗೂ ಸಂಕೇಶ್ವರದ ಸುತ್ತಮುತ್ತಲಿನ ಜನತೆಯು ತಮ್ಮ ಬೆಂಬಲ ನೀಡಿ ಹೋರಾಟ ಚಳುವಳಿಯನ್ನು ಕೈಗೊಂಡರು.

೧೯೪೨ ರ **'ಭಾರತ ಬಿಟ್ಟು ತೊಲಗಿರಿ'** ಎಂಬ ಚಳುವಳಿಯು ಜರುಗಿತು. ಗಾಂಧೀಜಿಯವರು ಈ ಚಳುವಳಿಗೆ ಕರೆ ನೀಡಿದರು. ಈ ಕರೆಯಿಂದ ಸಂಕೇಶ್ವರದ ಅಪ್ಪಣ್ಣಗೌಡ ಪಾಟೀಲರ ಮುಖಂಡತ್ವದಲ್ಲಿ ಅನುಯಾಯಿಗಳೊಂದಿಗೆ ಚಳುವಳಿಗಿಳಿದರು.

ಹೀಗೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಈ ಭಾಗದ ಸೇನಾನಿಗಳು ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

೩.೧೨ ರಾಜಕೀಯ ಸ್ಥಿತಿಗತಿಗಳು :

ಹಲವು ರಾಜಮನೆತನಗಳಾದ ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಬಿಜಾಪುರದ ಆದಿಲ್‌ಷಾಹಿಗಳು ಮತ್ತು ಮರಾಠರು ತಮ್ಮ ಅನುವಂಶಿಯ ಅರಸೊತ್ತಿಗೆಯ ಆಡಳಿತವನ್ನು ನಡೆಸುವರು. ಪ್ರಜೆಗಳ ಕಲ್ಯಾಣ ಹಾಗೂ ಯೋಗಕ್ಷೇಮ ಅರಸನ ಮುಖ್ಯ ಕರ್ತವ್ಯವಾಗಿತ್ತು. ರಟ್ಟರ ಆಳ್ವಿಕೆಯಲ್ಲಿ ಮುಗಳಖೋಡವು **'ಕುಹೂಂಡಿ ಮೂರುಸಾವಿರದ'** ನಾಡಿಗಿತ್ತೆಂದು ತಿಳಿದುಬರುತ್ತದೆ.

೧೭ ಮತ್ತು ೧೮ನೇ ಶತಮಾನದಲ್ಲಿ ಮುಗಳಖೋಡವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದು, ಅಷ್ಟೊಂದು ರಾಜಕೀಯವಾಗಿ ಸ್ಥಾನಮಾನಗಳನ್ನು ಪಡೆದುಕೊಂಡಿರಲಿಲ್ಲ. ಅದರೊಂದಿಗೆ ಸಹಕಾರಿ ಕ್ಷೇತ್ರದಲ್ಲಿ ಅಭಿವೃದ್ಧಿ ಅಷ್ಟೊಂದಿರಲಿಲ್ಲ.

ಸ್ವಾತಂತ್ರದ ನಂತರದಲ್ಲಿ ಈ ಭಾಗಕ್ಕೆ ಅಭಿವೃದ್ಧಿ ಪರಕಾರ್ಯಗಳು ಕೂಡ ನಡೆಯ ತೊಡಗಿದವು. ಶ್ರೀ ವ್ಹಿ. ಎಲ್. ಪಾಟೀಲರು ಈ ಭಾಗದ ಪ್ರತಿನಿಧಿಯಾಗಿ ಆಯ್ಕೆಯಾಗಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ನಂತರದಲ್ಲಿ ಅನೇಕ ಮಹನೀಯರು ಈ ಭಾಗದಿಂದ ಆಯ್ಕೆಗೊಂಡರು. ಅದರಲ್ಲಿ ರಮೇಶ ಜಿಗಜಿಣಗಿ, ರಮೇಶ ಕತ್ತಿ ಮುಂತಾದವರು ಆಯ್ಕೆಗೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವರು. ಕೃಷಿ, ನೀರಾವರಿ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಮಹತ್ವದ ಸುಧಾರಣೆಗಳನ್ನು ಕೈಗೊಂಡಿರುವರು.

ಈ ಭಾಗದಿಂದ ಮಾನ್ಯ ಶ್ರೀ ಮಹಾಂತೇಶ ಕವಟಗಿಮಠ, ಎಂ.ಎಲ್.ಸಿ.ಗಳಾಗಿ ಆಯ್ಕೆಗೊಂಡು ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಗೈದರು.

ಮಾನ್ಯ ಶ್ರೀಯುತ ಬಿ. ಶಂಕರಾನಂದ, ಶ್ರೀಯುತ ರತ್ನಮಾಲಾ ಸವನೂರ, ಶ್ರೀಯುತ ಬಿ. ಸಿ. ಸರಿಕರ ಮೊದಲಾದವರು ಶಾಸಕರಾಗಿ ಈ ಭಾಗದ ಏಳಿಗೆಗಾಗಿ ಸೇವೆಗೈದ ಮಹನೀಯರಾಗಿವರು.

ಪ್ರಸ್ತುತವಾಗಿ ಮುಗಳಖೋಡವು ಕುಡಚಿ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿದ್ದು, ಈ ಕ್ಷೇತ್ರದಿಂದ ಮಾನ್ಯ ಶ್ರೀಯುತ ಶಾಮ, ಭೀಮ ಘಾಟಗೆಯವರು ಆಯ್ಕೆಗೊಂಡು ಶಾಸಕರಾಗಿ ಸೇವೆಗೈಯುತ್ತಿರುವರು.

ಮುಗಳಖೋಡ ಗ್ರಾಮವು ಜಿಲ್ಲಾ ಪಂಚಾಯತ ಮತಕ್ಷೇತ್ರವನ್ನು ಹೊಂದಿದ್ದು, ಈ ಕ್ಷೇತ್ರದಿಂದ ಜಿಲ್ಲಾ ಪಂಚಾಯತ ಸದಸ್ಯರಾಗಿ ಡಾ॥ ಸಿ. ಬಿ. ಕುಲಗೋಡ, ಶ್ರೀ ರಾಮಚಂದ್ರ ಸತ್ಯಪ್ಪ ಹೊಸಪೇಟಿ, ಶ್ರೀ ಮಾರುತಿ ಗೋಕಾಕ, ಶ್ರೀ ರಾಮಗೌಡ ಪಾಟೀಲ ಮೊದಲಾದ ಮಹನೀಯರು ಆಯ್ಕೆಗೊಂಡು ಈ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದವರು. ಪ್ರಸ್ತುತವಾಗಿ ಶ್ರೀಮತಿ ನೀಲವ್ವ ಭೀ. ಮರಡಿಯವರು ಈ ಭಾಗದ ಜಿಲ್ಲಾ ಪಂಚಾಯತ ಸದಸ್ಯರಾಗಿ ಸೇವೆ ಗೈಯುತ್ತಿರುವರು.

ಮುಗಳಖೋಡ ಗ್ರಾಮ ಪಂಚಾಯತ :

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮುಗಳಖೋಡದ ಗ್ರಾಮ ಪಂಚಾಯತಿಯು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆ. ಈ ಗ್ರಾಮವು ತಾಲೂಕಿನಿಂದ ೨೫ ಕಿ.ಮೀ. ಅಂತರದಲ್ಲಿ ಆಗ್ನೇಯ ದಿಕ್ಕಿನಲ್ಲಿದೆ. ರಾಯಬಾಗ ತಾಲೂಕಿನ ಪ್ರಮುಖ ಸ್ಥಳಗಳಲ್ಲಿ ಈ ಗ್ರಾಮವು ಮಹತ್ವದ ಸ್ಥಾನ ಪಡೆದುಕೊಂಡಿದೆ. ಮೊದಲಿಗೆ ೧೯೫೯ ರಲ್ಲಿ ಮಂಡಳ ಪಂಚಾಯತಿಯಾಗಿ ಕಾರ್ಯನಿರ್ವಹಿಸಿದ್ದು, ನಂತರದಲ್ಲಿ ೧೯೮೧ರ ಗ್ರಾಮಪಂಚಾಯತಿಯಾಗಿ ಅಸ್ತಿತ್ವಕ್ಕೆ ಬಂದಿತು. ಇದು ಜತ್ತ – ಜಾಂಬೋಟ ಹೆದ್ದಾರಿಯ ಪಕ್ಕಕ್ಕೆ ಮುಗಳಖೋಡ – ಮಹಾಲಿಂಗಪೂರ ರಸ್ತೆಯ ಪಕ್ಕದಲ್ಲಿ ಈ ಪಂಚಾಯತಿಯು ನಿರ್ಮಾಣಗೊಂಡಿದೆ.

ಈ ಪಂಚಾಯತಿಯ ಕ್ಷೇತ್ರವು ೧೨೮೬೩ ಚ.ಕಿ.ಮೀ. ಇದ್ದು, ೫೪೬೮ ಮನೆಗಳನ್ನು ಒಳಗೊಂಡಿರುತ್ತದೆ. ೨೦೧೧ರ ಜನಗಣತಿಯ ಪ್ರಕಾರ ೩೪,೫೧೦ ಜನಸಂಖ್ಯೆ ಇರುತ್ತದೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ೧೧ ವಾರ್ಡುಗಳು ರಚನೆಗೊಂಡಿದ್ದು, ಒಟ್ಟು ಚುನಾಯಿತರ ಸದಸ್ಯರ ಸಂಖ್ಯೆ ೫೬ ಆಗಿದ್ದು, ಕರ್ನಾಟಕದ ಅತೀ ದೊಡ್ಡ ಎರಡನೇ ಗ್ರಾಮ ಪಂಚಾಯತಿ ಆಗಿದೆ.

ಈ ಗ್ರಾಮ ಪಂಚಾಯತಿಯಲ್ಲಿ ೫ ಸ್ಥಾಯಿ ಸಮಿತಿಗಳಿದ್ದು, ಎಲ್ಲ ಕಾರ್ಯಚಟುವಟಿಕೆಗಳನ್ನು ಸುಗಮವಗಿ ನಡೆಸಿಕೊಂಡು ಹೋಗುವುದುಕ್ಕಾಗಿ ಸಹಾಯಕವಾಗಿದೆ. ೧೨ ಜನ ಕಾರ್ಯಲಯದ ಸಿಬ್ಬಂದಿಗಳಾಗಿ ಮತ್ತು ಒಬ್ಬ ಪಿ.ಡಿ.ಓ. ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಗ್ರಾಮ ಪಂಚಾಯತ ಚುನಾವಣೆಯಲ್ಲಿ ಆಯ್ಕೆಗೊಂಡಿರುವ ಶ್ರೀಮತಿ ಅಕ್ಕಾತಾಯಿ ಬಸಪ್ಪ ಯಡವಣ್ಣವರ ಅವರು ಅಧ್ಯಕ್ಷರಾಗಿ ಮತ್ತು ಶ್ರೀ ಸಿದ್ಧಾರೋಡ ಕರಿಭೀಮಗೋಳ ಅವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವರು.

ಈ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ರೈತರು ಹಾಗೂ ಉದ್ಯೋಗಿಗಳಿಗೆ ಅನೂಕೂಲವಾಗುವಂತೆ ೧೫ ಸಹಕಾರಿ ಸಂಘ ಸಂಸ್ಥೆಗಳು, ಬ್ಯಾಂಕುಗಳು ಕಾರ್ಯನಿರ್ವಹಿಸುತ್ತವೆ. ಅಂಚೆಕಛೇರಿ, ದೂರವಾಣಿ ಕೇಂದ್ರ, ಸಾರ್ವಜನಿಕ ಗ್ರಂಥಾಲಯ ಕಾರ್ಯನಿರ್ವಹಿಸುತ್ತವೆ. ೧ ಸರಕಾರಿ, ೧೫ ಖಾಸಗಿ ಆಸ್ಪತ್ರೆಗಳಿದ್ದು, ಗ್ರಾಮ ಮತ್ತು ಸುತ್ತಲಿನ ಜನರಿಗೆ ಚಿಕಿತ್ಸೆ ನೀಡುವ ಕೇಂದ್ರಗಳಾಗಿವೆ. ಅಲ್ಲದೇ ಪಶು ಚಿಕಿತ್ಸಾಲಯ ಕೂಡಾ ಇದೆ ಮತ್ತು ಶೈಕ್ಷಣಿಕವಾಗಿ ಪೂರ್ವ ಪ್ರಾಥಮಿಕದಿಂದ ಪದವಿ ತರಗತಿಯವರೆಗೆ ೧೫ ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು, ಜನಸಾಮಾನ್ಯರಿಗೆ ವಿದ್ಯೆಯನ್ನು ಧಾರೆಯರಿಯುತ್ತಿವೆ.

: ಅಡಿಟಿಪ್ಪಣಿಗಳು :

೧) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಭಾ. ಪಾಟೀಲ : ೧೯೯೫.

೨) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಭಾ. ಪಾಟೀಲ : ೧೯೯೫.

೩) ಪ್ರಾಚೀನ ಭಾರತದ ಚರಿತ್ರೆ : ಶ್ರೀ ಪಿ. ಬಿ. ದೇಸಾಯಿ : ಶ್ರೀನಿವಾಸ ರಿತ್ತಿ : ಪುಟ ಸಂಖ್ಯೆ : ೨೯೮.

೪) ಪ್ರಾಚೀನ ಭಾರತ : ಶ್ರೀ ಎ. ವಿ. ನರಸಿಂಹಮೂರ್ತಿ ಮತ್ತು ಶ್ರೀ ಬಿ. ಕೆ. ಗುರುರಾಜರಾವ ಪುಟ ಸಂಖ್ಯೆ : ೨೭೭.

೫) ದ ಹಿಸ್ಟರಿ ಆಫ್ ಕರ್ನಾಟಕ : ಶ್ರೀ ಪಿ. ಬಿ. ದೇಸಾಯಿ : ಪುಟ ಸಂಖ್ಯೆ : ೯೫.

೬) ಹಿಸ್ಟರಿ ಆ್ಯಂಡ ಕಲ್ಚರ್ ಆಫ್ ಕರ್ನಾಟಕ : ಶ್ರೀ ಕೆ. ಆರ್. ಬಸವರಾಜ : ಪುಟ ಸಂಖ್ಯೆ : ೪೯ – ೫೦.

೭) ಪ್ರಾಚೀನ ಭಾರತದ ಚರಿತ್ರೆ : ಶ್ರೀ ಪಿ. ಬಿ. ದೇಸಾಯಿ, ಶ್ರೀನಿವಾಸ ರಿತ್ತಿ ಮತ್ತು ಬಿ. ಆರ್. ಗೋಪಾಲ : ಪುಟ ಸಂಖ್ಯೆ : ೩೧೮.

೮) ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ : ಪಾಲಾಕ್ಷ : ಪುಟ ಸಂಖ್ಯೆ : ೬೭.

೯) ಪ್ರಾಚೀನ ಭಾರತದ ಚರಿತ್ರೆ : ಶ್ರೀ ಪಿ. ಬಿ. ದೇಸಾಯಿ, ಶ್ರೀನಿವಾಸ ರಿತ್ತಿ, ಬಿ. ಆರ್. ಗೋಪಾಲ : ಪುಟ ಸಂಖ್ಯೆ : ೩೭೭.

೧೦) ಎ ಹಿಸ್ಟರಿ ಆಫ್ ಕರ್ನಾಟಕ : ಶ್ರೀ ಪಿ. ಬಿ. ದೇಸಾಯಿ : ಪುಟ ಸಂಖ್ಯೆ : ೧೧೫–೧೧೬.

೧೧) ಹಿಸ್ಟರಿ ಆ್ಯಂಡ ಕಲ್ಚರ್ ಆಫ್ ಕರ್ನಾಟಕ : ಶ್ರೀ ಕೆ. ಆರ್. ಬಸವರಾಜ : ಪುಟ ಸಂಖ್ಯೆ : ೬೭.

೧೨) ಹಿಸ್ಟರಿ ಆ್ಯಂಡ ಕಲ್ಚರ್ ಆಫ್ ಕರ್ನಾಟಕ : ಶ್ರೀ ಕೆ. ಆರ್. ಬಸವರಾಜ : ಪುಟ ಸಂಖ್ಯೆ : ೬೩.

೧೩) ಎ ಹಿಸ್ಟರಿ ಆಫ್ ಕರ್ನಾಟಕ : ಶ್ರೀ ಪಿ. ಬಿ. ದೇಸಾಯಿ : ಪುಟ ಸಂಖ್ಯೆ : ೧೧೫–೧೧೬.

೧೪) ಪ್ರಾಚೀನ ಭಾರತ : ಶ್ರೀ ನರಸಿಂಹ ಮೂರ್ತಿ, ಗುರುರಾಜರಾವ : ಪುಟ ಸಂಖ್ಯೆ : ೨೮೯.

೧೫) ದಕ್ಷಿಣ ಭಾರತದ ಇತಿಹಾಸ : ಶ್ರೀ ಶೇಕ್ ಅಲಿ, ರಂಗಸ್ವಾಮಯ್ಯ, ಜಿ. ಆರ್. : ಪುಟ ಸಂಖ್ಯೆ : ೧೯೧ – ೧೯೨.

೧೬) ಬೆಳಗಂ ಡಿಸ್ಟ್ರಿಕ್ ಗೆಝೇಟಿಯರ್ : ಡಾ. ಸೂರ್ಯನಾಥ ಕಾಮತ್ : ೧೯೮೭. ಪುಟ ಸಂಖ್ಯೆ : ೩೫೨ – ೫೮.

೧೭) ನಂದನವನ (ಸಂ) : ಶ್ರೀ ಡಿ. ವ್ಹಿ. ಪುರಾಣಿಕ : ೧೯೮೩. ಪುಟ ಸಂಖ್ಯೆ : ೪೮.

೧೮) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಭಾ. ಪಾಟೀಲ : ೧೯೯೫. ಪುಟ ಸಂಖ್ಯೆ : ೫.

೧೯) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೯೮ : ಸವದತ್ತಿ.

೨೦) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೯೮ : ಸವದತ್ತಿ.

೨೧) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೯೮ : ಸವದತ್ತಿ.

೨೨) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೪೧ : ಸವದತ್ತಿ.

೨೩) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಪುಟ ಸಂಖ್ಯೆ : ೧೪.

೨೪) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೯೮ : ಪುಟ ಸಂಖ್ಯೆ : ೧೪.

೨೫) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೦೯೮ : ಸವದತ್ತಿ. ಪುಟ ಸಂಖ್ಯೆ : ೨೬.

೨೬) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೧೪೧ : ನೇಸರಗಿ.

೨೭) ಎಸ್. ಆಯ್. ಆಯ್. : ಸಂಪುಟ – ೨೦ : ಹೋಸೂರ.

೨೮) ಎಸ್. ಆಯ್. ಆಯ್. : ಸಂಪುಟ – ೨೦ : ಹೋಸೂರ.

೨೯) ಎಸ್. ಆಯ್. ಆಯ್. : ಸಂಪುಟ – ೨೦ : ಕ್ರಿ.ಶ. ೧೧೨೩ : ರಾಯಬಾಗ.

೩೦) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಪುಟ ಸಂಖ್ಯೆ : ೧೮.

೩೧) ಎಸ್. ಆಯ್. ಆಯ್. : ಸಂಪುಟ – ೨೦ : ಬೆಳಗಾವಿ.

೩೨) ಎಸ್. ಆಯ್. ಆಯ್. : ಸಂಪುಟ – ೨೦ : ಸವದತ್ತಿ.

೩೩) ಕರ್ನಾಟಕ ಸಂಕ್ಷಿಪ್ತ ಇತಿಹಾಸ : ಡಾ. ಸೂರ್ಯನಾಥ ಕಾಮತ : ೧೯೭೩.
ಪುಟ ಸಂಖ್ಯೆ : ೪೮.

೩೪) ಇತಿಹಾಸ ದರ್ಶನ : ಸಂಪುಟ ೫ : ಪುಟ ಸಂಖ್ಯೆ : ೧೭೩.

೩೫) ಕೆ. ಆಯ್. ಸಂ. ೨ : ಸಂಪುಟ ೨೫ : ಪುಟ ಸಂಖ್ಯೆ : ೯೩.

೩೬) ಕರ್ನಾಟಕ ಸಂಕ್ಷಿಪ್ತ ಇತಿಹಾಸ : ಡಾ. ಸೂರ್ಯನಾಥ ಕಾಮತ : ೧೯೭೩.
ಪುಟ ಸಂಖ್ಯೆ : ೬೧.

೩೭) ಆನ್ಯುವೆಲ್ ರಿಪೋರ್ಟ ಆನ್ ಸೌಥ ಇಂಡಿಯನ್ ಎಪಿಗ್ರಫ : ೧೯೪೨–೪೩.
ಅಪೆಂಡಿಕ್ಸ ಇ.

೩೮) ಎಫಗ್ರಫಿಯ ಇಂಡಿಕಾ : ಸಂಪುಟ – ೨೧ : ಪುಟ ಸಂಖ್ಯೆ : ೯.

೩೯) ಬಸವಣ್ಣನವರ ವಂಶಜರು ಕರ್ನಾಟಕ ಭಾರತಿ : ಸಂಪುಟ : ಡಾ. ಎಂ. ಎಂ. ಕಲಬುರ್ಗಿ
ಪುಟ ಸಂಖ್ಯೆ : ೯.

೪೦) ಬೆಳಗಂ ಡಿಸ್ಟ್ರಿಕ್ ಗೆಝೋಟಿಯರ್ : ಡಾ. ಸೂರ್ಯನಾಥ ಕಾಮತ : ೧೯೮೭ :
ಪುಟ ಸಂಖ್ಯೆ : ೯೦೭.

೪೧) ಎ.ಆರ್.ಎಸ್.ಆಯ್.ಇ. : ೧೯೪೨–೪೩ : ಪುಟ ಸಂಖ್ಯೆ : ೨೪೫.

೪೨) ಬೆಳಗಂ ಡಿಸ್ಟ್ರಿಕ್ ಗೆಝೋಟಿಯರ್ : ಡಾ. ಸೂರ್ಯನಾಥ ಕಾಮತ್ : ೧೯೮೭ :
ಪುಟ ಸಂಖ್ಯೆ : ೧೦೧.

೪೩) ಬೆಳಗಂ ಡಿಸ್ಟ್ರಿಕ್ ಗೆಝೋಟಿಯರ್ : ಡಾ. ಸೂರ್ಯನಾಥ ಕಾಮತ್ : ೧೯೮೭ :
ಪುಟ ಸಂಖ್ಯೆ : ೧೦೧.

೪೪) ಬೆಳಗಾವಿ ಜಿಲ್ಲೆಯ ಪರಂಪರೆ : ಶ್ರೀ ವ್ಹಿ. ಸಿ. ಮಾಲಗತ್ತಿ : ೨೦೦೦ : ಪುಟ ಸಂಖ್ಯೆ : ೨೦.

ಅಧ್ಯಾಯ - ೪

ಮುಗಳಖೋಡದ ಸ್ವಾತಂತ್ರ್ಯ ಹೋರಾಟಗಾರರು

ಅಧ್ಯಾಯ – ೪

ಮುಗಳಖೋಡದ ಸ್ವಾತಂತ್ರ್ಯ ಹೋರಾಟಗಾರರು

ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟವು ಚರಿತ್ರೆಯಲ್ಲಿ ಮಹತ್ವದ ಘಟನೆಗಳಲ್ಲಿ ಮೂಲಕವಾಗಿ ವ್ಯಕ್ತವಾಗುತ್ತದೆ. ಈ ರಾಷ್ಟ್ರೀಯ ಹೋರಾಟದಲ್ಲಿ ಕನ್ನಡ ನಾಡಿನ ಪಾತ್ರವು ಬಹುಮುಖ್ಯವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಸತ್ಯಾಗ್ರಹ, ಹೋರಾಟ, ಚಳುವಳಿಗಳು ಜರುಗಿದ್ದು, ಇದರ ಪ್ರಭಾವವು ಕರ್ನಾಟಕದ ಮೇಲೆ ಪ್ರಭಾವ ಬೀರಿತ್ತು. ಇದರಿಂದ ಕರ್ನಾಟಕದ ಉತ್ತರ ಭಾಗದಲ್ಲಿರುವ ಬೆಳಗಾವಿ ಜನತೆಯ ಹೋರಾಟವು ಐತಿಹಾಸಿಕವಾಗಿದೆ.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬೆಳಗಾವಿ ಜಿಲ್ಲೆಯ ಕರ್ನಾಟಕದಲ್ಲಿಯೂ ಅಗ್ರಪಂಕ್ತಿಯಲ್ಲಿತ್ತು. "೧೮೮೫ ರ ಡಿಸೆಂಬರದ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ್ನು ಸ್ಥಾಪನೆ ಮಾಡಲು ಮುಂಬೈಯಲ್ಲಿ ಸೇರಿದ ಸಭೆಗೆ ಬೆಳಗಾವಿಯಿಂದ ಶ್ರೀ ಬಾಹುಸಾಹೇಬ ಭಾವೆ ಎಂಬುವರು ಹೋಗಿದ್ದರೆಂದು"[೧] ಹೇಳುತ್ತಾರೆ.

ಕಾಂಗ್ರೇಸ್ಸಿನ ಮೊದಲಿನ ಎರಡು ಅಧಿವೇಶನಗಳಿಗೆ ಪ್ರತಿನಿಧಿಯಾಗಿ ಹೊದವರು ಬೆಳಗಾವಿಯ ವಿಷ್ಣುಪಂತ ಹಾಗೂ ಅವರ ಸಮಕಾಲೀನವರಾದ ಶ್ರೀ ಭಾವುಸಾಹೇಬ ದೇಶಪಾಂಡೆ ಇವರ ಜೊತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಧುರೀಣರು ದತ್ತೋಪಂಕ್ತ ಛತ್ರಿಯವರು ಸ್ವಾತಂತ್ರ್ಯದ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯ ಶ್ರೀ ಗಂಗಾಧರರಾವ ದೇಶಪಾಂಡೆ, ಶ್ರೀ ನಾರಾಯಣ ಜೋಶಿ, ಶ್ರೀ ಅನಂತರಾವ ಚಿಕ್ಕೋಡಿ, ಶ್ರೀ ವೆಂಕಟೇಶ ಹೊಲಿ ಹೀಗೆ ಹಲವಾರು ವ್ಯಕ್ತಿಗಳು ಸಕ್ರಿಯವಾಗಿ ಭಾಗವಹಿಸಿದರು. ಒಂದು ಸಾವಿರ ಸ್ವಾತಂತ್ರ್ಯ ಯೋಧರು ಈ ಜಿಲ್ಲೆಯಲ್ಲಿ ಕಾರಾಗ್ರಹ ಸೇರಿ ಬೆಳಗಾವಿ ಜಿಲ್ಲೆಗೆ ಮಹತ್ವ ತಂದು ಕೊಟ್ಟರು.

ನಮ್ಮ ದೇಶದ ಇತಿಹಾಸದಲ್ಲಿಯೇ ಬೆಳಗಾವಿ ಜಿಲ್ಲೆಯಲ್ಲಿ "೧೯೨೪ರ ನಡೆದ ಕಾಂಗ್ರೇಸ್ ಅಧಿವೇಶನ ಮಹತ್ವವಾದದ್ದು. ಈ ಅಧಿವೇಶನದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷರಾಗಿದ್ದೊಂದು ವಿಶೇಷ"[೨] ಈ ಮಹಾನ್ ವ್ಯಕ್ತಿಯ ಜೊತೆಯಲ್ಲಿ ಭಾಗವಹಿಸಿದವರು. ಪಂಡೀತ ಮೋತಿಲಾಲ ನೆಹರು, ಮೌಲಾನಾ ಶೌಕತಲಿ, ಸರೋಜಿನಿದೇವಿ ಮುಂತಾದ ಗಣ್ಯರು.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮುಗಳಖೋಡದ ಗ್ರಾಮವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿರುವ ಸಂಗತಿಗಳು ಇಬ್ಬರು ಮಹನೀಯರು ಕಂಡು ಬರುತ್ತಾರೆ. ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಈ ಭಾಗದ ಮಹಾನ ಹೋರಾಟಗಾರರು ಧೀರರಾಗಿ ಹೋರಾಡಿರುವುದು ಉಲ್ಲೇಖವಾಗಿದೆ. ಅಂಥವರಲ್ಲಿ ಶ್ರೀ ನಾರಾಯಣ ಭೀಮಾಜಿ ಕುಲಕರ್ಣಿ, ಶ್ರೀ ಗೀರಮಲ್ಲ ಯಡವನ್ನವರ ಇವರ ಜೊತೆಗ ಸಂಗಡಿಗರಾದ ಶ್ರೀ ಅಪ್ಪಣ್ಣಗೌಡ ಪಾಟೀಲ, ಶ್ರೀ ಎಂ. ಪಿ. ಪಾಟೀಲ, ಶ್ರೀ ಮಹಾದೇವಪ್ಪ ಮೆಂಡಗುದ್ದಿ, ಶ್ರೀ ಮಲ್ಲಪ್ಪ ಕೊಕಟನೂರ, ಶ್ರೀ ಲಕ್ಷ್ಮಣ ಡಾಂಗೆ, ಶ್ರೀ ಶಿವಪ್ಪಣ್ಣ ಗುಂಡಾಳಿ ಇವರು ಪ್ರಮುಖರಾಗಿದ್ದರು.

೪.೧ ಶ್ರೀ ನಾರಾಯಣ ಭೀಮಾಜಿ ಕುಲಕರ್ಣಿ :

ಮುಗಳಖೋಡದ ಕುಲಕರ್ಣಿ ಮನೆತರನದವರಾಗಿದ್ದ ಭೀಮಾಜಿಯು ಸುಸಂಸ್ಕೃತರು, ಧರ್ಮಪರರು, ಊರಿನ ಸಮಾಜ ಸೇವಕರು ಇವರ ಮೊದಲನೆಯ ಮಗನಾದ ಶ್ರೀ ನಾರಾಯಣ ತಂದೆ – ತಾಯಿಯರ ಪ್ರೀತಿ ವಾತ್ಸಲ್ಯದ ಕಣ್ಮಣಿಯಾಗಿದ್ದ ನಾರಾಯನರು ೧೯೨೫ ರಲ್ಲಿ ಜನಿಸಿದರು. ಊರಲ್ಲಿಯೇ ೭ನೇ ತರಗತಿಯವರೆಗೆ ಶಿಕ್ಷಣ ಪಡೆದರು. ಇವರು ಯಾವತ್ತು ದೇಶಾಭಿಮಾನದ ಕಥೆಗಳನ್ನು ಹೇಳಿ ಸ್ವಾತಂತ್ರ್ಯದ ಬಗೆಗೆ ಕಿಚ್ಚನ್ನು ಬೆಳೆಸಿಕೊಂಡರು. ಗ್ರಾಮೀಣ ಜನರಲ್ಲಿ ಸ್ವಾತಂತ್ರ್ಯದ ಕುರಿತು ಹೇಳುವಲ್ಲಿ ಪ್ರೀತಿಯ ಪಾತ್ರದವರಾಗಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು :

ಶ್ರೀ ನಾರಾಯನರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಗಾಂಧೀಜಿಯವರ ಪ್ರಭಾವ ಬೀರಿತು. ಗಾಂಧೀಜಿ ನಾಯಕತ್ವದಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಗಳು ಜರುಗಿದ ಈ ಚಳುವಳಿಯಲ್ಲಿ ನಾರಾಯಣರು ಧುಮುಕಿ ಖಾದಿ ಪ್ರಚಾರ ಕೈಕೊಂಡರು. ಅನಂತರ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಕ್ಕೆ ಕ್ರಾಂತಿ ದಳದ ಸದಸ್ಯರಾದರು.

೧೯೪೨ ರ **"ಭಾರತ ಬಿಟ್ಟು ತೊಲಗಿರಿ"**[೩] ಚಳುವಳಿಯು ಹಿರಿಯ ನಾಯಕರು, ಅದರಲ್ಲಿ ಗಾಂಧೀಜಿಯವರು ನಿಶ್ಚಿತವಾದ ಕಾರ್ಯಗಳ ರೂಪರೇಷಗಳನ್ನು ರಚಿಸುವ ಮುನ್ನವೇ ಮುಂಬೈ ಸಭೆಯಲ್ಲಿ ಬಂಧನಕ್ಕೊಳಗಾದರು. ಈ ವೇಳೆಯಲ್ಲಿ ಗೊತ್ತು ಗುರಿಯಿಲ್ಲದೇ ಹೋರಾಟ ಮುಂದುವರಿಯಿತು. ಹಿಂಸೆಗೆ ಅವಕಾಶವೇ ಇಲ್ಲದಂತೆ ನಡೆದ ಅಹಿಂಸಾ ಹೋರಾಟದ ಅಂತಿಮ ಘಟ್ಟ ಹಿಂಸೆಯ ಭೀಕರತೆಗೆ ಬಲಿಯಾಯಿತು. ಅಂಚೆ ಮತ್ತು ತಂತಿ ಇಲಾಖೆಗಳನ್ನು ವಾಹನ

ಸಂಪರ್ಕ ತಪ್ಪಿಸುವದು, ರೈಲು ಹಳಿ ಕೀಳುವುದು, ಸ್ಟೇಶನಗಳನ್ನು ಸುಡುವ ಕಾರ್ಯಗಳು ಭರದಿಂದ ಸಾಗಿದವು. ಶ್ರೀ ನಾರಾಯಣ ಕುಲಕರ್ಣಿ ಈ ಹೋರಾಟಗಳಲ್ಲಿ ಹಿಂದೆ ಬಿದ್ದಿರಲಿಲ್ಲ. ೧೯೪೨ರಲ್ಲಿ ರಾಯಬಾಗ ಸ್ಟೇಶನವನ್ನು ತಮ್ಮ ಸಂಗಡಿಗರೊಂದಿಗೆ ಸುಟ್ಟು ಹಾಕಿದರು[೪]. ಸ್ಟೇಶನ ಧ್ವಂಸ ಮಾಡಿದ ನಂತರ ಬೆಳಗಾಗುವದರಲ್ಲಿ ಸುರಕ್ಷಿತವಾದ ಕಾಡು, ಗುಡ್ಡ, ನದಿ ಹುಡುಕಿಕೊಂಡು ಹೋಗುತ್ತಿದ್ದ ವೀರ ಸೇನಾನಿಗಳಿಗೆ ಅಂಕಲಿಯ ಬಸವಪ್ರಬು ಕೋಕಿಯವರು ತಮ್ಮ ಕಬ್ಬಿನ ತೋಟದಲ್ಲಿ ಆಶ್ರಯ ಕೊಟ್ಟರು. ಶ್ರೀ ನಾರಾಯಣವರಿಗೂ ಅವರ ಸಂಗಡಿರಿಗೂ ಕೋಕಿಯವರ ಮನೆಯೆಂದರೆ ತಮ್ಮ ಮನೆಯೇ ಎಂಬಷ್ಟು ಅಭಿಮಾನ, ಪ್ರೀತಿ ಮೂಡಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಮುಗಳಖೋಡ ಊರಿನ ನಾಯಕರಾದ ಶ್ರೀ ನಾರಾಯಣ ಕುಲಕರ್ಣಿ, ಶ್ರೀ ಗೀರಮಲ್ಲಪ್ಪ ಯಡವನ್ನವರ ಇವರ ಸಂಗಡಿಗರಾದ ಶ್ರೀ ಅಪ್ಪಣ್ಣಗೌಡ ಪಾಟೀಲ, ಶ್ರೀ ಎಂ. ಪಿ. ಪಾಟೀಲ, ಶ್ರೀ ಶಿವಪ್ಪ ಗುಂಡಾಳಿ, ಶ್ರೀ ಲಕ್ಷ್ಮಣ ಡಾಂಗೆ, ಶ್ರೀ ಮಲ್ಲಪ್ಪ ಕೊಕಟನೂರ ಇವರು ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ೧೩ ತಿಂಗಳ ಜೈಲುವಾಸ ಅನುಭವಿಸಿದವರು.

ಹೀಗೆ ಶ್ರೀ ನಾರಾಯಣ ಭೀಮಾಜಿ ಕುಲಕರ್ಣಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರಲ್ಲಿ ಒಬ್ಬರಾಗಿದ್ದು, ಇವತ್ತಿಗೂ ನಮ್ಮೊಂದಿಗೆ ಇದ್ದಾರೆ. ಇದು ನಮ್ಮ ಹೆಮ್ಮೆಯ ವಿಷಯ.

೪.೨ ಶ್ರೀ ಗೀರಮಲ್ಲಪ್ಪ ಯಡವನ್ನವರ :

ಇವರು ಮುಗಳಖೋಡದಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದವರು. ಆರಂಭಿಕ ಶಿಕ್ಷಣ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗಿದರು. ರಾಷ್ಟ್ರೀಯ ಹೋರಾಟದಲ್ಲಿ ಧುಮುಕಲು ಗಾಂಧೀಜಿ ಮತ್ತು ತಿಲಕರರ ಪ್ರಭಾವವು ಬೀರಿತು. ಹಾಗೇ ನನಗೆ ಈ ಗ್ರಾಮದ ಶ್ರೀ ನಾರಾಯಣ ಕುಲಕರ್ಣಿ ಇವರ ಹೋರಾಟದ ಪ್ರಭಾವವು ತುಂಬಾ ಪರಿಣಾಮಕಾರಿಯಾಗಿ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿತು. ನಾರಾಯಣನವರು ಶ್ರೀ ಅಪ್ಪಣ್ಣಗೌಡ ಪಾಟೀಲ, ಶ್ರೀ ಎಂ. ಪಿ. ಪಾಟೀಲ ಇವರು ಹೆಬ್ಬಾಳದಲ್ಲಿ ಸತ್ಯಾಗ್ರಹ ನಡೆಸುವ ಸಂದರ್ಭದಲ್ಲಿ ಎಲ್ಲರೂ ಬ್ರಿಟಿಷರ ಕೈವಶವಾಗಿ ಕಾರಾಗ್ರಹಕ್ಕೆ ಹೋದವರು. ಈ ಸತ್ಯಾಗ್ರಹ ಮಾಡಿದ ಪರಿಣಾಮವಾಗಿ ೬ ತಿಂಗಳು ಕಾಲ ಸೆರೆವಾಸ ಅನುಭವಿಸಬೇಕಾಯಿತು. ಅಲ್ಲಿಂದ ಬಂದು ಕಾಂಗ್ರೇಸ್ ಪಕ್ಷದ ಕಾರ್ಯ ಮಾಡುತ್ತಿರುವ ವೇಳೆಯಲ್ಲಿ 'ಚಲೆಜಾವ್' ಚಳುವಳಿಯಲ್ಲಿ ಗಾಂಧೀಜಿಯವರ ಘೋಷಣೆಯನ್ನು ಯಶಸ್ವಿಗೊಳಿಸಲು ಹೆಬ್ಬಾಳದ ೧೨ ಜನ, ಸಂಕೇಶ್ವರದ ೫ ಜನ, ಮಹಾರಾಷ್ಟ್ರದ ಮೂಲದ ಇಬ್ಬರು ಮುಗಳಖೋಡದ ನಾವಿಬ್ಬರು ಹೀಗೆ ಗುಂಪು ಕಟ್ಟಿಕೊಂಡು ಎರಡು ತಿಂಗಳು ಭೂಗತರಾಗಿದ್ದೇವು. ಅನಂತರ ಪೋಲಿಸರಿಂದ ಬಂಧನಕ್ಕೊಳಗಾಗಿ ಸೆರೆಮನೆಗೆ

ಹೋದೆವು. ಆಗ ನಮ್ಮ ಮೇಲೆ ೬೫ ಮೊಕದ್ದಮೆಗಳನ್ನು ಹಾಕಿದರು. ಈ ಎಲ್ಲ ಮೊಕದ್ದಮೆಗೆ ಉಸ್ತುವಾರಿಯನ್ನು ಪಾಟೀಲರು ಮತ್ತು ನಾರಾಯಣರು ನೋಡುತ್ತಿದ್ದರು.

ಸ್ವಾತಂತ್ರ್ಯಕ್ಕೆ ಮಹಾತ್ಮಾ ಗಾಂಧೀಜಿಯವರ ಪ್ರೇರಣೆ ಪಡದು ಜನರನ್ನು ಸಂಘಟಿಸಿದರು. ಅನಂತರ ಜನರಿಗೆ ಸ್ವಾತಂತ್ರ್ಯ ಅರಿವು ಮೂಡಿಸಿ ಬಲಯುತರನ್ನಾಗಿಸಿದ್ದರು. ಅನೇಕ ಕಾಂಗ್ರೇಸ ಕಾರ್ಯಕರ್ತರನ್ನು ಒಂದುಗೂಡಿಸಿ ಈ ಹೋರಾಟಕ್ಕೆ ಸಿದ್ಧಗೊಳಿಸಿದರು. ಹುಕ್ಕೇರಿ, ಬೆಳಗಾವಿ, ಗೋಕಾಕ, ರಾಯಬಾಗ, ಅಥಣಿ, ನಿಪ್ಪಾಣಿ ಇತ್ಯಾದಿ ಊರುಗಳಲ್ಲಿ ಸಂಘಟನೆಗಳನ್ನು ಕಟ್ಟಿ ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಿದರು. ಸ್ವಾತಂತ್ರ್ಯದ ಚಳುವಳಿಯ ಮಹತ್ವವನ್ನು ಜನಸಾಮಾನ್ಯರಿಗೆ ಮನವರಿಕೆಯಾಗಿ ತಿಳಿಸಿ ಯಶಸ್ವಿ ಹೋರಾಟಕ್ಕಿಳಿದು ಬ್ರಿಟಿಷರಿಂದ ಬಂಧನಕ್ಕೊಳಗಾದರು. ಜೈಲುವಾಸ ಅನುಭವಿಸಿ ಅನೇಕ ತೊಂದರೆಗಳಿಗೆ ಸಿಲುಕಿದರು. ಆದರೂ, ಸಹ ಮುನ್ನಡೆದು ತಮ್ಮ ಸಾಹಸ ಹೋರಾಟವನ್ನೇ ಕೈಗೊಂಡ ಈ ಸಂದರ್ಭದಲ್ಲಿ ದಿವಾಕರ ಮತ್ತು ಗಾಂಧೀಜಿಯವರ ಆಪ್ತಸಹಾಯಕರಾದ ಮಹಾದೇವಬಾಯಿ ದೇಸಾಯಿ, ದಾವಲ ಸಾಹೇಬ, ಪಟವರ್ಧನರಂತ ಪ್ರಮುಖ ವ್ಯಕ್ತಿಗಳ ಪರಿಚಯವು ಆಯಿತು[೫]. ಅಂತವರ ಜೊತೆಗೂಡಿ ಸ್ವಾತಂತ್ರ್ಯದ ಕುರಿತು ಹಲವು ವಿಚಾರಗಳನ್ನು ಚರ್ಚಿಸಿದರು. ನಂತರ ತಮ್ಮ ಬಿಡುವಿನ ವೇಳೆಯಲ್ಲಿ ನೂಲುವ ಕಾಯಕವನ್ನು ಮಾಡುತ್ತ ಸ್ವಾತಂತ್ರ್ಯ ಭಾರತ ಕನಸು ಈಡೇರಿಸುವ ಕಾರ್ಯದಲ್ಲಿ ತೊಡಗಿದರು.

ಹೀಗೆ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಧುಮುಕಿ ಈ ಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿ ಜನರ ಗುಂಪನ್ನು ಕಟ್ಟಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟವರಲ್ಲಿ ಶ್ರೀ ಗೀರಮಲ್ಲಪ್ಪ ಯಡವನ್ನವರರು ಒಬ್ಬರಾಗಿದ್ದರು.

ಒಟ್ಟಿನಲ್ಲಿ ಈ ಜಿಲ್ಲೆಯು ಶಾತವಾಹನರು, ಕದಂಬರು, ಚಾಲುಕ್ಯರು, ರಟ್ಟರು, ಕಿತ್ತೂರ ಸಂಸ್ಥಾನ ಇತ್ಯಾದಿ ವಂಶದ ಅರಸರು ಆಳಿದ ಪ್ರದೇಶವಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿರುವ ಮುಗಳಖೋಡದ ಗ್ರಾಮವು ಭವ್ಯ ಐತಿಹಾಸಿಕ ರಾಜಕೀಯ ಚರಿತ್ರೆಯು ನಮ್ಮ ಸ್ಮೃತಿಯ ಪಟಲದ ಮೇಲೆ ಅಚ್ಚೊತ್ತಿ ನಿಲ್ಲುತ್ತದೆ. ಇಂತಹ ಇತಿಹಾಸ ನಿರ್ಮಿಸಿದ ವ್ಯಕ್ತಿಗಳು ಬಾಳಿ ಬದುಕಿದ ನೆಲದ ಚಾರಿತ್ರಿಕ ಅಧ್ಯಯನ ನಮ್ಮ ಜೀವನಕ್ಕೆ ವಿಶಿಷ್ಟ ಸ್ಪೂರ್ತಿ ನೀಡಬಲ್ಲದು.

[illegible]

[illegible]

[illegible]

[illegible]

: ಅಡಿಟಿಪ್ಪಣಿಗಳು :

೧) ಬೆಳಗಾವಿ ಜಿಲ್ಲೆಯ ಸ್ಥಳ ನಾಮಗಳು : ಡಾ. ಪಿ. ಬಿ. ಕೊರವಿ : ೨೦೧೧ : ಪುಟ ಸಂಖ್ಯೆ : ೩೪ (ಅಪ್ರಕಟಿತ ಮಹಾಪ್ರಬಂಧ)

೨) ಬೆಳಗಾವಿ ಜಿಲ್ಲೆಯ ಸ್ಥಳ ನಾಮಗಳು : ಡಾ. ಪಿ. ಬಿ. ಕೊರವಿ : ೨೦೧೧ : ಪುಟ ಸಂಖ್ಯೆ : ೩೪ (ಅಪ್ರಕಟಿತ ಮಹಾಪ್ರಬಂಧ)

೩) ಸಂಕೇಶ್ವರ ಚಾರಿತ್ರಿಕ ಅಧ್ಯಯನ : ಶ್ರೀ ನಾಗಲಿಂಗ ರಾ. ಬಡಿಗೇರ : ೨೦೧೧ ಪುಟ ಸಂಖ್ಯೆ : ೨೮ (ಅಪ್ರಕಟಿತ ನಿಬಂಧ)

೪) ಸಂಕೇಶ್ವರ ಚಾರಿತ್ರಿಕ ಅಧ್ಯಯನ : ಶ್ರೀ ನಾಗಲಿಂಗ ರಾ. ಬಡಿಗೇರ : ೨೦೧೧ ಪುಟ ಸಂಖ್ಯೆ : ೨೮ (ಅಪ್ರಕಟಿತ ನಿಬಂಧ)

೫) ಪ್ರತಿಭಾವಂತ ಸಂಸದೀಯ ಪಟು, ಪುಸ್ತಕ ಮಾಲಿಕೆ : ಶ್ರೀ ಎಂ. ಪಿ. ಪಾಟೀಲ, ಡಾ. ಗುರುಪಾದ ಮರೆಗುದ್ದಿ : ೨೦೦೮ : ಪುಟ ಸಂಖ್ಯೆ : ೨೦

ಅಧ್ಯಾಯ - ೫

ಮುಗಳಖೋಡದ ಸಾಂಸ್ಕೃತಿಕ ಪರಿಸರ

ಅಧ್ಯಾಯ – ೫

ಮುಗಳಖೋಡದ ಸಾಂಸ್ಕೃತಿಕ ಪರಿಸರ

ಚರಿತ್ರೆಯ ಇತಿಹಾಸದಲ್ಲಿ ಸಾಂಸ್ಕೃತಿಕ ಪರಿಸರವು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ. ಪ್ರತಿಯೊಂದು ಪ್ರದೇಶವು ತನ್ನದೇ ಆದ ಸಾಂಸ್ಕೃತಿಕ ಪರಿಸರದ ಹಿನ್ನಲೆಯನ್ನು ಒಳಗೊಂಡಿರುವಂತೆ ಮುಗಳಖೋಡ ಗ್ರಾಮವು ಸಾಂಸ್ಕೃತಿಕ ಪರಿಸರದಿಂದ ಕೂಡಿದ ಪ್ರದೇಶವಾಗಿದೆ. ಚಾರಿತ್ರಿಕವಾಗಿ ವಿವಿಧ ರಾಜಮನೆತನಗಳು ಆಡಳಿತ ನಡೆಸುವುದು ಈ ಗ್ರಾಮದಲ್ಲಿ ಕಂಡು ಬರುತ್ತದೆ. ಅಂದಿನ ಕಲೆ ಮತ್ತು ವಾಸ್ತುಶಿಲ್ಪದ ನಿದರ್ಶನಗಳು ಸಾಕ್ಷಿಯಾಗಿದೆ. ಇಂತಹ ಕಲೆ ಮತ್ತು ವಾಸ್ತುಶಿಲ್ಪದಿಂದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿನ ಸ್ಥಿತಿಗತಿಯನ್ನು ಅರಿತುಕೊಳ್ಳಬಹುದಾಗಿದೆ.

೫.೧ ಸಾಮಾಜಿಕ ಸ್ಥಿತಿಗತಿಗಳು :

ಕರ್ನಾಟಕವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿಯ ಹಲವಾರು ಶಾಸನಗಳು ರಾಜ–ಮಹಾರಾಜರ ಆಳ್ವಿಕೆಯನ್ನು ನಡೆಸಿರುವ ಬಗೆಗೆ ವಿವರಿಸುತ್ತದೆ. ಆದರೆ ಜನತೆಯ ಸಾಮಾಜಿಕ ಜೀವನದ ವಿವಿಧ ಆಯಾಮಗಳ ಬಗ್ಗೆ ಶಾಸನಗಳಲ್ಲಿ ಹೆಚ್ಚಾಗಿ ವಿಸ್ತಾರಗೊಂಡಿಲ್ಲ. ಆದರೂ ಶಾಸನಗಳಲ್ಲಿ ಅಲ್ಲಲ್ಲಿ ಉಲ್ಲೇಖಿತವಾದ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಿ ಮತ್ತು ಇತರ ಆಧಾರಗಳಿಂದ ಅಂದಿನ ಸಾಮಾಜಿಕತೆಯ ಬಗ್ಗೆ ವಿವರಿಸಬಹುದಾಗಿದೆ.

ಕನ್ನಡ ನಾಡಿನ ಸಾಮಾಜಿಕ ಸ್ಥಿತಿಗಳು ನೋಡಿದಾಗ ಸಮಾಜದಲ್ಲಿ ವರ್ಗ, ವರ್ಣ, ಕುಟುಂಬ ಮತ್ತು ಅವುಗಳ ಆಲೋಚನಾ ಕ್ರಮ ಇತ್ಯಾಧಿ ಅಂಶಗಳು ಕಂಡುಬರುತ್ತದೆ. ಸಾಮಾಜಿಕ ವ್ಯವಸ್ಥೆಯು ಸಮಾಜದ ಅನೇಕ ಅಂಶಗಳನ್ನು ಒಳಗೊಂಡ ಅಧ್ಯಯನವಾಗಿರುತ್ತದೆ. ಸಮಾಜವೆಂದ ಮೇಲೆ ಅನೇಕ ವರ್ಗಬೇಧ ಪ್ರಬೇಧ ಮೊದಲಾದ ಅಂಶಗಳು ಸೇರ್ಪಡೆಯಾಗುವುದು ಅವಶ್ಯಕ. ಸಮಾಜ ವ್ಯವಸ್ಥೆಯ ಮೇಲೆ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಬೌದ್ಧಿಕ ಅಂಶಗಳು ಪ್ರಭಾವ ಬೀರುತ್ತವೆ. ಕರ್ನಾಟಕದ ಸಾಮಾಜಿಕ ವ್ಯವಸ್ಥೆಯನ್ನು ಶಾಸನಗಳ ಹಾಗೂ ಇತರ ಐತಿಹಾಸಿಕ ಆಧಾರಗಳಿಂದ ರಚಿಸುವುದು. ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಕುಹೂಂಡಿ ಪ್ರದೇಶವನ್ನು

[illegible]

[illegible]

[illegible]

[illegible]

[illegible]

[illegible]

[illegible]

ಆಳಿದ ಅರಸರ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಅಲ್ಲಿನ ಜನ ಜೀವನ ನಿಜಕ್ಕೂ ಸುಖಮಯವಾಗಿತ್ತೆಂದು ಸೂಕ್ಷ್ಮವಾಗಿ ತಿಳಿದು ಬರುತ್ತದೆ. ಏಕೆಂದರೆ ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಭೂಮಿಯು ನವಭುಜಗಳಲ್ಲಿ ಹುಲುಸಾಗಿ ಬೆಳೆಯುತ್ತಿತ್ತು[೧] ಎಂದು ರಟ್ಟರಸರ ಶಾಸನದಿಂದ ತಿಳಿದು ಬರುತ್ತದೆ.

ಕುಹೂಂಡಿ ನಾಡು ಸಂಪದ್ಭರಿತವಾಗಿತ್ತು. ಇದರ ವ್ಯಾಪ್ತಿಯಲ್ಲಿ ಬರುವ ಮುಗಳಖೋಡ ಗ್ರಾಮವು ಸಹ ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದ್ದು, ಸಾಮಾಜಿಕವಾಗಿ ಶಾಂತಿ ಸಮೃದ್ಧಿಯನ್ನು ಒಳಗೊಂಡಿರುವುದು ಸಮಾಜದಲ್ಲಿ ನೈತಿಕತೆ ನೆಲೆಯುರಿತ್ತು ಎಂಬುದಾಗಿ ಹಲವಾರು ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ.

ಜಾತಿ ವ್ಯವಸ್ಥೆ :

ಸಮಾಜವನ್ನು ಚತುವರ್ಣಗಳಿಂದ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಎಂಬುದಾಗಿ ವಿಭಜಿಸಿದ್ದನ್ನು ಪ್ರಾಚೀನ ದಾಖಲೆಯಾದ **'ಪುರುಷ ಸೂಕ್ತ'**ದಲ್ಲಿ ಕಾಣಬಹುದು. ವೇದಕಾಲದಲ್ಲಿ ಸಮಾಜವನ್ನು ಹೀಗೆ ವಿಭಜಸಿದ್ದರೂ ಈ ವರ್ಣವ್ಯವಸ್ಥೆ ಬಿಗಿಯಾಗಿರದೇ ವೃತ್ತಿಯನ್ನವಲಂಬಿಸಿ ವಿಭಜಿಸಲಾಗಿತ್ತು. ಆದರೆ ಕಾಲಾಂತರದಲ್ಲಿ ಈ ವರ್ಣವ್ಯವಸ್ಥೆಯು ಬದಲಾವಣೆ ಹೊಂದುತ್ತಾ ಜಾತಿ ವ್ಯವಸ್ಥೆಯಾಗಿ ಮಾರ್ಪಾಡಾದ ವಿಷಯವು ವೇದೋಪನಿಷತಗಳಿಂದ ತಿಳಿದು ಬರುತ್ತದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಸಮಾಜದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನವನ್ನು ಹೊಂದಿದ್ದರು. ಇವರು ಸಮಾಜದ ಇತರ ಮೂರು ವರ್ಗಗಳಿಂದ ಪೂಜ್ಯನೀಯರಾಗಿದ್ದರೆಂದು ತಿಳಿದುಬರುತ್ತದೆ. ತಮ್ಮ ಜೀವಮಾನವನ್ನೆಲ್ಲಾ ಅಧ್ಯಯನ, ಧ್ಯಾನ, ಯಜ್ಞಯಾಗಗಳಲ್ಲಿ ನಿರತರಾಗಿದ್ದರು. ಹಲವು ಶಾಸನಗಳಲ್ಲಿ ಇವರನ್ನು **'ಮಹಜನರೆಂದು'** ಕರೆಯಲಾಗಿದೆ. ಬ್ರಾಹ್ಮಣರಿಗೆ ಧಾನ ಮಾಡುವುದು ಅಥವಾ ನೀಡುವುದು ಪುಣ್ಯದ ಕೆಲಸವೆಂದು ಅಂದಿನ ಜನತೆ ತಿಳಿದುಕೊಂಡಿದ್ದರು.

ರಾಜಕೀಯ ರಂಗದಲ್ಲಿ ಕ್ಷತ್ರೀಯರ ಪಾತ್ರವು ವಿಶಿಷ್ಟವಾದದ್ದು ಧೈರ್ಯ, ಸಾಹಸ, ಶೌರ್ಯ, ತೇಜಸ್ಸು ಮುಂತಾದವು ಕ್ಷತ್ರೀಯರ ಸ್ವಾಭಾವಿಕ ಗುಣಗಳಾಗಿದ್ದರಿಂದ ಆಡಳಿತ ನಡೆಸಲು ಹಾಗೂ ಯುದ್ಧ ಮಾಡಲು ಸಮರ್ಥರಾಗಿದ್ದರು. ಕ್ಷತ್ರೀಯ ಅರಸರು ತಮ್ಮ ಘನತೆಗೆ ತಕ್ಕಂತೆ ಪ್ರಜೆಗಳಿಂದ ಹಾಗೂ ವಿದ್ವಾಂಸರಿಂದ ಬಿರುದುಗಳನ್ನು ಧರಿಸುತ್ತಿದ್ದರೆಂದು ಹೇಳಬಹುದು. ಪ್ರಸ್ತುತ ಸಮಾಜದಲ್ಲಿ ಬ್ರಾಹ್ಮಣರ ನಂತರದ ಸ್ಥಾನದಲ್ಲಿ ಕ್ಷತ್ರೀಯರು ಪ್ರಮುಖರಗಿದ್ದರು. ಅಂದಿನ ಸಮಾಜದಲ್ಲಿ ಕ್ಷತ್ರೀಯರು ಎಲ್ಲಾ ರಂಗಗಳಲ್ಲಿ ತಮ್ಮ ಪ್ರಾವೀಣ್ಯತೆಯನ್ನು ತೋರಿಸುತ್ತಿದ್ದರೆಂದು ಹೇಳಬಹುದು. ಈ ಭಾಗದ ಹಲವಾರು ಶಾಸನಗಳು ದಂಡನಾಯಕ, ಮಹಾಮಂಡಲೇಶ್ವರ ಮತ್ತು ಸಾಮಂತರನ್ನು

ಉಲ್ಲೇಖಿಸುವುದರಿಂದ ಕ್ಷತ್ರೀಯರು ಸಮಾಜದ ಒಂದು ಪ್ರಮುಖ ವರ್ಗವಾಗಿ ಬೆಳೆದಿರುವುದು ತಿಳಿಯುತ್ತದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖವಾದ ವರ್ಗವೆಂದರೆ ವೈಶ್ಯರು, ಹೆಸರೇ ಸೂಚಿಸುವಂತೆ ಇವರ ಪ್ರಮುಖ ಉದ್ಯೋಗ ವ್ಯಾಪಾರ. ಇದಲ್ಲದೇ ಕೃಷಿ ಮತ್ತು ವಾಣಿಜ್ಯದಲ್ಲಿ ತೊಡಗುವುದು ವೈಶ್ಯರ ಇತರ ಕಸಬುಗಳಾಗಿದ್ದು, ಇವರು ರಾಷ್ಟ್ರದ ಸುಖಜೀವನಕ್ಕೆ ಸಹಾಯಕವಾಗಿರುತ್ತಿದ್ದರು. ಇವರು ತಮ್ಮದೇ ಆದ ಸ್ಥಾನಮಾನ ಹೊಂದಿದ್ದು ಶ್ರೇಣಿಗಳನ್ನು ಹೊಂದಿರುವರೆಂದು ಕಂಡು ಬರುತ್ತದೆ.

ಸಮಾಜದಲ್ಲಿ ಅತ್ಯಂತ ಕೆಳವರ್ಗದವರೆಂದರೆ ಶೂದ್ರರು. ಇವರು ಮೇಲಿನ ಮೂರು ವರ್ಗದವರು ಬಿಟ್ಟಿರುವ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಿದ್ದರೆಂದು ಹೇಳಬಹುದು. ಈ ವರ್ಗಕ್ಕೆ ಸೇರಿದವರು ಹೆಚ್ಚಾಗಿ ಇನ್ನೊಬ್ಬರ ಆಶ್ರಯದಲ್ಲಿರುವುದರಿಂದ ಇವರಿಗೆ ಸ್ವತಂತ್ರವಾದ ಯಾವ ಆಸ್ತಿ ಅಥವಾ ಅಂತಸ್ತು ಇದ್ದಿರಲಿಲ್ಲವೆಂದು ತಿಳಿಯುತ್ತದೆ. ಅರಮನೆಗಳಲ್ಲಿ ಗೋವುಗಳನ್ನು ಕಾಯುವುದು ಹಾಗೂ ಅವುಗಳ ಸಂರಕ್ಷಣೆ ಮುಂತಾದವು ಇವರ ಕರ್ತವ್ಯಗಳಾಗಿದ್ದವು.

ಈ ಮೇಲೆ ವಿವರಿಸದಂತೆ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಹಾಗೂ ಶೂದ್ರ ಎಂಬುವರು ಒಂದು ದೇಹಕ್ಕೆ ಸೇರಿದ ಅಂಗಗಳಿದ್ದಂತೆ. ಆದುದರಿಂದ ಇವರಲ್ಲಿ ಯಾವುದೇ ರೀತಿಯ ಬೇಧಭಾವಗಳಿರಬಾರದು. ದೇಹದ ಅಂಗಗಳಲ್ಲಿ ಯಾವುದೊಂದು ಅಂಗವು ತಾನು ನಿರ್ವಹಿಸಬೇಕಾದ ಕರ್ತವ್ಯದಲ್ಲಿ ಲೋಪವುಂಟಾದರೆ ಅದರಿಂದ ಇಡೀ ದೇಹಕ್ಕೆ ಹೇಗೆ ತೊಂದರೆಯಾಗುತ್ತದೆಯೋ ಅದೇ ರೀತಿ ಸಮಾಜದಲ್ಲಿರುವ ವರ್ಗಗಳಲ್ಲಿ ಹೊಂದಾಣಿಕೆ ಇಲ್ಲದೇ ಇದ್ದರೆ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಲಾರದು. ಈ ತತ್ವವನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಹೊಂದಾಣಿಕೆಯಿಂದ ಬಾಳುತ್ತಿದ್ದರೆಂದು ಹೇಳಬಹುದು. ಈ ರೀತಿಯಾಗಿ ಅಂದಿನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಪ್ರಮುಖ ಜಾತಿಯವರು ತಮ್ಮ ಪೂರ್ವಜರಿಂದ ಬಂದ ಕುಲಕಸಬುಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು ಎನ್ನಬಹುದು.

ಕನ್ನಡ ನಾಡಿನಲ್ಲಿ ಇತಿಹಾಸದ ಪ್ರಾರಂಭದ ಕಾಲದಿಂದಲೂ ವ್ಯವಸ್ಥಿತವಾದ ಕೌಟುಂಬಿಕ ಜೀವನ ನಡೆಸಿದ್ದು ಕಂಡು ಬರುತ್ತದೆ. ತಂದೆ–ತಾಯಿ, ಮಕ್ಕಳು, ಬಂಧು–ಬಳಗದವರೆಲ್ಲರೂ ಒಂದೇ ಚಪ್ಪರದಡಿಯಲ್ಲಿ ಕೂಡಿ ಬಾಳುವ ಅವಿಭಕ್ತ ಕುಟುಂಬಗಳೇ ಹೆಚ್ಚು. ಹಾಗೆಯೇ ರಟ್ಟರ ಆಳ್ವಿಕೆಯಲ್ಲಿ **'ಹಮ್ಮು'** ಎನ್ನುವವನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಅವರೆಲ್ಲರೂ ರಾಜನ ಆಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದು ತಂದೆಗೆ ವಿಧೇಯರಾಗಿ ಕೂಡಿ ಬಾಳುತ್ತಿದ್ದರು. ಒಂದು ವೇಳೆ ಮುಖ್ಯಸ್ಥನಿಗೆ ವಾರಸುದಾರರಿಲ್ಲದ ಪಕ್ಷದಲ್ಲಿ ತನ್ನೆಲ್ಲ ಆಸ್ತಿಯನ್ನು ಧಾರ್ಮಿಕ ಕಾರ್ಯಕ್ಕೆ ಇಲ್ಲವೇ ಸಾರ್ವಜನಿಕ

[illegible]

[illegible]

[illegible]

[illegible]

[illegible]

ಉಪಯೋಗಕ್ಕಾಗಿ ದಾನ ಮಾಡುವ ಸಂಪ್ರದಾಯವು ರಟ್ಟರ ಕಾಲದಲ್ಲಿತ್ತೆಂದು ತಿಳಿಯುತ್ತದೆ.

ರಟ್ಟರ ಆಳ್ವಿಕೆಯಲ್ಲಿ ಬಹುಪತ್ನಿತ್ವ ಇತ್ತು. ತನ್ನ ಪತ್ನಿಯನ್ನು ಹೊರತುಪಡಿಸಿ ಉಳಿದ ಹೆಣ್ಣುಮಕ್ಕಳು ಕೂಡ **'ಪರನಾರಿ ಸಹೋದರಿ'** ಭಾವನೆಯಿಂದ ನಡೆಸಿಕೊಳ್ಳುತ್ತಿದ್ದರು[೩]. **'ಯಥಾ ರಾಜಾ, ತಥಾ ಪ್ರಜಾ'** ಎಂಬಂತೆ ಪರಧನ ಪರಸತಿಯರನ್ನು ಬಯಸದ ಬಾಚಿಗೊಲ್ಲನ ನೈತಿಕತೆಯನ್ನು ಹೇಳುವ ಶಾಸನ **'ಪರಧನಂ ಪರಸತಿಯಂ'** ಗೌರವದಿಂದ ಕಾಣುತ್ತಿದ್ದರು[೪].

ಕಾವ್ಯಗಳು ತಮ್ಮ ಕಾಲದ ಸಮಾಜದ ಯಥಾವತ್ತಾದ ಚಿತ್ರಣವನ್ನು ಸಮಾಜದ ಆಶೋತ್ತರಗಳನ್ನು ಆದರ್ಶಗಳನ್ನು ಕಂಡುಂಡ ಕೊರತೆಗಳನ್ನು ಸೂಚಿಸುತ್ತವೆ. ಕಾವ್ಯಗಳಲ್ಲಿ ಸಮಾಜದ ಪ್ರತಿಬಿಂಬ ಗೋಚರಿಸುತ್ತದೆ. ನೇಮಿಚಂದ್ರನ **'ಲೀಲಾವತಿಯಲ್ಲಿ'** ಪತಿವ್ರತಾಸ್ತ್ರೀಯು ತನ್ನ ಪತಿಯನ್ನು ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವಳು ಎಂದು ತಿಳಿಯುತ್ತದೆ.

ಗಂಡನಿಲ್ಲದೇ ಜೀವಿಸಲು ಒಪ್ಪದೆ ಅಸುನೀಗಲು ಸಿದ್ಧಳಾಗುತ್ತಾಳೆ. ಅದರಂತೆ ಕಂದರ್ಪನು **'ಏಕಪತ್ನಿವ್ರತಸ್ಥನಾಗಿ'** ಆದರ್ಶ ಮೆರೆಸಿದ್ದಾನೆ[೫]. ಇಲ್ಲಿ ಕವಿಯು ರಾಜನನ್ನು ಆದರ್ಶನನ್ನಾಗಿ ಚಿತ್ರಿಸಿ ಸಮಾಜದ ಪ್ರತಿನಿಧಿಯನ್ನಾಗಿ ನಿಲ್ಲಿಸಿದ್ದಾನೆ.

ಪ್ರಾಚೀನ ಕಾಲದಿಂದಲೂ ಪ್ರಮುಖ ಜಾತಿಗಳು ಅಸ್ತಿತ್ವದಲ್ಲಿದ್ದಂತೆಯೇ ಇವತ್ತೂ ಕೂಡಾ ಕಾಣಬಹುದು. ಅವು ಉಪಜಾತಿಗಳು ಹಾಗೂ ವೃತ್ತಿ ಆಧಾರಿತ ಜಾತಿಗಳಾಗಿ ಕಂಡು ಬರುತ್ತವೆ. ಅವುಗಳಲ್ಲಿ ಕಮ್ಮಾರರು, ಬಡಿಗರು, ಅಕ್ಕಸಾಲಿರು, ಒಡ್ಡರು, ಅಗಸರು, ಕುರುಬರು, ಬಣಜಿಗರು ಮೊದಲಾದವರು ಇರುವರೆಂಬುದು ತಿಳಿಯುತ್ತದೆ. ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೆ ಸಮಾಜದಲ್ಲಿ ಉನ್ನತ ಸ್ಥಾನಗಳಿಸಿದ್ದವು. ಸ್ತ್ರೀಯರು ಆಡಳಿತದಲ್ಲಿ ಧರ್ಮದಲ್ಲಿ, ಶಿಕ್ಷಣದಲ್ಲಿ ಪುರುಷರಷ್ಟೇ ಸಮಾನತೆಯುಳ್ಳವರಾಗಿದ್ದರು.

ಭಾರತೀಯರಲ್ಲಿ ಇರುವಷ್ಟು ಹಬ್ಬಗಳು ಬೇರೆಯಲ್ಲಿಯೂ ಕಂಡು ಬರುವುದಿಲ್ಲ. ಅದರಲ್ಲೂ ಕನ್ನಡ ನಾಡಿನಲ್ಲಿ ಸಂಭ್ರಮ, ಸಂತಸಗಳಿಗೆ ಪ್ರತೀಕವಾಗಿರುವ ಅನೇಕ ಹಬ್ಬಗಳು ಕಂಡುಬರುತ್ತವೆ. ಜನರ ಮನದಲ್ಲಿ ಪ್ರೀತಿ, ಸ್ನೇಹ, ದಯೇ, ಭಕ್ತಿ ಮೊದಲಾದ ನೀತಿ ನಿಯಮಗಳನ್ನು ಬೆಳೆಸುವುದರಲ್ಲಿ ಹಬ್ಬ ಹರಿದಿನಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳೆಂದರೆ ಮಹಾನವಮಿ, ಹೋಳಿಹಬ್ಬ, ಯುಗಾದಿಹಬ್ಬ, ಕಾರಹುಣ್ಣಿಮೆ, ಗಣೇಶಹಬ್ಬ, ರಕ್ಷಾ ಬಂಧನ, ಜೋಕುಮಾರ ಹಬ್ಬ, ದೀಪಾವಳಿ ಹಬ್ಬ, ಮೊಹರಂ ಮೊದಲಾದವುಗಳು ಮುಖ್ಯವಾಗಿದ್ದವು. ಇಂತಹ ಹಬ್ಬ ಹರಿದಿನಗಳ ಆಚರಣೆಯಲ್ಲಿ ಮುಗಳಖೋಡವು ಹೊರತಾಗಿಲ್ಲ. ಇಲ್ಲಿ ಎಲ್ಲ ಧರ್ಮಿಯರು ಒಂದು ಗೂಡಿ ವಿಶೇಷ ಹಬ್ಬಗಳನ್ನು ಆಚರಿಸುತ್ತಿರುವುದು ನಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ.

೩.೨ ಆರ್ಥಿಕ ಸ್ಥಿತಿಗತಿ :

ಒಂದು ಪ್ರದೇಶದ ಅಥವಾ ನಾಡಿನ ವೈಭವವನ್ನು ಮತ್ತು ಶ್ರೀಮಂತಿಕೆಯನ್ನು ಅಲ್ಲಿನ ಸಂಪತ್ತಿನಿಂದ ಅಳೆಯುವುದು ಸಾಧ್ಯವಾಗುತ್ತದೆ. ಭೌಗೋಳಿಕವಾಗಿ ಫಲವತ್ತಾದ ಮಣ್ಣು, ನೀರಾವರಿಯ ಸೌಕರ್ಯದಿಂದ ಉತ್ತಮ ಫಸಲುಗಳನ್ನು ಬೆಳೆಯುವದಾಗಿದೆ. ಆರ್ಥಿಕ ರಂಗದಲ್ಲಿ ಕೃಷಿಯು ಪ್ರಧಾನವಾಗಿದ್ದು ಒಂದು ನೆಲೆಯ ಚಿತ್ರಣವನ್ನು ಬದಲಿಸಬಹುದಾಗಿದೆ. ನಮ್ಮದು ಕೃಷಿ ಪ್ರಧಾನವಾದ ದೇಶ, ಬೇಸಾಯಕ್ಕೆ ಇಂದಿಗಿಂತಲೂ ಹೆಚ್ಚು ಪ್ರಾಚೀನ ಕಾಲದಲ್ಲಿ ಪ್ರೋತ್ಸಾಹದ ಜೊತೆಯಲ್ಲಿಯೇ ಪುರಸ್ಕಾರವಿತ್ತು. ಸಮಾಜದ ಮಹತ್ವದ ಭಾಗ ಆರ್ಥಿಕ ವ್ಯವಸ್ಥೆಯಾಗಿದೆ. ಯಾವುದೇ ಪ್ರದೇಶ ಆರ್ಥಿಕವಾಗಿ ಸಂಪತ್ಭರಿತವಾದಾಗ ಮಾತ್ರ ಸಮೃದ್ಧ ಸ್ವಾಭಿಮಾನದ ಬದುಕನ್ನು ನಡೆಸಿ ಸಮಗ್ರ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಸಾಧ್ಯವಾಗುತ್ತದೆ. ಕಷ್ಟಪಟ್ಟು ದುಡಿಯುವ ಮಣ್ಣಿನ ಮಕ್ಕಳಿಗೆ '**ಅನ್ನದಾತ**'ರೆಂಬ ವಾತ್ಸಲ್ಯದ ನುಡಿಯುಂಟು[೬]. ಕುಹೂಂಡಿ ನಾಡು ಫಲವತ್ತಾದ ಭೂಮಿಯನ್ನು ಒಳಗೊಂಡು ನಿಸರ್ಗ ಸಂಪತ್ತಿನಿಂದಲೂ ರೈತನ ದುಡಿಮೆಯಿಂದಲೂ ಪೂವಿನ ಭಾಗಿಯ ಪ್ರದೇಶ ಸಂಪತ್ಭರಿತವಾಗಿತ್ತು[೬]. ಕೃಷಿಯೂ ನಮ್ಮ ದೇಶದ ಪ್ರಧಾನ ಕಸಬು ಆಗಿದ್ದು, ಅದನ್ನೇ ಈ ಭಾಗದ ಜನರು ತಮ್ಮ ಮೂಲ ಉದ್ಯೋಗವನ್ನಾಗಿಸಿಕೊಂಡಿದ್ದರು. ಏಕೆಂದರೆ ಕಪ್ಪು ಮತ್ತು ಕೆಂಪು ಮಣ್ಣಿನ ಫಲವತ್ತತೆಯನ್ನು ಒಳಗೊಂಡಿರುವ ಭೂಮಿಯು ಮುಗಳಖೋಡದ ಪರಿಸರದಲ್ಲಿ ಕಂಡುಬರುತ್ತದೆ. ಇಲ್ಲಿನ ರೈತರಿಗೆ ವರದಾನವಾಗಿ ಘಟಪ್ರಭಾ ಎಡದಂತೆ ಕಾಲುವೆ (ಜಿ.ಎಲ್.ಬಿ.ಸಿ) ಹರಿಯುತ್ತದೆ. ಅಷ್ಟೇ ಅಲ್ಲದೇ ನೈರುತ್ಯ ಮಾನ್ಸೂನ ಮಳೆಯು ಹೆಚ್ಚಿನ ಪ್ರಮಾಣದಲ್ಲಿ ಆಗುವುದರಿಂದ ಕೆರೆ, ಕೊಳವೆ ಬಾವಿಗಳು, ಬಾವಿಗಳ ಅನುಕೂಲತೆಯಿಂದ ಹೆಚ್ಚಿನ ಬೆಳೆಗಳನ್ನು ಬೆಳೆಯುವುದಾಗಿದೆ. ಪ್ರತಿಶತ ೮೦% ಕ್ಕಿಂತಲೂ ಅಧಿಕ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇಲ್ಲಿನ ಮುಖ್ಯ ಬೆಳೆಗಳೆಂದರೆ ಕಬ್ಬು, ಅರಿಸಿನ, ಗೋವಿನಜೋಳ, ಗೋಧಿ, ಜವೆಗೋಧಿ ಮೊದಲಾದ ವಾಣಿಜ್ಯ ಬೆಳೆಗಳನ್ನು ನೆರೆ ಹೊರೆ ರಾಜ್ಯಗಳೊಂದಿಗೆ ವ್ಯಾಪಾರ ವಹಿವಾಟು ಹೊಂದಿರುವುದು. ಹಾಗೆಯೇ ಇನ್ನಿತರ ಬೆಳೆಗಳ ಜೊತೆಗೆ ತರಕಾರಿಗಳನ್ನು ಸಹ ಬೆಳೆಯುವರು.

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ದಿನೋಪಯೋಗಿ ವಸ್ತುಗಳನ್ನು ತಯಾರಿಸಲು ಕೆಲವೊಂದು ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡಿದ್ದನು. ಇಂತಹ ವೃತ್ತಿಗಳನ್ನೇ (ಕೈಗಾರಿಕೆಗಳನ್ನು) ಅವಲಂಬಿಸಿ ಜೀವನ ನಡೆಸುತ್ತಿರುವ ಕೆಲವು ಜನರಿದ್ದರು. ಅಂತಹ ವೃತ್ತಿಗಳನ್ನು ಇಲ್ಲಿ ತಿಳಿಸಲಾಗಿದೆ. ಅವರೆಲ್ಲ ಕಮ್ಮಾರರು, ನೇಕಾರರು, ಬಡಿಗರು, ಅಕ್ಕಸಾಲಿಗರು, ಚಮ್ಮಾರರು ಮೊದಲಾದ ಕರಕುಶಲ ಕಸಬುಗಾರರಾಗಿದ್ದರು. ಇಂತಹ ವೃತ್ತಿಗಳನ್ನು ಅವಲಂಬಿಸಿದ ಜನರನ್ನು ಈ ಗ್ರಾಮದಲ್ಲಿ ಕೂಡಾ ಕಾಣಬಹುದಾಗಿದೆ.

ಸಹಕಾರಿ ಹಣಕಾಸು ಸಂಘ ಸಂಸ್ಥೆಗಳು :

ಸಹಕಾರಿ ರಂಗದಲ್ಲಿ ರೈತರಿಗಾಗಿ, ವ್ಯಾಪಾರಸ್ಥರಿಗಾಗಿ, ಕಾರ್ಮಿಕರಿಗಾಗಿ, ಉದ್ಯೋಗಿಗಳಿಗೆ ಆರ್ಥಿಕ ಸಹಾಯ ನೀಡುವುದಕ್ಕಾಗಿ ಸ್ಥಾಪನೆಗೊಂಡಿರುವ ಸಂಘಗಳೇ ಸಹಕಾರಿ ಸಂಘಗಳಾಗಿವೆ. ಶೇರು ಬಂಡವಾಳ ಸಂಗ್ರಹಣೆ ಮಾಡಿ ತಮ್ಮ ಕಾರ್ಯಾಚರಣೆಯನ್ನು ನಡೆಸುತ್ತವೆ. ಇವು ಮುಗಳಖೋಡ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸ್ಥಾಪನೆಗೊಂಡು ತಮ್ಮ ಕಾರ್ಯಚಟುವಟಿಕೆಯನ್ನು ಮುಂದುವರಿಸಿವೆ. ಅಂತಹ ಸಂಘಗಳೆಂದರೆ – 'ದಕ್ಷಿಣ ಭಾಗದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಮಹಾವೀರ ಅಲ್ಪಸಂಖ್ಯಾತರ ಸಹಕಾರಿ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಅಂಬಿಕಾ ವಿವಿಧ್ದೋದೇಶಗಳ ಸಹಕಾರಿ ಸಂಘ, ಶ್ರೀ ಹನುಮಾನ ವಿವಿದ್ಧೋದೇಶಗಳ ಸಹಕಾರಿ ಸಂಘ (ಹಾರನಕೋಡಿ), ಶ್ರೀ ಗುರು ಬಸವ ವಿವಿದ್ದೋದೇಶಗಳ ಸಹಕಾರಿ ಸಂಘ, ಅರಿಹಂತ ಅರ್ಬನ್ ಸೌಹಾರ್ದಿತ ಕ್ರೇಡಿಟ್ ಸಹಕಾರಿ ನಿ., ಹುಲ್ಲೋಳ್ಳಿ (ಶಾಖೆ : ಮುಗಳಖೋಡ), ಡಿ.ಸಿ.ಸಿ ಬ್ಯಾಂಕ ಮೊದಲಾದವುಗಳು.

ಈ ಎಲ್ಲ ಸಹಕಾರಿ ಸಂಘಗಳು ತನ್ನ ಕಾರ್ಯಚಟುವಟಿಕೆಯನ್ನು ಯಶಸ್ವಿಯಾಗಿ ಮುಂದುವರೆಸುತ್ತ ರೈತರಿಗೆ ಬೆನ್ನುಲುಬು ಆಗಿನಿಂತು ಅವರ ದುಡಿಮೆಗೆ ಆರ್ಥಿಕ ಸಹಾಯ ನೀಡಿ ಸಹಕರಿಸುತ್ತಿವೆ.

೫.೩ ಧಾರ್ಮಿಕ ಸ್ಥಿತಿಗತಿ :

ಕರ್ನಾಟಕದ ಧಾರ್ಮಿಕ ಇತಿಹಾಸವು ಅದರ ರಾಜಕೀಯ ಚರಿತ್ರೆಯಷ್ಟೇ ವೈವಿಧ್ಯ ಹಾಗೂ ವೈಶಿಷ್ಟ್ಯ ಪೂರ್ಣವಾಗಿದೆ. ಅದರ ಒಂದು ಅಮೋಘ ಲಕ್ಷಣವೆಂದರೆ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ಮತ ಪಂಥಗಳಷ್ಟೇ ಭಾರತ ಹಾಗೂ ವಿಶ್ವದ ಎಲ್ಲ ಧರ್ಮಗಳಿಗೂ ಕ್ರಿ.ಶ. ದಿಂದ ಕಳೆದ ಶತಮಾನದವರೆಗೆ ಕರ್ನಾಟಕ ತನ್ನ ಹೆಬ್ಬಾಗಿಲನ್ನು ತೆರೆದಿದೆ".

ಭಾರತವು ಪ್ರಾಚೀನ ಕಾಲದಿಂದಲೂ ಹಲವಾರು ಧರ್ಮಗಳನ್ನು ಪೋಷಿಸಿ ಬೆಳೆಸಿಕೊಂಡು ಬಂದಿದೆ. ಈ ಮಾತು ಸಮಗ್ರ ಭಾರತದಂತೆ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಕರ್ನಾಟಕದ ಇತಿಹಾಸದೊಂದಿಗೆ **'ಚತುಸ್ಸಮಯ'** ವರ್ಗಗಳಾದ ಬೌದ್ಧ, ಜೈನ, ಹಿಂದೂ, ಮುಸ್ಲಿಂ ಧರ್ಮಗಳು ಬೆಳೆಸಿಕೊಂಡು ಬಂದಿವೆ. ಇದನ್ನು ಪ್ರಾಚೀನ ಮತ್ತು ಮಧ್ಯಕಾಲೀನ ಮುಗಳಖೋಡದಲ್ಲಿ ಕಾಣಬಹುದಾಗಿದೆ. ಇಲ್ಲಿನ ಹಲವು ಅಂಶಗಳು ದೇವಸ್ಥಾನಗಳ ನಿರ್ಮಾಣ, ಅವುಗಳ ಜೀರ್ಣೋದ್ಧಾರ, ನೈವೆದ್ಯ ಸ್ಥಾನಾದಿಪತಿಗಳಿಗೆ, ಧಾರ್ಮಿಕ ಗುರುಗಳಿಗೆ ಹಾಗೂ ವಿದ್ಯಾದಾನಕ್ಕೆ ದತ್ತಿಯನ್ನು ನೀಡಿದ ವಿಷಯಗಳನ್ನು ತಿಳಿಸುತ್ತವೆ. ಈ ನಿಟ್ಟಿನಲ್ಲಿ ಮುಗಳಖೋಡವು ಹಲವಾರು ಧರ್ಮಗಳ ನೆಲೆಯಾಗಿತ್ತು ಎಂಬುದು ವಾಸ್ತುಶಿಲ್ಪದಿಂದ ತಿಳಿದು ಬರುತ್ತದೆ.

ಮುಗಳಖೋಡ ಗ್ರಾಮದ ಜನಜೀವನದಲ್ಲಿ ಎದ್ದು ಕಾಣುವ ಸರ್ವಧರ್ಮದ ಸಮನ್ವಯತಾ ನೀತಿಯು ಪ್ರಾಚೀನ ಕಾಲದಿಂದಲೂ ಎಲ್ಲ ಧರ್ಮ, ಮತ, ಪಂಥ, ಪಂಗಡಗಳು ಕೂಡಿಯೇ ಬಂದಿರುವುದು ಕಂಡುಬರುತ್ತದೆ. ಈ ಗ್ರಾಮದಲ್ಲಿ ಧಾರ್ಮಿಕವಾಗಿ ರಚನೆಗೊಂಡಿರುವ ಹಲವು ದೇವಾಲಯಗಳು ಸರ್ವಧರ್ಮ ಸಹಿಷ್ಣುತೆಯ ಕುರುಹುಗಳಾಗಿ ನಿಂತಿದೆ. ಸನಾತನ ವೈದಿಕ ಪರಂಪರೆಯ ಹಿಂದೂ ಧರ್ಮವು ತನ್ನ ವೈಶಿಷ್ಟ್ಯವನ್ನು ಪಡೆದಿದೆ. ಈ ಧರ್ಮವು ಅಂದಿನ ಪರಂಪರೆಯನ್ನು ಒಳಗೊಂಡು ಜನರ ಸಂಸ್ಕೃತಿಗೆ ಪ್ರೇರಣೆಯಾಗಿದೆ.

ಧರ್ಮವು ಸಂಸ್ಕೃತಿಯ ಜೀವಾಳ. ಮಾನವನ ಸಂಸ್ಕೃತಿಯ ನಿರ್ಮಾಣದಲ್ಲಿ ಧರ್ಮಕ್ಕೆ ಅಗ್ರಸ್ಥಾನವಿದೆ. 'ಜನಜೀವನದ ಸ್ವರೂಪಕ್ಕೆ ಧರ್ಮವೇ ನಿರ್ಣಾಯಕ ಶಕ್ತಿಯಂತ್ತಿತ್ತು'[೯]. ಧರ್ಮವನ್ನು ತನ್ನ ಜೀವನದ ಸರ್ವಸ್ವಪ್ನವಾಗಿ ಜೀವನದ ಎಲ್ಲಾ ರಂಗಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ **ಪರಿಣಮಿಸಿತು. ಪಾಪಿಗಳು, ಕೋಪಿಷ್ಟರು, ದೇವಾಲಯಗಳನ್ನು ಅಥವಾ ಧರ್ಮವನ್ನು** ಪ್ರವೇಶಿಸಬಾರದೆಂದು ಕ್ರಿ.ಶ. ೯೮೦ ರ ಸೊಗಲ ಶಾಸನದಿಂದ ಗೊತ್ತಾಗುತ್ತದೆ[೧೦].

ಕುಂತಣಬಾಗಿಯ ಪ್ರದೇಶಗಳಲ್ಲಿ ಒಂದಾದ ಮುಗಳಖೋಡ ದೇವಾಲಯಗಳಲ್ಲಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ದೊರೆತ ಶಾಸನಗಳನ್ನು ನೋಡಲಾಗಿ ವೈಷ್ಣವ, ಶೈವ ಮತ್ತು ಜೈನ ಇವುಗಳಲ್ಲದೇ ವೃತ್ತಿಯಾಧಾರಿತ ಜಾತಿಗಳು ಇದ್ದಂತೆ ತೋರುತ್ತದೆ. ಇವಗುಳ ಬಗ್ಗೆ ಈ ಮುಂದೆ ಚರ್ಚಿಸಲಾಗುವುದು.

ಶೈವ ಧರ್ಮ :

ಭರತ ಭೂಮಿಯಲ್ಲಿ ಶೈವ ಧರ್ಮವು ಅತ್ಯಂತ ಅರ್ವಾಚೀನ ಧರ್ಮಗಳಲ್ಲೊಂದಾಗಿದೆ. ಶಿವೋಪಾಸನೆಯ ಇತಿಹಾಸವು ವೇದಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆಂದು ಹೇಳಲಾಗಿದೆ. ವೇದಪೂರ್ವ ಕಾಲದ ಹರಪ್ಪಾ ಮೆಹಂಜೋದಾರೋ ಸಂಸ್ಕೃತಿಯಷ್ಟು ಪ್ರಾಚೀನವುಳ್ಳ ಧರ್ಮವನ್ನು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮವೆಂದು ಕರೆದಿದ್ದಾರೆ. ಶೈವ ಧರ್ಮಕ್ಕೆ '**ಪಾರುಪಥಧರ್ಮ**'ವೆಂದು ಸಹ ಕರೆಯಲಾಗಿದೆ. ಇದರ ಉಲ್ಲೇಖ ಮಹಾಭಾರತದಷ್ಟು ಪ್ರಾಚೀನವಾದುದ್ದಾಗಿದೆ[೧೧].

ಶೈವ ಧರ್ಮಕ್ಕೆ ಲಾಕುಳ ಎಂಬ ಮತ್ತೊಂದು ಹೆಸರು ಇದೆ. ಈ ಹೆಸರು ಬಹುಶಃ ಪ್ರಾಚೀನವಾದದ್ದು. ಇದು ಲಾಕುಳಿದ ಎಂಬ ಒಬ್ಬ ಮಾನವ ವ್ಯಕ್ತಿಯನ್ನ ಸೂಚಿಸುವದರಿಂದ ಇವರ ಸ್ಥಾನದಲ್ಲಿ ಪಶುಪತ ಎಂಬ ಭಗವಂತನ ಹೆಸರನ್ನಿಟ್ಟು ಪಾಶುಪತ ಸಮಯ ಎಂದು ಮುಂದಿನವರು ಮಾಡಿಕೊಂಡರಬೇಕೆಂದು ಡಾ. ಬಂಡಾರ್ಕನ ಅವರು ಹೇಳುತ್ತಾರೆ. ನಂತರದಲ್ಲಿ ಅವರು ಲಾಕುಳ ಅಥವಾ ಪಾಶುಪಥರಿಗೆ ಕಾಳಾಮುಖರೆಂದು ಹೆಸರಿದ್ದು ಕಾಳಾಮುಖರು ಮತ್ತು ಕಾಪಾಲಕರು ಒಂದೇ

ಎಂದು ಹೇಳಿದ್ದಾರೆ[೧೨].

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ಒಂದಾದ ಈ ಧರ್ಮವು ಮುಗಳಖೋಡ ಹಾಗೂ ಸುತ್ತಲಿನ ಪರಿಸರದಲ್ಲಿ ವ್ಯಾಪಕವಾಗಿ ಹರಡಿದ್ದು ಅಂದಿನ ರಾಜ ಮಹಾರಾಜರನ್ನು, ಮಾಂಡಳಿಕರನ್ನು ಮತ್ತು ಸಾಮಂತರನ್ನು ಆಕರ್ಷಿಸಿತು. ಮುಗಳಖೋಡದಿಂದ ಸುಮಾರು ಅರ್ಧ ಕಿ.ಮೀ. ಅಂತರದಲ್ಲಿ ನೀರಲಖೋಡಿ ರಸ್ತೆಯ ಪಕ್ಕದಲ್ಲಿ ದೇಗುಲ ಗುಡಿಯಿದೆ. ಅದಲ್ಲದೆ ಅರ್ಧ ಕಿ.ಮೀ. ದೂರದಲ್ಲಿ ಹಾರೂಗೇರಿ ರಸ್ತೆಯ ಪಕ್ಕದ ಅಡವಿಯಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯವಿದೆ. ಇವೆಲ್ಲವೂ ಈ ಧರ್ಮದ ಪ್ರಭಾವವನ್ನು ಮುಗಳಖೋಡ ಗ್ರಾಮದ ಜನರ ಮೇಲೆ ಪ್ರಭಾವ ಬೀರಿ ಅಂದಿನಿಂದಲೇ ಶೈವ ಧರ್ಮದ ಇಲ್ಲಿ ನೆಲೆಯೂರಿತ್ತೆಂದು ತಿಳಿದುಬರುತ್ತದೆ.

ವೈಷ್ಣವ ಧರ್ಮ :

ಶಿವನಿಗೆ ಒಂದು ಇತಿಹಾಸವಿರುವಂತೆ ಹಿಂದೂ ಧರ್ಮದಲ್ಲಿ ಅವನಷ್ಟೇ ಪ್ರಬಲವಾದ ವಿಷ್ಣುವಿಗೂ ಒಂದು ಇತಿಹಾಸವಿದೆ. ವೈಷ್ಣವ ಧರ್ಮದವರು ವಿಷ್ಣುನನ್ನು ಆರಾಧಿಸುತ್ತಿದ್ದರು. ಬೌದ್ಧಿಕವಾಗಿ ಜ್ಞಾನಕ್ಕಿಂತ ಭಾವರೂಪವಾದ ಭಕ್ತಿಯೇ ಶ್ರೇಷ್ಠವೆಂದು ವೈಷ್ಣವ ಧರ್ಮ ಒತ್ತಿ ಒತ್ತಿ ಹೇಳುತ್ತದೆ. ವಿಷ್ಣುವು ವೇದಗಳಲ್ಲಿ ಪ್ರಧಾನ ದೇವತೆಯಲ್ಲದಿದ್ದರೂ ಅಪ್ರಧಾನವೇನೂ ಅಲ್ಲ. ಅದನ್ನು ತನ್ನ ಮೂರು ಹೆಜ್ಜೆಗಳಿಂದ ಸಮಸ್ತ ಮೂರು ಲೋಕವನ್ನೇ ಅಳೆಯುವುದನ್ನು ಅಹ್ಲಾದಕರ ನೀತಿಯಲ್ಲಿ ಋಗ್ವೇದದಲ್ಲಿ ಉಲ್ಲೇಖಿಸಿರುವುದು. ದೇವತೆಗಳಲ್ಲಿ ವಿಷ್ಣುವೇ ವರಿಷ್ಠ ದೇವತೆಯೆಂದು ಆಗ್ನೇಯ ಕನಿಷ್ಠ ದೇವತೆಯೆಂದು ಐತಕೀಯ ಬ್ರಾಹ್ಮಣವು ವರ್ಣಿಸುತ್ತದೆ. ಕ್ರಿ.ಶ. ಪೂರ್ವದಲ್ಲಿಯೇ ದಕ್ಷಿಣ ಭಾರತವನ್ನು ಪ್ರವೇಶ ಮಾಡಿದ ವೈಷ್ಣವ ಧರ್ಮ ಕ್ರಿ.ಶ. ೪ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಜನಪ್ರೀಯವಾಯಿತು[೧೩].

ಕನ್ನಡ ಭಾಷೆಯ ಅತ್ಯಂತ ಪ್ರಾಚೀನವಾದ ಹಲ್ಮೀಡಿ ಶಾಸನವು ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಹಾಗೆಯೇ ಕ್ರಿ.ಶ. ೧೦೪೦ ರ ರಟ್ಟರ ದೊರೆ ಕಾರ್ತವೀರ್ಯನ ಶಾಸನವು ವಿಷ್ಣು ಹಾಗೂ ಶಿವನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತ[೧೪].

ಕುಂತನ ಬಾಗೆಂಯ ಪ್ರದೇಶವನ್ನು ಆಳಿದ ಚಾಳುಕ್ಯರ ಮಂಗಳೇಶನು (೫೯೭ – ೬೦೯) ಬದಾಮಿಯಲ್ಲಿ ಪ್ರಸಿದ್ಧ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದನು. ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿ ಮಹಾಜನರು '**ವೈಷ್ಣವಗೀತ**' ಮನೋಹರ ಎಂದು ಕರೆಯಲಾಗಿದೆ.

ವೇದೋಪದೇಶಗಳಲ್ಲಿ ತನ್ನ ಬೇರುಗಳನ್ನು ಹೊಂದಿದ ವೈಷ್ಣವ ಧರ್ಮವು ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ಒಂದಾಗಿತ್ತು. ರಾಮಾನುಜರು ಮತ್ತು ಮಧ್ವಾಚಾರ್ಯರ ಉದಯದಿಂದಾಗಿ ಈ ಧರ್ಮವು ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಬದಾಮಿ ಚಾಳುಕ್ಯರ ಮಂಗಳೇಶನು ವೈಷ್ಣವ ಗುಹಾಲಯವನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಇದರಿಂದ ಕ್ರಿ.ಶ. ೫ನೇ ಶತಮಾನದಿಂದಲೇ ಈ ಧರ್ಮವು ಕರ್ನಾಟಕದಲ್ಲಿ ಜನಪ್ರಿಯವಾಗಿ ಬೆಳೆದು ಬಂದಿರುವುದು ತಿಳಿದುಬರುತ್ತದೆ.

ವಿಷ್ಣುವಿನ ಆರಾಧಕರು ವೈಷ್ಣವರು ಇವರ ಧರ್ಮವೇ ವೈಷ್ಣವ ಧರ್ಮ. ಆದರೆ ಅದು ವೈದಿಕ ಧರ್ಮವೂ ಹೌದು. ಇದು ತನ್ನ ಬೆಳವಣಿಗೆಯ ಕಾಲಘಟ್ಟಗಳಲ್ಲಿ ಭಾಗವತ ಪಂಥ, ವೈಷ್ಣವ ಪಂಥ, ದ್ವೈತ ಪಂಥಗಳಾಗಿ ವಿಂಗಡಣೆಯಾಗಿರುವುದು ಕಂಡುಬರುತ್ತದೆ.

ರಟ್ಟರ ಆಳ್ವಿಕೆಯಲ್ಲಿ ಚಾವುಂಡರಾಯ ಎಂಬುವನು ಮಂತ್ರಿಯಾಗಿದ್ದನು. ಈತನು ವರ್ಣಾಶ್ರಮವನ್ನು ಅನುಸರಿಸಿಕೊಂಡು ಬಂದಿದ್ದನು. ಒಂದೊಂದು ವರ್ಣದವರಿಗೆ ಒಂದೊಂದು ಓಣಿಯನ್ನು ನಿರ್ಮಿಸಿದ್ದನಂತೆ. ಅಲ್ಲದೇ ಬ್ರಾಹ್ಮಣರಿಗೆ ಭೂದಾನವನ್ನು ನೀಡಿದನು ಎಂಬುದಾಗಿ ತಿಳಿಯುತ್ತದೆ. **'ಕುಲಹೀನಸ್ಯ ಕರ್ಮ ಹೀ ನಸ್ಯನ ಪೂಜೆಯಂತೆ'** ಎಂಬುದಾಗಿ ಲಕ್ಷ್ಮೀ ನಾರಾಯಣ ದೇವಾಲಯದ ಶಾಸನದಲ್ಲಿ ಕಂಡುಬರುತ್ತದೆ.

ವೈಷ್ಣವ ಧರ್ಮದ ಪ್ರತಿಪಾದಕನಾದ ಮಹಾಜನಗಳು ಅಂದಿನ ಸಮಾಜದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದರು. ಇವರು ಉಪ ಜೀವನಕ್ಕಾಗಿ ರಾಜರು, ಮಂಡಲೇಶ್ವರರು, ಅಧಿಕಾರಿಗಳು, ಗ್ರಾಮಗಳನ್ನು ದತ್ತಿ ಬಿಟ್ಟು ಅವುಗಳ ಧಾರ್ಮಿಕ, ರಾಜಕೀಯ, ಆಡಳಿತವನ್ನು ವಹಿಸಿಕೊಡುತ್ತಿದ್ದರು. ಅವುಗಳೇ ಅಗ್ರಹಾರಗಳೆನಿಸಿದವು. ಬ್ರಹ್ಮಪುರಿ, ಘಟಕಸ್ಥಾನ ಅವರ ವಾಸಸ್ಥಳ ಹಾಗೂ ಧಾರ್ಮಿಕ ಕೇಂದ್ರಗಳಾಗಿದ್ದವು. ಈ ಧರ್ಮವು ಮುಗಳಖೋಡದಲ್ಲಿ ಪ್ರಚಾರವಾಗಿ ತನ್ನ ಪ್ರತಿಜ್ಞೆಯನ್ನು ಬೆಳೆಸಿಕೊಂಡಿತು. ಆದರೆ ಶೈವ ಧರ್ಮದಷ್ಟು ಜನಪ್ರಿಯತೆಯನ್ನು ಗಳಿಸಲು ಸಾಧ್ಯವಾಗಲಿಲ್ಲ.

ಜೈನ ಧರ್ಮ :

ಮೌರ್ಯರ ಕಾಲದಲ್ಲಿ ಅಂದರೆ ಕ್ರಿ.ಪೂ. ೩ನೇ ಶತಮಾನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ ಜೈನ ಧರ್ಮವು. ಕ್ರಿ.ಶ. ೧೨ನೇ ಶತಮಾನದವರೆಗೆ ತನ್ನ ಪ್ರಾಬಲ್ಯವನ್ನು ಮೆರೆದಿತ್ತು. ಶಿವನಾಗಲಿ, ವಿಷ್ಣುವಾಗಲಿ ಯಾವ ಧರ್ಮವನ್ನು ಉಪದೇಶ ಮಾಡಿಲ್ಲ. ಜಿನನಿಂದ ಬೋಧಿಸಲ್ಪಟ್ಟ ಧರ್ಮವೇ ಜೈನ ಧರ್ಮ[೧೫]. ಜಿನನು ಅವತಾರಿಯಲ್ಲ. ತನ್ನ ಸ್ವಂತ ಬಲದಿಂದ ವಿಕಾರಗಳನ್ನು ಜಯಿಸಿ ಜಿನನಾದನು. ಇಂತಹ ಜೈನ ಧರ್ಮವು ಅನಾದಿ ಕಾಲದಲ್ಲಿ ಒಂದು ಪ್ರಬುದ್ಧ ಧರ್ಮವಾಗಿ ಬೆಳೆದಿತ್ತು.

ಗಂಗ ಮತ್ತು ಹೊಯ್ಸಳರ ವಿಶೇಷ ಪ್ರೋತ್ಸಾಹಕ್ಕೆ ಪಾತ್ರವಾದ ಈ ಧರ್ಮವು ಕದಂಬ, ಚಾಳುಕ್ಯ, ರಾಷ್ಟ್ರಕೂಟ ಹಾಗೂ ಮಾಂಡಳಿಕರಾದ ರಟ್ಟರ ಸಹಾಯದಿಂದ ಈ ಭಾಗದಲ್ಲಿ ಪೋಷಿಸಲ್ಪಟ್ಟಿತ್ತು. ಹೀಗೆ ಪ್ರವರ್ಧಮಾನಕ್ಕೆ ಬಂಧ ಈ ಧರ್ಮವನ್ನು ಕೆಲವು ಮಾಂಡಳಿಕರು, ಸಾಮಂತರು ಹಾಗೂ ಜನಸಾಮಾನ್ಯರು ಪ್ರೋತ್ಸಾಹಿಸಿ ಅದನ್ನು ಒಪ್ಪಿಕೊಂಡರು ಎಂದು ಹೇಳಲಾಗಿದೆ.

ಪ್ರಾಚೀನತೆಯಿಂದ ಜೈನ ಧರ್ಮವು ತನ್ನ ಪ್ರಭಾವವನ್ನು ಅನೇಕ ನೆಲೆಗಳಲ್ಲಿ ಬೀರಿರುವುದು. ಈ ಧರ್ಮದ ಪ್ರಭಾವವು ಮುಗಳಖೋಡದಲ್ಲಿ ಆಗಿರುವುದು ಕಂಡು ಬರುತ್ತದೆ. ಕಲ್ಯಾಣದ ಚಾಳುಕ್ಯರ ಆಳ್ವಿಕೆಯಲ್ಲಿ ಈ ಧರ್ಮವು ಪ್ರಚಾರಗೊಂಡಿತು. ಮುಗಳಖೋಡದಲ್ಲಿನ ಜೈನ ಬಸದಿಗಳು ಇದಕ್ಕೆ ನಿದರ್ಶನವಾಗಿರುವುದು. ಅಷ್ಟೇ ಅಲ್ಲದೇ ಕುಂತನಬಾಗಿಯು ಕೂಡಾ ಒಂದು ಜೈನ ಕೇಂದ್ರವಾಗಿತ್ತು. ಇಲ್ಲಿ ನಿಪ್ಪಾಣಿಗೆ ಹೋಗುವ ಮಾರ್ಗದ ಮಧ್ಯದಲ್ಲಿ ಸ್ತವನಿಧಿಯೂ ಜೈನರ ನೆಲೆಯಾಗಿತ್ತೆಂದು ಕಂಡುಬರುತ್ತದೆ.

ಇಸ್ಲಾಂ ಧರ್ಮ :

ದೆಹಲಿ ಸುಲ್ತಾನರ ಆಳ್ವಿಕೆಯಿಂದ ಬಿಜಾಪುರದ ಆದಿಲ್‌ಷಾಹಿಗಳ ಆಳ್ಷಿಕೆಯವರೆಗೂ ಈ ಧರ್ಮವು ಬೆಳೆದು ಬಂದಿರುವುದು ತಿಳಿಯುತ್ತದೆ. ೧೬-೧೭ ನೇ ಶತಮಾನದಲ್ಲಿ ಮಹಮ್ಮದಿಯರ ಪ್ರಭಾವವು ಮುಗಳಖೋಡದ ಮೇಲೆ ಆಗಿರುವುದನ್ನು ಕಾಣಬಹುದಾಗಿದೆ. ಬಹುಮನಿ ಸುಲ್ತಾನರು ಹಾಗೂ ಬಿಜಾಪುರದ ಆದಿಲ್‌ಷಾಹಿಗಳು ಈ ಭಾಗದಲ್ಲಿ ಆಳ್ವಿಕೆ ನಡೆಸಿ ಈ ಧರ್ಮದ ಪ್ರಭಾವಕ್ಕೆ ಕಾರಣರಾದರು ಎಂದು ಹೇಳಬಹುದು. ಅಲ್ಲದೇ ಇವರ ಪ್ರಭಾವಕ್ಕೆ ಒಳಗಾದ ಈ ಪ್ರದೇಶದಲ್ಲಿ ಈ ಮುಸ್ಲಿಂ ಜನಾಂಗವನ್ನು ಕಾಣಬಹುದು.

ಬೌದ್ಧ ಧರ್ಮ :

ಬೌದ್ಧ ಧರ್ಮ ಹಿಂದೂ ಧರ್ಮದಂತೆ ಒಂದು ಪ್ರಾಚೀನ ಸ್ವತಂತ್ರ ಧರ್ಮವಾಗಿದೆ. ಜೈನ ಧರ್ಮ ಹಿಂದೂ ಧರ್ಮದಿಂದ ವಿಭಿನ್ನವಾಗಿದ್ದು, ಜೈನ ಧರ್ಮದ ಉಗಮ ಭಾರತದಲ್ಲಿಯೇ ಆದರೂ ಬೌದ್ಧ ಧರ್ಮ ಜೈನ ಧರ್ಮಕ್ಕಿಂತ ಸ್ವಲ್ಪ ಹಿಂದಿನದು. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಬೌದ್ಧ ಧರ್ಮದ ಪ್ರಸಾರದ ಕುರಿತು ಹಲವಾರು ವಿಷಯಗಳು ತಿಳಿದು ಬಂದಿವೆ. ಸನ್ನತಿ, ಐಹೊಳೆ, ಕದಂಬ, ಕೋಳಿವಾಡ, ಚಂದ್ರವಳ್ಳಿ, ಬಳ್ಳಿಗಾವೆ, ಬನವಾಸಿ, ಡಂಬಳ ಮೊದಲಾದ ಸ್ಥಳಗಳಲ್ಲಿ ದೊರೆತಿರುವ ಅವಶೇಷಗಳು ಮತ್ತು ಶಾಸನಗಳು. ದೀಪವಂಶ, ಮಹಾವಂಶ ಗ್ರಂಥಗಳು ಹಾಗೂ ಹೂಯೆನ್‌ತ್ಸಾಂಗನ ವರದಿಗಳು ಕರ್ನಾಟಕದಲ್ಲಿ ಬೌದ್ಧ ಧರ್ಮ ಪ್ರಸಾರದಲ್ಲಿತ್ತೆಂದು ತಿಳಿಸಿಕೊಡುವ ಆಕಾರಗಳಾಗಿವೆ. ಈ ನಿಟ್ಟಿನಲ್ಲಿ ಕುಂತನ ಬಾಗೆಯು ಪ್ರಾದೇಶಿಕವಾಗಿ ಬೌದ್ಧ ಧರ್ಮ ಪ್ರಸಾರದಲ್ಲಿತ್ತೆಂದು ಹೇಳಲು ಸಾಧ್ಯವಾಯಿತು.

[illegible]

ಒಟ್ಟಾರೆ ಕನ್ನಡ ನಾಡಿನ ಕುಂತನ ಬಾಗಿಯು ವ್ಯಾಪ್ತಿಗೆ ಬರುವ ಈ ಮುಗಳಖೋಡ ಗ್ರಾಮವು ಎಲ್ಲ ಧರ್ಮದವರಿಗೆ ಸಮಾನವಾದ ಅವಕಾಶವನ್ನು ನೀಡಿ ಧರ್ಮಸಮನ್ವತೆಯನ್ನು ಮೆರೆದಿದೆ. ಇಲ್ಲಿ ಎಲ್ಲ ಧರ್ಮದ ಜನರು ಎಲ್ಲ ಹಬ್ಬ - ಹರಿದಿನಗಳಲ್ಲಿ ಭಾಗವಹಿಸಿ ಸುಮಧುರ ಬಾಂಧವ್ಯ, ಸ್ನೇಹ, ಪ್ರೀತಿ, ಸೌಹಾರ್ದದಿಂದ ಪರಸ್ಪರ ಬೆರೆತು ಆಚರಿಸುವರು. ಈ ಗ್ರಾಮದಲ್ಲಿ ಬಸವ ಜಯಂತಿ, ಶಿವ ಜಯಂತಿ, ಮಹಾವೀರ ಜಯಂತಿ, ಅಂಬೇಡ್ಕರ ಜಯಂತಿ ಮೊದಲಾದ ಆಚರಣೆಗಳನ್ನು ವೈಭವ ಪೂರ್ಣವಾಗಿ ಆಚರಿಸಿ ಹಬ್ಬ-ಜಾತ್ರೆಗಳು, ಉತ್ಸವಗಳು ಈ ಗ್ರಾಮದಲ್ಲಿ ಸೌಹಾರ್ದ ಭಾವನೆಗಳನ್ನು ಎತ್ತಿ ತೋರಿಸುತ್ತದೆ.

೩.೪ ಸಾಂಸ್ಕೃತಿಕ ಕೊಡುಗೆಗಳು :

ಶಿಕ್ಷಣ :

ನಮ್ಮ ಕನ್ನಡ ನಾಡಿನ ವೈಶಿಷ್ಟಪೂರ್ಣ ಸಂಸ್ಕೃತಿಯನ್ನು ರೂಪಿಸಿದ ಸಾಧನೆಗಳಲ್ಲಿ ಶಿಕ್ಷಣವು ಒಂದಾಗಿದೆ. ಎಲ್ಲಾ ದಾನಗಳಿಗಿಂತ ವಿದ್ಯಾದಾನವೇ ಮಿಗಿಲಾದುದೆಂಬ ನಂಬಿಕೆ ನಮ್ಮ ಪೂರ್ವಜರಲ್ಲಿತ್ತು.

ವೇದಗಳ ಕಾಲದಲ್ಲಿ ವೇದ ಮಂತ್ರಗಳನ್ನು ಬಾಯಿಪಾಠ ಮಾಡುತ್ತಿದ್ದರು. ಋಗ್ವೇದ ಕಾಲಕ್ಕೆ ಅದನ್ನು ಬಾಯಿಂದ ಬಾಯಿಗೆ ಕಲಿಯುತ್ತ ಬಂದ ರೀತಿಯೇ ನಮ್ಮ ವಿದ್ಯಾಭ್ಯಾಸದ ಮೊದಲ ಘಟ್ಟ ಎನ್ನಬಹುದು. ವೇದಗಳ ಕಾಲದಲ್ಲಿ ವಿದ್ಯೆ ಪಡೆಯುವ ಹಕ್ಕು ಇತ್ತು. ಆದರೆ ಚತುರ್ವರ್ಣಗಳ ತದನಂತರದಲ್ಲಿ ಸಮಾಜವನ್ನು ವಿಭಜಿಸಿದರು. ವಿದ್ಯಾಭ್ಯಾಸ ಮತ್ತು ಧರ್ಮ ಮುಖ್ಯವಾಗಿ ಬ್ರಾಹ್ಮಣರ ಸ್ವತ್ತಾಗಿತ್ತು.

ಮಠಗಳು :

ಮಠಗಳು ಸಾಮಾನ್ಯವಾಗಿ ದೇವಾಲಯಗಳಿಗೆ ಹೊಂದಿಕೊಂಡು ಇರುತ್ತಿದ್ದವು. ಪ್ರಾಚೀನ ಕಾಲದಲ್ಲಿ ಕಾಳಾಮುಖ ಶೈವ ಮಠಗಳು ಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದವು. ಇಂತಹ ಮುಗಳಖೋಡ ಮಠವು ವಿದ್ಯಾಕೇಂದ್ರದಿಂದ ಪ್ರಸಿದ್ಧಿ ಪಡೆದುಕೊಂಡಿರುತ್ತದೆ.

ಘಟಿಕಾಸ್ಥಾನ :

ಪ್ರೌಢ ಶಿಕ್ಷಣ ಕೇಂದ್ರಗಳಲ್ಲಿ ಘಟಿಕಾಸ್ಥಾನಗಳು ಪ್ರಮುಖವಾಗಿವೆ. 'ಘಟಿಕ' ಎನ್ನುವದು ವಿದ್ಯೆಯು ಮತ್ತು ಧರ್ಮದ ಕೇಂದ್ರವಾಗಿತ್ತು. ಇವುಗಳ ಈಗಿನ ಕಾಲೇಜುಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಘಟಿಕಗಳಲ್ಲಿ ಪಂಡಿತರು, ಗ್ರಂಥಪಾಲಕರು (ಸಂಸ್ಕೃತಿ ಬಂಡಾರಕರು) ಘಟಿಕ ಪ್ರಹಾರಿಗಳು (ಕೆಲಸಗಾರರು ಬರುವ – ಹೋಗುವ ವೇಳೆಯ ಲೆಕ್ಕ ಇಡುವುದು) ಮತ್ತು ಅನೇಕ ವಿದ್ಯಾರ್ಥಿಗಳು ಇರುತ್ತಿದ್ದರು. ಇದೊಂದು ಧಾರ್ಮಿಕ ಕೇಂದ್ರ. ಇದೊಂದು ಉಚ್ಚ ಅಥವಾ ಉನ್ನತ ಶಿಕ್ಷಣ ಕೇಂದ್ರ ಮತ್ತು ವಿದ್ಯಾವಂತ ಮತ್ತು ಘನವಂತರು ಒಂದು ಕಡೆ ಕುಳಿತು ಚರ್ಚಿಸುವ ಸ್ಥಳವಾಗಿತ್ತು. ವೇದ, ಧರ್ಮಶಾಸ್ತ್ರ, ವ್ಯಾಕರಣ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು.

ಅಗ್ರಹಾರ :

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಿಕ್ಷಣ ಪ್ರಸಾರ ಕಾರ್ಯಗಳಲ್ಲಿ ಅಗ್ರಹಾರ ತಮ್ಮದೇ ಆದ ಸ್ಥಾನವನ್ನು ಹೊಂದಿದ್ದವು. ಸಾಮಾನ್ಯವಾಗಿ ಇಲ್ಲಿಯು ಕೂಡಾ ಉಚ್ಛ ಶಿಕ್ಷಣವನ್ನು ಬೋಧಿಸಲಾಗುತ್ತಿತ್ತು. ಈ ಅಗ್ರಹಾರಗಳು ಕೇವಲ ಶಿಕ್ಷಣ ರಂಗದಲ್ಲಿ ಮಾತ್ರವಲ್ಲದೇ ಸಾಮಾಜಿಕ ಮತ್ತು ರಂಗಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದನ್ನು ಕಾಣಬಹುದು.

ಒಂದು ಹಳ್ಳಿಯನ್ನು ವೇದ ಶಾಸ್ತ್ರಗಳಲ್ಲಿ ಪಾರಂಗತವಾದ ಬ್ರಾಹ್ಮಣ ಮಹಾಜನರು ಜೀವನ ಸಾಗಿಸಲು ಮತ್ತು ಅಧ್ಯಯನ ಕೈಗೊಳ್ಳಲು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಅಥವಾ ದತ್ತಿ ಬಿಡುತ್ತಿದ್ದರು. ಒಂದು ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುವಲ್ಲಿ ರಾಜ–ಮಹಾರಾಜರಿಗೆ ಹಲವಾರು ಉದ್ದೇಶಗಳಿದ್ದವು. ಹೀಗೆ ಮಾಡುವದರಿಂದ ಪುಣ್ಯ ಲಭಿಸುತ್ತದೆ ಎಂಬುದು ಒಂದಾದರೆ, ವಿದ್ವಾಂಸರಾದ ಬ್ರಾಹ್ಮಣರನ್ನು ಒಂದೆಡೆ ನೆಲೆಗೊಳಿಸುವುದರಿಂದ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡಿದಂತಾಗುತ್ತದೆ ಎಂಬುದು ಮತ್ತೊಂದು ಉದ್ದೇಶವಾಗಿದೆ.

ಮುಗಳಖೋಡವು ಪ್ರಾಚೀನ ಕಾಲದಿಂದಲೂ ಶಿಕ್ಷಣವಾಗಿ ಬೆಳೆದು ಬಂದಿರುವುದರ ಬಗ್ಗೆ ನಮಗೆ ಸರಿಯಾದ ಮಾಹಿತಿ ಒದಗಿರುವುದಿಲ್ಲ. ಆದರೆ ಕಲ್ಯಾಣ ಚಾಳುಕ್ಯರು ಮಾಂಡಲಿಕರಾದ ಸವದತ್ತಿ ರಟ್ಟರು ಆಳ್ವಿಕೆಯಲ್ಲಿ ಈ ಭಾಗದೊಳಗೆ ಶಿಕ್ಷಣ ಪ್ರಸಾರ ಆರಂಭವಾಗಿತ್ತು. ಅಂದಿನ ಶಿಕ್ಷಣ ಪದ್ಧತಿಯು ಅಗ್ರಹಾರ, ಮಠಗಳು, ಘಟಿಕಾಸ್ಥಾನ ಮತ್ತು ದೇವಾಲಯಗಳಲ್ಲಿ ನಡೆಯುತ್ತಿತ್ತು ಎಂಬುದಾಗಿ ತಿಳಿಯುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಈ ಭಾಗದೊಳಗೆ ಶಿಕ್ಷಣ ರಂಗಕ್ಕೆ ಅಷ್ಟೊಂದು ಪ್ರಾಶಸ್ತ್ಯ ದೊರೆತಿರಲಿಲ್ಲ. ಆದರೆ ಸ್ವಾತಂತ್ರ್ಯ ನಂತರದಲ್ಲಿ ಶಿಕ್ಷಣ ರಂಗವು ಈ ಭಾಗದೊಳಗೆ ತೀವ್ರಗತಿಯಾಗಿ ಬೆಳೆಯತೊಡಗಿತು. ಕನ್ನಡ, ಆಂಗ್ಲ ಭಾಷೆಯ ಶಾಲೆಗಳು ಆರಂಭಗೊಂಡು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯನ್ನು ಒದಗಿಸಲಾಗುತ್ತದೆ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮುಗಳಖೋಡ ಗ್ರಾಮವು ಪೂರ್ವದಲ್ಲಿ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮುಂದುವರೆದಿದ್ದರೂ ಸಹ ಶೈಕ್ಷಣಿಕವಾಗಿ ಅಷ್ಟೊಂದು ಬೆಳೆದಿರಲಿಲ್ಲ. ಇಲ್ಲಿ ಪ್ರಾಥಮಿಕ ಶಿಕ್ಷಣ ಇದ್ದು, ಇಲ್ಲಿನ ವಿದ್ಯಾರ್ಥಿಗಳು ತಮ್ಮ ಪ್ರೌಢ ಶಿಕ್ಷಣಕ್ಕಾಗಿ ಪರಸ್ಥಳಕ್ಕೆ ಹೋಗಬೇಕಾಗುತ್ತಿತ್ತು. ಹೀಗಾಗಿ ಈ ಭಾಗದ ಎಲ್ಲರಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಹಿರಿಯರು, ಶಿಕ್ಷಣ ಪ್ರೇಮಿಗಳು, ವೈದ್ಯರಾಗಿದ್ದ ದಿವಂಗತ ಡಾ. ಮುರಲೀಧರ ವಾಸುದೇವ **ಕುಲಕರ್ಣಿಯವರು ತಮ್ಮ ನೇತೃತ್ವದಲ್ಲಿ ೧೯೭೫–೭೬ ರಲ್ಲಿ ಸಹಕಾರಿ ಪ್ರೌಢ ಶಾಲೆಯನ್ನು ತೆರೆಯಲು ೬೦** ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಅನೇಕ ಹಿರಿಯ ಅಧಿಕಾರಿಗಳನ್ನು ಸಂಪರ್ಕ ಮಾಡಿದರು ಸಹ ಪ್ರಯತ್ನ ಫಲಕಾರಿಯಾಗಲಿಲ್ಲ. ಅಂತಹ ಸಂದರ್ಭದಲ್ಲಿ ಅನೇಕ ಜನರನ್ನು, ಹಿರಿಯರನ್ನು ಸಂಪರ್ಕಿಸಿ ಅವರ ಸಹಾಯ ಸಹಕಾರದೊಂದಿಗೆ ೧೯೭೭–೭೮ ರಲ್ಲಿ **'ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘ'** ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದರು. ಮುಂದೆ ಎಲ್ಲರ ಪರಿಶ್ರಮದಿಂದ **'ಮುಗಳಖೋಡ ವಿದ್ಯಾಲಯ ಮುಗಳಖೋಡ'** ಎಂಬ ಹೆಸರಿನ ಪ್ರೌಢ ಶಾಲೆಯು ೧೯೭೮ ಜೂನ್ ೨೩ ರಂದು ಪ್ರಾರಂಭವಾಯಿತು. ಆಗ ಸಂಸ್ಥೆಯ ಅಧ್ಯಕ್ಷರಾಗಿ ಡಾ. ಎಂ. ವ್ಹಿ. ಕುಲಕರ್ಣಿಯವರು ಮುಂದುವರೆದರು.

ನಂತರದಲ್ಲಿ ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಉಪಾಧ್ಯಕ್ಷರಾಗಿದ್ದ ದಿವಂಗತ ಶ್ರೀಯುತ ಬಸಲಿಂಗಪ್ಪ ನೀಲಪ್ಪ ಕುಲಗೋಡ ಅವರ ಸಂಸ್ಥೆಗೆ ಒಂದು ಲಕ್ಷ ರೂಪಾಯಿಗಳನ್ನು ದೇಣಿಗೆ ಕೊಟ್ಟಿದ್ದರಿಂದ ೧೯೮೨ ರಲ್ಲಿ ಮುಗಳಖೋಡ ವಿದ್ಯಾಲಯ ಮುಗಳಖೋಡ ಇದ್ದುದ್ದನ್ನು **'ಬಸಲಿಂಗಪ್ಪ ನೀಲಪ್ಪ ಕುಲಗೋಡ'** ಪ್ರೌಢ ಶಾಲೆ ಎಂದು ನಾಮಕರಣ ಮಾಡಲಾಯಿತು.

ಮುಂದೆ ತನ್ನ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋದ ಅಂದಿನ ಆಡಳಿತ ಮಂಡಳಿಯು ಪರಿಶ್ರಮದಿಂದ ಈ ಸಂಸ್ಥೆ ೧೯೯೦ ರಲ್ಲಿ ಪ್ರಾಥಮಿಕ ಶಾಲೆಯನ್ನು ಆರಂಭಿಸಿತು. ನಂತರ ಈ ಸಂಸ್ಥೆಗೆ ದಿವಂಗತ ಗಂಗಾಬಾಗೀರಥಿ ಭಾಗವ್ವ ಸಿದ್ದಮಲ್ಲಯ್ಯ ಮಠಪತಿ ಭೂಮಿಯನ್ನು ದಾನವಾಗಿ ನೀಡಿದ್ದರಿಂದ ಅವರ ಹೆಸರನ್ನೇ ಪ್ರಾಥಮಿಕ ಶಾಲೆಗೆ ಈಡಲಾಯಿತು. ನಂತರ ಅಂದಿನ ಆಡಳಿತ ಮಂಡಳಿಯ ಪರಿಶ್ರಮದ ಫಲವಾಗಿ ೧೯೯೩–೯೪ ರಲ್ಲಿ ಪ್ರೌಢ ಶಾಲೆ ಇದ್ದುದ್ದನ್ನು ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ (ಪಿ.ಯು.ಸಿ) ಯನ್ನು ಆರಂಭಿಸಿದರು.

೨೦೦೮ ರಲ್ಲಿ ಜಿಲ್ಲಾ ಪಂಚಾಯತ ಸದಸ್ಯರಾಗಿದ್ದ ಡಾ. ಸಿ. ಬಿ. ಕುಲಗೋಡ ಅವರು ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡು, ಅವರ ಪ್ರೇರಣೆ ಪ್ರೋತ್ಸಾಹದಿಂದ ಹಲವಾರು ಪ್ರಗತಿಪರ ಕಾರ್ಯಗಳು ನಡೆದು, ಸಂಸ್ಥೆಯು ಉತ್ತಮ ಸ್ಥಿತಿಯನ್ನು ತಲುಪುವಂತೆ ಮಾಡಿದರು. ಸದ್ಯಕ್ಕೆ ಈ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀಯುತ ಸಂಜಯ ಸಿ. ಕುಲಗೋಡ ಅವರು ಆಯ್ಕೆಯಾಗಿ ಸೇವೆಗೈಯುತ್ತಿರುವರು.

ಮುಗಳಖೋಡದಲ್ಲಿನ ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘವು ಬೆಳ್ಳಿ ಹಬ್ಬವನ್ನಾಚರಿಸಿ ಬೃಹದಾಕಾರವಾಗಿ ಬೆಳೆದು ನಿಂತಿರುವುದು ದಿವಂಗತ ಡಾ. ಎಂ. ವಿ. ಕುಲಕರ್ಣಿ, ನಾಗಪ್ಪ ಹಿಪ್ಪರಗಿ, ಡಾ. ಸಿ. ಬಿ. ಕುಲಗೋಡ ಹಾಗೂ ಆಡಳಿತ ಮಂಡಳಿಯವರ ಪರಿಶ್ರಮದಿಂದ ಈ ಸಂಸ್ಥೆಯು ಸುತ್ತಲಿನ ಜನರಿಗೆ ಉನ್ನತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಮುಂದುವರೆದು ೧೯೯೦ ರಲ್ಲಿ ಪ್ರಾಥಮಿಕ ಶಾಲೆ, ೧೯೭೮ ರಲ್ಲಿ ಪ್ರೌಢ ಶಾಲೆ, ೧೯೯೩ ರಲ್ಲಿ ಪಿ.ಯು.ಸಿ. ಕಾಲೇಜನ್ನು ನಂತರದಲ್ಲಿ ೨೦೦೮ ರಲ್ಲಿ ಪದವಿ ಕಾಲೇಜನ್ನು, ೨೦೦೯ ರಲ್ಲಿ ಐ.ಟಿ.ಐ. ಕಾಲೇಜನ್ನು ಹಾಗೂ ಆಂಗ್ಲ ಮಾಧ್ಯಮ (ಸಿ.ಬಿ.ಎಸ್.ಸಿ) ಶಾಲೆಗಳನ್ನು ತೆರೆದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಸುತ್ತಲಿನ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಧಾರೆಯರೆಯುತ್ತಿರುವದು ಇವತ್ತಿಗೂ ಇಲ್ಲಿ ಸ್ಮರಿಸಬಹುದು.

ಅಲ್ಲದೇ ನೀರಲಖೋಡಿ ಭಾಗದ ಸುತ್ತಲಿನ ಜನತೆಗೆ ಶಿಕ್ಷಣ ಧಾರೆಯೇರಿಯುತ್ತಿರುವ ಇನ್ನೊಂದು ಸಂಸ್ಥೆಯೆಂದರೆ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆ. ಇದು ೧೯೯೪–೯೫ ರಲ್ಲಿ ಪ್ರಾರಂಭವಾಗಿದ್ದು, ಅಲ್ಲಿಯ ಸುತ್ತಲಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ವ್ಯವಸ್ಥಿತವಾಗಿ ನೀಡುವಲ್ಲಿ ಯಶಸ್ವಿಯ ಹೆಜ್ಜೆಯನ್ನಿಟ್ಟಿದೆ. ಸದ್ಯ ಇದರ ಅಧ್ಯಕ್ಷರಾಗಿ ಶ್ರೀಯುತ ಪಿ. ಎಂ. ಕುಲಗೋಡ ಅವರು ಸೇವೆ ಗೈಯುತ್ತಿರುವರು.

ಪ್ರಸ್ತುತವಾಗಿ ಮುಗಳಖೋಡದಲ್ಲಿ ಶ್ರೀ ಸಿದ್ದಶ್ರೀ ಶಿಕ್ಷಣ ಸಂಸ್ಥೆ, ಶ್ರೀ ಯಲ್ಲಾಲಿಂಗೇಶ್ವರ ಶಿಕ್ಷಣ ಸಂಸ್ಥೆ, ಶ್ರೀ ಹನುಮಾನ ಶಿಕ್ಷಣ ಸಂಸ್ಥೆ, ಶ್ರೀ ರೇಣುಕಾದೇವಿ ಶಿಕ್ಷಣ ಸಂಸ್ಥೆ, ಶ್ರೀ ಯಲ್ಲಾಲಿಂಗೇಶ್ವರ ಎಜ್ಯುಕೇಶನ ಮತ್ತು ಸೊಸಿಯಲ್ ವೆಲ್‌ಫೇರ್ ಸೊಸೈಯಿಟಿ, ಶ್ರೀ ಉಣ್ಣಿಬಸವೇಶ್ವರ ಶಿಕ್ಷಣ ಸಂಸ್ಥೆ, ಶ್ರೀ ಸಿದ್ಧಲಿಂಗೇಶ್ವರ ಶಿಕ್ಷಣ ಸಂಸ್ಥೆ, ಶ್ರೀ ಮಲ್ಲಿಕಾರ್ಜುನ ಶಿಕ್ಷಣ ಸಂಸ್ಥೆ, ಶ್ರೀ ಮಹಾವೀರ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ, ಶ್ರೀ ಮುರುಘೇಂದ್ರ ಶಿಕ್ಷಣ ಸಂಸ್ಥೆ ಹೀಗೆ ಮೊದಲಾದ ಶಿಕ್ಷಣ ಸಂಸ್ಥೆಗಳು ಹಾಗೂ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಕಾರ್ಯನಿರತವಾಗಿದೆ. ಈ ರೀತಿಯಾಗಿ ಶೈಕ್ಷಣಿಕ ಕ್ಷೇತ್ರವು ಈ ಭಾಗದಲ್ಲಿ ಬೆಳೆದು ತಾಲೂಕು, ಜಿಲ್ಲೆಗಳಲ್ಲಿ ಗುರುತಿಸಿಕೊಂಡಿದೆ.

ಸಾಹಿತ್ಯ :

ಒಂದು ಪ್ರದೇಶದ ಇತಿಹಾಸ ಮೇಲೆ ಬೆಳಕು ಚೆಲ್ಲುವ ಕಾರ್ಯವನ್ನು ಈ ಸಾಹಿತ್ಯವು ಮಾಡುತ್ತದೆ. ಅಂದಿನ ನೈಜ ಸ್ಥಿತಿಗತಿಯ ಕುರಿತು ಬರವಣಿಗೆಯ ರೂಪದಲ್ಲಿ ದೊರೆಯುವುದೇ ಸಾಹಿತ್ಯವಾಗಿದೆ. ಈ ಸಾಹಿತ್ಯದ ಅಧ್ಯಯನ ಕೈಗೊಳ್ಳವವರಿಗೆ ಕೈಪಿಡಿಯಾಗಿ ವಾಸ್ತವಿಕ ಅಂಶಗಳನ್ನು ವಿವರಿಸುವುದಾಗಿದೆ. ಈ ಭಾಗದೊಳಗೆ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಅನೇಕ ಸಾಹಿತಿಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶ್ರೀ ಜ್ಯೋತಿ ಹೊಸೂರ : ಶ್ರೀ ಜ್ಯೋತೆಪ್ಪಾ ಶಿ. ಹೊಸೂರ ಇವರು ಈ ಮುಗಳಖೋಡದ ಪ್ರಸಿದ್ಧ ಸಾಹಿತಿಯಾಗಿದ್ದು, ಇವರು ೧೯೩೭ ರಲ್ಲಿ ಶಿವಪ್ಪ ಹಾಗೂ ಸತ್ಯವ್ವ ದಂಪತಿಗಳ ಉದರದಲ್ಲಿ ಜನಿಸಿದರು. ಇವರು ವಿದ್ಯಾರ್ಥಿ ಜೀವನದಲ್ಲಿಯೇ ಸಾಹಿತ್ಯದ ನೆಂಟು ಅಂಟಿಕೊಂಡಿತು. ಕನ್ನಡ ಎಂ.ಎ. ಸ್ನಾತಕೋತ್ತರ ಪದವಿಧರರಾಗಿ ಬೇಟಗೇರಿ ಕೃಷ್ಣ ಶರ್ಮ, ಬಸವರಾಜ ಕಟ್ಟಿಮನಿ ಮುಂತಾದ ಸಾಹಿತಿಗಳ ಪ್ರೇರಣೆಗೆ ಒಳಗಾಗಿ ಇವರ ಅನೇಕ ಮೌಲಿಕ ಕೃತಿಗಳನ್ನು ರಚನೆ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಅಷ್ಟೇ ಅಲ್ಲದೇ ರಾಯಬಾಗ ತಾಲೂಕ **'ಕನ್ನಡ ಸಾಹಿತ್ಯ ಪರಿಷತ್'** ಸಮ್ಮೇಳನದ ಅಧ್ಯಕ್ಷತೆ ಹಾಗೂ ಹಾಲುಮತ ಸಂಸ್ಕೃತಿ ಸಮ್ಮೇಳನ ಗದಗದಲ್ಲಿ ನಡೆದ ಸರ್ವಾಧ್ಯಕ್ಷತೆ ಸಹ ಅವರದಾಗಿದೆ. ಅವರ **'ಜಾನಪದ ಉಪಾಸನೆ'** ಗ್ರಂಥವು ಕನ್ನಡ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಒಂದು ಮಹಾನ ಕಾಣಿಕೆಯಾಗಿದೆ. ಇತ್ತೀಚಿನ ನಿವೃತ್ತ ಜೀವನದಲ್ಲಿ ಬರೆದ **'ಭ್ರಮೆಗಳ ಮೇಲೆ ಬೆಳಕು'** ಎಂಬ ಗ್ರಂಥ ಅಂದ ಶ್ರದ್ಧೆ ಅಂದಾಭಿಮಾನ ತಪ್ಪುಗ್ರಹಿಕೆ ಮೊದಲಾದವು ಕುರಿತು ವಿಶ್ಲೇಷಿಸುವ ಗ್ರಂಥವಾಗಿದೆ.

ಉತ್ತರ ಕರ್ನಾಟಕದ ಜಾನಪದ ಸೊಗಡಿನಲ್ಲಿ ಉಸಿರಾಡಿದ ಇವರು ಮೊದಲಿನಿಂದಲೂ ಜಾನಪದ ಸಾಹಿತ್ಯಕ್ಕೆ ಹೆಚ್ಚು ಒಲಮೆ ಕೊಟ್ಟರು. ಜನಸಾಮಾನ್ಯರಿಗೆ ತಿಳಿಯುವಂತೆ ಹತ್ತು ಹಲವಾರು ಜಾನದಪ ಕೃತಿಗಳನ್ನು ರಚಿಸಿ ಮತ್ತು ಆ ಕೃತಿಗಳಲ್ಲಿ **'ಜಾನಪದ ಮೂಲದ್ರವ್ಯ'**ವನ್ನು ನೀಡಿದರು. **'ಬೆರಿಸಿ ಇಟ್ಟೆವಿ ಬೆಲ್ಲ ನೆನೆಗಡಲಿ'**, **'ಹೆಸರ ಹೆಳ್ತೇನಿ ಒಡಪಕಟ್ಟಿ'**, ಇವು ತಮ್ಮ ಶೀರ್ಷಿಕೆಯುಲ್ಲಿ ಸೂಚಿಸುವಂತೆ ಎಲ್ಲ ಜನರಿಗೂ ಬೆಲ್ಲ ನೆನೆಗಡಲಿ ಸಿಹಿ ಉಣಿಸಿದ ಕೃತಿಗಳು, **'ಏಳುತಲೆ ನೆನೆದೀನ ಏಳೆಂದು ದೇವರನ'**, **'ಸುತ್ತಿರುವ ಬಳಗ ಜಗದಾಗ'**, **'ಕಾಮ ಕಸ್ತೂರಿ ನಿನ್ನ ಕಾಣದ ಇರಲಾ'**, **'ಹ್ಯಾಂಗಾಸಿ ಬರಲಿ ಜಗದಾಗ'**, **'ಹಾಕ್ಯಾಡತಾವ ಗಜನಿಂಬಿ'**, **'ಬಿಳಿ ಮುತ್ತಿನ್ಹಾಂಗ ಬಿಳಿಜ್ವಾಳ'** ಇಂತಹ ತ್ರಿಪದಿಗಳ ಮೂಲಕ ಅವರ ಜಾನಪದ ಗತ್ತು ಜನಮನವನ್ನು ಸೂರೆಗೊಳಿಸಿವೆ.

ಡಾ. ಪಿ. ಬಿ. ಕೊರವಿ : ಇವರು ಮುಗಳಖೋಡದ ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಕಲಾ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವರು. ಉತ್ತಮ ವಾಗ್ಮಿಗಳು ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿದವರು. '**ಬೆಳಗಾವಿ ಜಿಲ್ಲೆಂಯ ಸ್ಥಳನಾಮಗಳು**' ಎಂಬ ಮಹಾಪ್ರಬಂಧವನ್ನು ರಚಿಸಿದರು. ಜಾನಪದ ಕ್ಷೇತ್ರದಲ್ಲಿ ಹಲವಾರು ಬೀಡಿ ಲೇಖನಗಳನ್ನು ರಚಿಸುತ್ತಾ ಈ ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರೆದಿದ್ದಾರೆ.

ಪ್ರೊ. ಎಂ. ಕೆ. ಬೀಳಗಿ : ಇವರ ಮುಗಳಖೋಡದ ಶ್ರೀ ಚ.ವಿ.ವ. ಸಂಘದ ಬ. ನೀ. ಕುಲಗೋಡ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಇತಿಹಾಸ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಇವರು '**ಹಿಡಕಲ್ ಗ್ರಾಮದ ಸ್ವತಂತ್ರ ಹೋರಾಟಗಾರರು**' ಎಂಬ ಕಿರುಪ್ರಬಂಧವನ್ನು ರಚಿಸಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಉತ್ತಮ ವಾಗ್ಮಿಗಳು ಸೃಜನಶೀಲ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ.

ಪ್ರೊ. ಆರ್. ಜಿ. ಹುಬ್ಬಳ್ಳಿ : ಇವರು ಮುಗಳಖೋಡದ ಶ್ರೀ ಚ.ವಿ.ವ. ಸಂಘದ ಬ. ನೀ. ಕುಲಗೋಡ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ಅವರು '**ಹುಲಗಬಾಳಿಯವರ ಹಾಸ್ಯ ಪ್ರಬಂಧಗಳು**' ವಿಷಯ ಕುರಿತು ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ.

ಡಾ. ಮಹಾದೇವ ಖೇತಗೌಡರ : ಇವರು ಮುಗಳಖೋಡದ ಗ್ರಾಮದವರಾಗಿದ್ದು, ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿದವರಾಗಿದ್ದಾರೆ. ಇವರು ಕರ್ನಾಟಕ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು, ಇವರು '**ಮಾನವನ ಆರೋಗ್ಯದ ಮೇಲೆ ಪ್ರಭಾವ ಬೀರುತ್ತಿರುವ ಕೀಟನಾಶಕಗಳ ಉಳಿಕೆಗಳು**' ಎಂಬ ಮಹಾಪ್ರಬಂಧವನ್ನು ರಚಿಸಿ ಸಂಶೋಧನಾ ಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸಿದ್ದಾರೆ.

ಡಾ. ಸಿದ್ದು ಹುಲ್ಲೋಳ್ಳಿ : ಇವರು ಅವರು ಮುಗಳಖೋಡದವರೆ ಆಗಿದ್ದು, ಇವರು ಕನ್ನಡದಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೊದಲಿಗೆ ವೃತ್ತಿಯಲ್ಲಿ ಹೈಸ್ಕೂಲ ಶಿಕ್ಷಕರಾಗಿ ಸೇವೆ ಸಲ್ಲಸಿದ್ದು, ನಂತರದಲ್ಲಿ ಕೆ.ಎ.ಎಸ್. ಅಧಿಕಾರಿಯಾಗಿ ಮುಂದುವರೆದಿದ್ದು, ಪ್ರಸ್ತುತವಾಗಿ ಜಮಖಂಡಿ ತಾಲೂಕಿನ ತಹಶೀಲ್ದಾರರಾಗಿ ಮುಂದುವರೆದಿದ್ದಾರೆ. ಇವರು ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದು, '**ಕುಂತನಬಾಗಿಯ ಜಾನಪದ ಕಲೆಗಳು**' ಎಂಬ ಮಹಾಪ್ರಬಂಧವನ್ನು ಪ್ರಕಟಿಸಿದ್ದಾರೆ.

ಶ್ರೀ ಮಹಾದೇವ ಖೇತಗೌಡರ : ಇವರು ಸಾಹಿತ್ಯದಲ್ಲಿ ಒಲವನ್ನು ಹೊಂದಿದ್ದು, ತಮ್ಮ ವಿರಾಮದ ವೇಳೆಯಲ್ಲಿ ಸಣ್ಣ ಸಣ್ಣ ಹಾಡುಗಳನ್ನು ರಚಿಸಿರುವರು. ಇವರು ಮುಗಳಖೋಡದ ಗ್ರಾಮದವರಾಗಿದ್ದು **ಅಚಲೇರಿಯ ಶ್ರೀ ಮ.ನಿ.ಪ್ರ. ಬಸವರಾಜೇಂದ್ರ ಗುರುಗಳ** ಮೇಲೆ ಹಲವಾರು ಹಾಡುಗಳನ್ನು ರಚಿಸಿದ್ದಾರೆ.

ಡಾ. ವ್ಹಿ. ಕೆ. ನಡೋಣಿ : ಇವರು ಮೂಲತಃ ಐನಾಪೂರದವರಾಗಿದ್ದು, ಪ್ರಸ್ತುತವಾಗಿ ಶ್ರೀ ಚ.ವಿ.ವ. ಸಂಘದ ಕಲಾ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು ಇವರು **'ದೇವದಾಸಿಯರ ಸ್ಥಿತಿಗತಿಗಳು'** ಎಂಬ ಮಹಾಪ್ರಬಂಧವನ್ನು ರಚಿಸಿ ಸಂಶೋಧನಾ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಚಿತ್ರ-ಶಿಲ್ಪಕಲೆ : ಈ ಭಾಗದಲ್ಲಿ ಚಿತ್ರ ಶಿಲ್ಪಕಲೆಗೆ ಶ್ರೇಷ್ಠ ಸಾಧನೆಗೈದಿರುವ ಚಿತ್ರಕಾರರಿರುವರು. ಅವರಲ್ಲಿ ದಿ. ಶ್ರೀ ವಿರೂಪಾಕ್ಷ ರಾ. ಕಡಪಟ್ಟಿ ಸಮೀಪದ ಹಾರೂಗೇರಿಯವರಾಗಿದ್ದು, ಚಿತ್ರಕಲೆಯಲ್ಲಿ ಒಳ್ಳೆಯ ಹೆಸರನ್ನು ಗಳಿಸಿರುವರು. ಇವರು ಚಿತ್ರಕಲೆಯಲ್ಲಿ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವರು. ಇವರ ತೈಲ ಚಿತ್ರಗಳು ಹಾಗೂ ನಿಸರ್ಗದ ರಮಣೀಯ ಚಿತ್ರಗಳು ಸಜೀವವಾಗಿ ನಿರ್ಮಿತಗೊಂಡಿವೆ. ಇವರ ಕಲಾ ಪ್ರತಿಮೆಗೆ ಅನೇಕ ಪ್ರಶಸ್ತಿಗಳು ಲಭಿಸಿರುತ್ತವೆ.

ಶ್ರೀ ರವಿ ಕೊಣ್ಣೂರ ಮುಗಳಖೋಡದವರಾಗಿದ್ದು, ಶ್ರೇಷ್ಠ ಪ್ರತಿಭಾನ್ವಿತ ಚಿತ್ರಗಾರ ಹಾಗೂ ಫೋಟೋಗ್ರಾಫರ ಆಗಿದ್ದರು. ಈಗ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೊಂದಿಗೆ ಶ್ರೀ ಜೆ. ಡಿ. ತಳವಾರ ಹಾಗೂ ಶ್ರೀ ಪ್ರಶಾಂಶ ಮದಲಮಟ್ಟಿ ಮೊದಲಾದವರು ಚಿತ್ರಕಾರರಾಗಿ ಈ ಕ್ಷೇತ್ರದಲ್ಲಿ ಕಾರ್ಯೋನ್ಮುಕರಾಗಿದ್ದಾರೆ.

ಸಂಗೀತ : ಈ ಭಾಗದಲ್ಲಿ ಸಂಗೀತ ಕ್ಷೇತ್ರದಲ್ಲಿ ಅನೇಕರು ಸಾಧನೆಗೈದಿರುವರು. ಅವರಲ್ಲಿ ಶ್ರೀ ಮಹಾದೇವ ಖೇತಗೌಡರ, ಶ್ರೀ ಎನ್. ಎಂ. ಗಡಗಿ ಶಿಕ್ಷಕರು, ಶ್ರೀ ಸುಭಾಸ ಬಿರಾದರ, ಶ್ರೀ ಮಾನಿಂಗ ಯಡವನ್ನವರ ಮೊದಲಾದವರು ಸಂಗೀತ ಕ್ಷೇತ್ರದಲ್ಲಿ ಹೆಸರು ಗಳಿಸಿರುವರು.

ಪತ್ರಿಕೋದ್ಯಮ ವಿಭಾಗದಲ್ಲಿ ಶ್ರೀ ಚೇತನಕುಮಾರ ಗವಿಮಠ ಪ್ರಜಾವಾಣಿಯ ವರದಿಗಾರರಾಗಿ ಹಾಗೂ ಶ್ರೀ ಸದಾಶಿವ ಬಡಿಗೇರ ಕನ್ನಡಪ್ರಭ ವರದಿಗಾರರಾಗಿ ಶ್ರೀ ಶಿವಾಜಿ ಮಾದರ ವಿಜಯ ಕರ್ನಾಟಕದ ವರದಿಗಾರರಾಗಿ ಮತ್ತು ಶ್ರೀ ವಿಜಯ ಕೋಟಿಹಾಳ ಹಾಗೂ ಶ್ರೀಮತಿ ಕಾಂಚನಾ ಸ. ಬಡಿಗೇರ ಪ್ರಚಂಡ ಪ್ರಜೆ ಪಾಕ್ಷಿಕ ಪತ್ರಿಕೆ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಸ್ಕೃತಿ : ಹೀಗೆ ಮುಗಳಖೋಡವು ಪ್ರಾಚೀನ ಕಾಲದಿಂದಲೂ ವಿಭಿನ್ನ ಸಂಸ್ಕೃತಿಗಳ ಸಂಗಮತಾನವಾಗಿದೆ. ಹಿಂದೂ, ಮುಸ್ಲಿಂ ಸಂಸ್ಕೃತಿಯು ಪಸರಿಸಿರುವುದು ಕಂಡು ಬರುತ್ತದೆ. ದೇವಾಲಯಗಳು, ಮಠಗಳು, ಬಸದಿಗಳು, ಮಸೀದಿಗಳು, ಕೋಟೆಗಳು ವಿವಿಧ ಸಂಸ್ಕೃತಿಯ ಪ್ರತಿಕವಾಗಿವೆ. ಹಾಗೂ ಉತ್ಸವ ಆಚರಣೆಗಳು, ಜಾತ್ರೆಗಳು, ವೈವಿಧ್ಯಮಯವಾದ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಹೀಗೆ ಮುಗಳಖೋಡದ ಸಾಂಸ್ಕೃತಿಕ ಪರಿಸರದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಗನನೀಯ ಸಾಧನೆಯು ಕಂಡುಬರುತ್ತದೆ. ಇಲ್ಲಿನ ವಾತಾವರಣವು ಸಾಧಕರಿಗೆ ಸ್ಪಂಧಿಸಿ ಕಾರ್ಯಚಟುವಟಿಕೆಗಳಲ್ಲಿ ತೊಡಗುವಂತೆ ಪ್ರಚೋದಿಸುತ್ತವೆ.

: ಅಡಿಟಿಪ್ಪಣಿಗಳು :

೧) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಬಾ. ಪಾಟೀಲ : ೧೯೯೫ : ಪುಟ ಸಂಖ್ಯೆ : ೧೩೨.

೨) ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ : ಶ್ರೀ ನಾರಾಯಣ ಪಿ. ವ್ಹಿ. : ೧೯೮೩ ಪುಟ ಸಂಖ್ಯೆ : ೬೦.

೩) ಜೆ. ಬಿ. ಬಿ. ಆರ್. ಎಸ್. ಸಂ. ೧೦ : ನೇಸರಗಿ : ಕ್ರಿ.ಶ. ೧೧೪೧. ಪುಟ ಸಂಖ್ಯೆ : ೨೪೬.

೪) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಬಾ. ಪಾಟೀಲ : ೧೯೯೫ : ಪುಟ ಸಂಖ್ಯೆ : ೬೫.

೫) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಬಾ. ಪಾಟೀಲ : ೧೯೯೫ : ಪುಟ ಸಂಖ್ಯೆ : ೬೫.

೬) ಎಫಿಗ್ರಾಫಿಯಾ ಕರ್ನಾಟಕ : ಶ್ರೀ ಬಿ. ಎಲ್. ರೈಸ್ (ಸಂ). ಮೈಸೂರು : ೧೯೦೬. ಪುಟ ಸಂಖ್ಯೆ : ೬೫

೭) ಕ. ವಿ. ವಿ. ಹಂಪಿ : ಪುಟ ಸಂಖ್ಯೆ : ೫೯.

೮) ಕರ್ನಾಟಕ ಸಾಂಸ್ಕೃತಿಕ ಪರಂಪರೆ : ಡಾ. ರಂ. ಶ್ರೀ. ಮುಗಳಿ : ಧಾರವಾಡ : ೧೯೯೫. ಪುಟ ಸಂಖ್ಯೆ : ೧೦೫.

೯) ಕರ್ನಾಟಕ ಸಾಂಸ್ಕೃತಿಕ ಸ್ವರೂಪ : ಶ್ರೀ ವಿ. ಜಿ. ಮಾರಿಹಾಳ : ಪುಟ ಸಂಖ್ಯೆ : ೪೧.

೧೦) ಎಫಿಗ್ರಾಫಿಯಾ ಇಂಡಿಯಾ : ಸಂಪುಟ – ೧೬ : ಪುಟ ಸಂಖ್ಯೆ : ೩.

೧೧) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಶ್ರೀ ಚಿದಾನಂದ ಮೂರ್ತಿ ಎಂ. : ೧೯೯೬. ಪುಟ ಸಂಖ್ಯೆ : ೧೨೫–೧೨೭.

೧೨) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಶ್ರೀ ಚಿದಾನಂದ ಮೂರ್ತಿ ಎಂ. : ೧೯೯೬. ಪುಟ ಸಂಖ್ಯೆ : ೧೩೦–೧೩೧.

೧೩) ತರ್ದವಾಡಿ ನಾಡು : ಒಂದು ಅಧ್ಯಯನ : ಇಂಡಿ : ಡಾ. ಎಸ್. ಕೆ. ಕೊಪ್ಪ : ೧೯೯೦. ಪುಟ ಸಂಖ್ಯೆ : ೨೭೬.

೧೪) ಕ. ವಿ. ವಿ. ಹಂಪಿ : ಶಾಸನ ಸಂಪುಟ – ೬ : ಪುಟ ಸಂಖ್ಯೆ : ೫೯.

೧೫) ಭುಜಬಳಶಾಸ್ತ್ರ : ಜೈನ ಧರ್ಮ : ಶ್ರೀ ಕೈಲಾಸಚಂದ್ರ ಸ್ವಾಮಿ (ಅನು : ೧೯೮೧) : ಪುಟ ಸಂಖ್ಯೆ : ೭೫.

ಅಧ್ಯಾಯ – ೬

ಮುಗಲಖೋಡದ ಕಲೆ ಮತ್ತು ವಾಸ್ತುಶಿಲ್ಪ

ಅಧ್ಯಾಯ – ೬

ಮುಗಳಖೋಡದ ಕಲೆ ಮತ್ತು ವಾಸ್ತುಶಿಲ್ಪ

ಭಾರತದ ವಾಸ್ತುಶಿಲ್ಪ ಪರಂಪರೆಯ ಕೇಂದ್ರಗಳಲ್ಲಿ ಕರ್ನಾಟಕವೂ ಒಂದು. ಗೈಮೇ ಆಗಸದತ್ತ ಕೈಯೆತ್ತಿ ತೋರುತ್ತದೆ. ಪ್ರೊ. ನಂಜುಂಡಸ್ವಾಮಿ ಎಂದು ಕವಿಯು ಶಿಲ್ಪಕಲೆಯ ಹಿನ್ನಲೆಯಲ್ಲಿ ಕೊಂಡಾಡಿದ್ದಾನೆ. **"ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೇ, ಶಿಲೆಯಲ್ಲಿ ಈ ಗುಡಿಯು ಕಲೆಯ ಬಲೆಯು"**[೧] ಇಂತಹ ಭಾವನೆಗಳು ಒಡಲುಕ್ಕಿ ಹೊರಹೊಮ್ಮಬೇಕಾದರೆ ಅದರ ಹಿಂದೆ ಒಬ್ಬ ಕಲಾತಪಸ್ವಿಯ ಕಗ್ಗಲ್ಲು ಬಂಡೆಗಳನ್ನು ಕೊರೆದು ನಯ ನಾಜೂಕುಗೊಳಿಸಿ ಹಾವಭಾವನೆ ಮೂಡಿಸಿ ಅವುಗಳಲ್ಲಿ ಜೀವಕಳೆ ತುಂಬಿರಬೇಕು[೨]. ರಾಷ್ಟ್ರಕೂಟ, ಬದಾಮಿ ಚಾಳುಕ್ಯರ ಆಳ್ವಿಕೆಯಿಂದ ಹಿಡಿದು ವಿಜಯನಗರ ಕಾಲದವರೆಗಿನ ಹಲವು ದೇವಾಲಯಗಳು ಜಗತ್ಪ್ರಸಿದ್ಧವಾಗಿದೆ. ಕರ್ನಾಟಕದಲ್ಲಿ ಕಂಡುಬರುವ ವಾಸ್ತು ಕಲಾ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹಲವು ಪರಿವರ್ತನೆಯ ಕಲಾಶೈಲಿಗಳ ಹಂತಗಳು ಗೋಚರವಾಗುತ್ತವೆ. ಕರ್ನಾಟಕದಲ್ಲಿ ನಿರ್ಮಿತವಾದ ದೇವಾಲಯವು ಹೆಚ್ಚಾಗಿ ಶಾತವಾಹನ, ಆದಿಕದಂಬ, ಬದಾಮಿ ಚಾಳುಕ್ಯರ, ರಾಷ್ಟ್ರಕೂಟರ, ಕಲ್ಯಾಣ ಚಾಳುಕ್ಯರು, ಕಲಚೂರಿ ಮತ್ತು ಹೊಯ್ಸಳರು, ವಿಜಯನಗರ ಕಾಲಕ್ಕೆ ಸಂಬಂಧಿಸಿವೆ[೩].

ಕನ್ನಡ ನಾಡಿನ ಚರಿತ್ರೆಯಲ್ಲಿ ಬೆಳಗಾವಿ ಜಿಲ್ಲೆಯು ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಇಲ್ಲಿ ಶಾತವಾಹನರು, ಕದಂಬರು, ಬದಾಮಿ ಚಾಳುಕ್ಯರು, ರಾಷ್ಟ್ರಕೂಟರು, ರಟ್ಟರು, ಕಲ್ಯಾಣ ಚಾಳುಕ್ಯರು, ವಿಜಯನಗರದ ಅರಸರು, ಬಹುಮುನಿಯರು ಮತ್ತು ಬಿಜಾಪುರದ ಆದಿಲ್‌ಷಾಹಿಗಳು, ಮರಾಠರು, ಬ್ರಿಟಿಷರು ಆಡಳಿತಕ್ಕೆ ಒಳಪಟ್ಟು ವಿವಿಧ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ತನ್ನ ಹಿರಿಮೆಯನ್ನು ಮೆರೆದಿದೆ. ಆಯಾ ರಾಜಮನೆತನಗಳ ಕಾಲದಲ್ಲಿ ಈ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದೇವಾಲಯಗಳು, ಮೂರ್ತಿಶಿಲ್ಪ, ಕಲೆ ಮತ್ತು ವಾಸ್ತುಶಿಲ್ಪಗಳ ರೂಪದ್ದು ನಿರ್ಮಾಣಗೊಂಡವು. ಆಯಾ ಕಾಲದ ಸಂಸ್ಕೃತಿ ಉಳಿದು ಬಂದಿದೆ. ಇಂತಹವುಗಳನ್ನು ಈ ಜಿಲ್ಲೆಯ ಅನೇಕ ತಾಲೂಕು ಹಾಗೂ ನಗರ, ಪಟ್ಟಣ ಮತ್ತು ಗ್ರಾಮಗಳಲ್ಲಿ ಕಾಣಬಹುದಾಗಿದೆ.

ಕುಂತನಬಾಗಿ ಎಂದೇ ಹೆಸರಾದ ರಾಯಬಾಗ ತಾಲೂಕಿನಿಂದ ಆಗ್ನೇಯ ದಿಕ್ಕಿಗಿರುವ ಮುಗಳಖೋಡವು ಸಹ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟು ಹಲವಾರು ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು, ಮಠಗಳು, ಬಸದಿಗಳು ರಚನೆಗೊಂಡಿವೆ. ಈ ಪ್ರದೇಶದಲ್ಲಿ ಕಂಡುಬರುವ

[illegible]

ದೇವಾಲಯಗಳನ್ನು ಗಮನಿಸಿದಾಗ ಅವುಗಳಲ್ಲಿ ಶೈವ ದೇವಾಲಯ, ವೈಷ್ಣವ ದೇವಾಲಯಗಳು, ಜೈನ ಬಸದಿಗಳು, ಮಠಗಳು ಕಂಡುಬರುತ್ತವೆ. ಅಷ್ಟೇ ಅಲ್ಲದೇ ಇಲ್ಲಿ ಮುಸ್ಲಿಂರ ಮಸೀದಿಗಳನ್ನು ಕೂಡಾ ಕಾಣಬಹುದು.

ಆದರೆ ಇಲ್ಲಿ ನಿರ್ಮಿತವಾದ ದೇವಾಲಯ, ಮಠಗಳು, ಬಸದಿಗಳು ಮೊದಲಾದವುಗಳ ಕಾಲವನ್ನು ನಿಖರವಾಗಿ ಗುರುತಿಸಿದ ಶಾಸನಾಧಾರಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿವೆ. ಈ ಕೊರತೆಯ ಹಿನ್ನೆಲೆಯಲ್ಲಿ ಈ ಪ್ರದೇಶದ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮುಗಳಖೋಡದ ದೇವಾಲಯಗಳು :

೬.೧ ದೇಗುಲ ಗುಡಿ : (ಶಿವದೇವಾಲಯ) :

ಮುಗಳಖೋಡ ಗ್ರಾಮದ ನೀರಲಕೋಡಿ ರಸ್ತೆಯ ಪಕ್ಕದಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯ ದಡದ ಪಕ್ಕದಲ್ಲಿ ಪಶ್ಚಿಮಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು ರಾಷ್ಟ್ರಕೂಟರ ಕಾಲವಧಿಯಲ್ಲಿ ಶೈವ ಪಂಥಕ್ಕೆ ಸಂಬಂಧಿಸಿದ ಕಪ್ಪು ಶಿಲೆ ಹಾಗೂ ಮರಳ ಮಿಶ್ರಿತ ಕೆಂಪು ಶಿಲೆಯಲ್ಲಿ ನಿರ್ಮಾಣಗೊಂಡಿರುವುದು. ಇದರ ಕಾಲಗಣನೆಯನ್ನು ಸುಮಾರು ೮–೯ ನೇ ಶತಮಾನ ಎಂದು ಹೇಳಲಾಗುತ್ತದೆ.

ಸ್ಥಳ	:	**ಮುಗಳಖೋಡ**
ದೇವಾಲಯ	:	**ದೇಗುಲ ಗುಡಿ**
ತಾಲೂಕು	:	**ರಾಯಬಾಗ**
ದಿಕ್ಕು	:	**ಪಶ್ಚಿಮ**
ಶೈಲಿ	:	**ರಾಷ್ಟ್ರಕೂಟ**
ಸ್ಥಿತಿ	:	**ದುಸ್ಥಿತಿ (ಹಾಳಾದ ಸ್ಥಿತಿ)**

೧) **ಗರ್ಭಗೃಹ :**

ದೇಗುಲಗುಡಿಯ ಮುಖ್ಯವಾಗಿ ಗರ್ಭಗೃಹ, ಅಂತರಾಳ ಹಾಗೂ ಅದರ ಜೊತೆಗೆ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದ ಒಳಗೋಡೆಗಳು ನಿರಾಲಂಕಾರವಾಗಿರುತ್ತವೆ. ಇದರ ದ್ವಾರವು ಎರಡೂ ಕಡೆಗೆ ಕತ್ತನೆಯನ್ನು ಹೊಂದಿದೆ. ಈ ಗರ್ಭಗೃಹದಲ್ಲಿ ಮೊದಲಿಗೆ ಶಿವಲಿಂಗ

ಪೂಜೆಯು ನಡೆಯುತ್ತಿತ್ತು. ನಂತರದಲ್ಲಿ ಅಲ್ಲಿಯಲ್ಲಿ ಶಿವಲಿಂಗವನ್ನು ಧ್ವಂಸ ಮಾಡಲಾಗಿ ಪ್ರಸ್ತುತವಾಗಿ ನಾಗದೇವತೆ ಪೂಜೆ ನಡೆಯುತ್ತಿದೆ.

೨) **ಅಂತರಾಳ :**

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಮುಂದೆ ಚೌಕಾಕಾರದ ಅಂತರಾಳವಿದೆ. ಇದು ಚಿಕ್ಕ ಕೊಠಡಿಯಿಂದ ಕೂಡಿದೆ. ಇಲ್ಲಿರುವ ಗೋಡೆಗಳು ಯಾವುದೇ ಅಲಂಕಾರವನ್ನು ಹೊಂದಿಲ್ಲ. ಇದರ ಛತ್ರವು ಅಷ್ಟಕೊನಾಕಾರವಾಗಿದ್ದು ಮಧ್ಯದಲ್ಲಿ ಅಲಂಕಾರವನ್ನು ಹೊಂದಿದೆ.

೩) **ಮುಖಮಂಟಪ :**

ಅಂತರಾಳಕ್ಕೆ ಹೊಂದಿಕೊಂಡತೆ ಚೌಕಾಕಾರದ ಮುಖಮಂಟಪವಿದೆ. ಈ ಮಂಟಪದಲ್ಲಿ ೧೬ ಕಂಬಗಳನ್ನು ಕಾಣಬಹುದು. ಮಧ್ಯದಲ್ಲಿ ಸ್ವಲ್ಪ ಎತ್ತರವಾದ ವೃತ್ತಾಕಾರವಾದ ರಚನೆಯಿದೆ. ಇದರ ಛತ್ತು ಅಲಂಕಣೆಯಿಂದ ಕೂಡಿದೆ. ಛತ್ತಿನಲ್ಲಿ ಹೂಗಳ ಕೆತ್ತನೆ ಮತ್ತು ಕಂಬಗಳು ಅದಿಷ್ಠಾನ ವೃತ್ತಾಕಾರದ ಪಟ್ಟಿ, ಚೌಕಾಕಾರದ ಘನಭಾಗ ಮೇಲೆ ಮುಚ್ಚಳಿಕೆಯಂಥಹ ಚಪ್ಪಟೆಯಾದ ಚೌಕಪಟ್ಟಿಗಳನ್ನು ಹೊಂದಿದ್ದು. ಇದಕ್ಕೆ ಹೊಂದಿಕೊಂಡು ಮುಖ್ಯದ್ವಾರವು ಕೆತ್ತನೆಯಿಂದ ಕೂಡಿದ್ದು, ದ್ವಾರದ ಮೇಲೆ ಶಿವನ ಮೂರ್ತಿ ಕೆತ್ತನೆಯನ್ನು ಕಾಣಬಹುದಾಗಿದೆ.

೪) **ಅಧಿಷ್ಠಾನ :**

ಈ ದೇವಾಲಯವು ಅಧಿಷ್ಠಾನ ಸರಳ ಹಾಗೂ ನಿರಾಲಂಕೃತವಾಗಿದ್ದು, ಅಷ್ಟಾಕೃತಿಯಲ್ಲಿ ನಿರ್ಮಾಣಗೊಂಡಿದೆ.

೫) **ಬಿತ್ತಿ (ಗೋಡೆ) :**

ಗೋಡೆಗಳು ಚೌಕಾಕಾರವಾಗಿದ್ದು ಯಾವುದೇ ಅಲಂಕಾರವನ್ನು ಹೊಂದದೆ ಸರಳವಾಗಿ ರೂಪಗೊಂಡಿದೆ.

೬) **ಛತ್ತು (ಮುನ್ಚಾಚು) :**

ಈ ದೇವಾಲಯವು ಛತ್ತವು ಯಾವುದೇ ರೀತಿಯ ವಿಶಿಷ್ಟ ಅಲಂಕಾರಗಳಿಂದ ಕೂಡಿಲ್ಲ.

ಈ ಎಲ್ಲ ಅಂಶಗಳನ್ನು ನೋಡಿದಾಗ ಈ ದೇವಾಲಯವು ಮುಗಳಖೋಡದ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದ್ದು, ಇದನ್ನು ದೈತ್ಯರು ಒಂದೇ ದಿನದಲ್ಲಿ ನಿರ್ಮಿಸಿದರು ಎಂಬ ಪ್ರತಿತಿಯನ್ನು ಕೂಡಾ ಇದೆ. ಇಲ್ಲಿಂದ ಊರಲ್ಲಿಯ ಶ್ರೀ ಚನ್ನಬಸವೇಶ್ವರ ಗುಡಿಗೆ ಭೂಸುರಂಗ ಮಾರ್ಗವಿದೆ ಎಂದು ಇಲ್ಲಿಯ ಜನರು ಹೇಳುತ್ತಾರೆ. ಆದರೆ ಅದು ಎಷ್ಟರ ಮಟ್ಟಿಗೆ ಸತ್ಯವಿದೆ ಎಂಬುದು ಬೆಳಕಿಗೆ ಬಂದಿಲ್ಲ. ಈ ದೇವಾಲಯವು ಒಂದು ಭಾಗವು ಸಂಪೂರ್ಣವಾಗಿ ಬಿದ್ದು ಹಾಳಾಗಿದ್ದು, ಇಲ್ಲಿಯವರೆಗೆ ಯಾವುದೇ ಪ್ರಾಚ್ಯ ಇಲಾಖೆ ಇದರ ಬಗ್ಗೆ ಗಮನ ಹರಿಸದೆ ಇರುವುದು ದುರ್ದೈವ.

೬.೨ ಶ್ರೀ ಚನ್ನಬಸವೇಶ್ವರ ದೇವಾಲಯ :

ಈ ದೇವಾಲಯವು ಕೂಡಾ ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು, ಇದು ಜಿನೋರ್ದ್ಧಾರವಾದ ದೇವಾಲಯವಾಗಿದೆ. ಇದರ ಪಕ್ಕದಲ್ಲಿ ಒಂದು ಮನೆಯಲ್ಲಿ ಮೊದಲು ಪೋಲೀಸ ಠಾಣೆ ಇದ್ದು, ಈ ಠಾಣೆ ಆಗೀನ ಹವಾಲ್ದಾರ ಒಬ್ಬರು ರಾತ್ರಿಯ ವೇಳೆಯಲ್ಲಿ ಹಿಂಬಾಗದಲ್ಲಿ ಹೋದಾಗ ಅಲ್ಲಿಯೇ ಗೆಜ್ಜೆ ಸಪ್ಪಲು ಆಗಿದ್ದು, ನಂತರ ವಿಚಾರಿಸಿದಾಗ ಅಲ್ಲಿ ಒಂದು ಬಸವನ ಮೂರ್ತಿ ಮತ್ತು ಶಿವಲಿಂಗ ಮೂರ್ತಿ ಉದ್ಭವ ಆದದ್ದು ಬೆಳಕಿಗೆ ಬಂದಿತು. ನಂತರ ಅವುಗಳನ್ನು ಆತ ಅಲ್ಲಿಯೇ ಪ್ರತಿಷ್ಠಾಪಿಸಿ ಪೂಜೆ ಪುರಸ್ಕಾರಗಳನ್ನು ನೇರವೇರಿಸಿದನು. ಇಂದಿಗೂ ಅದರ ಪೂಜೆ ಮುಂದುವರೆದಿದೆ. ಇಲ್ಲಿಂದಲೇ ದೇಗುಲ ಗುಡಿಯವರೆಗೆ ಸುರಂಗ ಮಾರ್ಗ ಇದೆ ಎಂದು ಹಲವಾರು ಜನರು ಹೇಳುವುದುಂಟು.

ಸ್ಥಳ	:	**ಮುಗಳಖೋಡ**
ದೇವಾಲಯ	:	**ಶ್ರೀ ಚನ್ನಬಸವೇಶ್ವರ ದೇವಾಲಯ**
ತಾಲೂಕು	:	**ರಾಯಬಾಗ**
ಕಟ್ಟಡ ಮಾಧ್ಯಮ	:	**ಕಾಂಕ್ರೇಟ್**
ಸಂಪ್ರದಾಯ	:	**ಶೈವ**
ಸ್ಥಿತಿ	:	**ಸುಸ್ಥಿತಿ**
ದಿಕ್ಕು	:	**ಪೂರ್ವಾಭಿಮುಖ**

೧) ಗರ್ಭಗೃಹ :

ಶ್ರೀ ಚನ್ನಬಸವೇಶ್ವರ ದೇವಾಲಯದ ಗರ್ಭಗೃಹವು ಚಿಕ್ಕದಾಗಿದ್ದು, ಈ ಗರ್ಭಗೃಹದ ಮೆಲೆ ಗೋಪುರ ನಿರ್ಮಾಣ ಮಾಡಲಾಗಿದೆ. ಇದು ಪ್ರಾಚೀನ ಕಾಲವಾದ್ದು ಇತ್ತಿಚ್ಚಿಗೆ ಇದರ ಜೀರ್ಣೋದ್ಧಾರ ಮಾಡಲಾಗಿದೆ. ಈ ಗರ್ಭಗೃಹದಲ್ಲಿ ಶಿವಲಿಂಗ, ಬಸವಣ್ಣ, ನಾಗದೇವತೆಯ ಮೂರ್ತಿಗಳಿಗೆ ಪೂಜೆ

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
	[illegible]

[illegible]

ಪುರಸ್ಕಾರ ನಡೆಯುತ್ತದೆ. ಇದರ ಗೋಡೆಗಳು ಯಾವುದೇ ಅಲಂಕಾರಗಳಿಂದ ಕೂಡಿರದೆ ಸರಳವಾಗಿ ನಿರ್ಮಾಣಗೊಂಡಿವೆ.

೨) ನವರಂಗ :

ಈ ಗರ್ಭಗುಡಿಗೆ ಹೊಂದಿಕೊಂಡು ನಾವು ನವರಂಗವನ್ನು ಕಾಣಬಹುದು. ಇದರ ಸುತ್ತಲಿನ ಗೋಡೆಯು ಸರಳವಾಗಿ ರಚನೆಗೊಂಡಿವೆ. ಇದು ಕೂಡಾ ಅಷ್ಟೊಂದು ವಿಶಾಲವಾದ ಪ್ರದೇಶವನ್ನು ಹೊಂದಿಲ್ಲ. ದಿಕ್ಕಟ್ಟಿನ ಸ್ಥಿತಿಯಲ್ಲಿ ಇದು ನಿರ್ಮಾಣಗೊಂಡಿದೆ.

೩) ಗೋಡೆ (ಭಿತ್ತಿ) :

ಈ ದೇವಾಲಯುದ ಗೋಡೆಗಳು ಸರಳ ಸುಂದರವಾಗಿ ನಿರಾಲಂಕಾರವಾಗಿ ನಿರ್ಮಾಣಗೊಂಡಿದೆ.

ಈ ದೇವರ ಜಾತ್ರೆಯು ಪ್ರತಿವರ್ಷ ಬಸವ ಜಯಂತಿಯಂದು ನಡೆಯುತ್ತದೆ. ಅದೇ ದಿನ ರತೋತ್ಸವವು ಕೂಡಾ ಜರುಗುವುದು.

೬.೩ ಶ್ರೀ ಅಡವಿಸಿದ್ಧೇಶ್ವರ ದೇವಾಲಯ :

ಈ ದೇವಾಲಯವು ಕೂಡಾ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ನಂತರದಲ್ಲಿ ೧೯೬೦ ರಲ್ಲಿ ಜೀರ್ಣೋದ್ಧಾರವಾಗಿದೆ. ಈ ದೇವಾಲಯದ ವಿಶೇಷತೆ ಎಂದರೆ ಈ ಸ್ಥಳದಲ್ಲಿ ಸುಮಾರು ೬೬೦ ವರ್ಷ ಬಾಳಿದ ಶ್ರೀ ಅಡವಿಸಿದ್ಧೇಶ್ವರರು ಲಿಂಗಪೂಜೆ ನಡೆಸಿ, ಇಲ್ಲಿಯೇ ಕೆಲವು ದಿನಗಳ ಕಾಲವಾಸವಾಗಿ ತಮ್ಮ ಸಂಚಾರವನ್ನು ಮುಂದುವರೆಸಿದರು. ಶಿವಶರಣರ ಕಾಲದಿಂದಲೂ ಅಂದರೆ ಬಸವಣ್ಣವರ ಕಾಲಾವಧಿಯಿಂದ ಇರತಕ್ಕಂತಹುದು ಎಂದು ಹೇಳಲಾಗಿದೆ.

ಸ್ಥಳ	:	**ಮುಗಳಖೋಡ**
ದೇವಾಲಯ	:	**ಶ್ರೀ ಅಡವಿಸಿದ್ಧೇಶ್ವರ ದೇವಾಲಯ**
ತಾಲೂಕ	:	**ರಾಯಬಾಗ**
ದಿಕ್ಕು	:	**ದಕ್ಷಿಣ**
ಕಟ್ಟಡ ಮಾಧ್ಯಮ	:	**ಕಾಂಕ್ರೇಟ**

ಸ್ಥಿತಿ : ದುರಸ್ಥಿ

ಈ ದೇವಾಲಯವು ಮುಗಳಖೋಡ – ಮಹಾಲಿಂಗಪೂರದ ಮುಖ್ಯ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂಡಿದ್ದು ಇದರ ಜಾತ್ರೆಯು ಪ್ರತಿ ವರ್ಷ ನಡೆಯುತ್ತದೆ.

೬.೪ ಶ್ರೀ ಲಕ್ಕವ್ವದೇವಿ ಗುಡಿ :

ಮುಗಳಖೋಡದ ಗ್ರಾಮದ ಆದಿದೇವತೆಯಾದ ಶ್ರೀ ಲಕ್ಕವ್ವದೇವಿಯ ಗುಡಿಯು ಮಾರ್ಕೆಟ್ ರಸ್ತೆಯ ಹನುಮಾನ ಮಂದಿರದ ಹಿಂಭಾಗದಲ್ಲಿ ಇರುವ ಒಂದು ಚಿಕ್ಕ ಗುಡಿಯಾಗಿದೆ. ಇದು ಮೂಲ ಗ್ರಾಮದೇವತೆಯಾಗಿದ್ದು, ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿದೆ. ಇದು ಕೂಡಾ ಅಷ್ಟೊಂದು ಏಳಿಗೆ ಹೊಂದದೆ ನಿರ್ಲಕ್ಷಕ್ಕೆ ಒಳಗಾಗಿದೆ.

ಇದರ ಗರ್ಭಗುಡಿ ಪ್ರಾಚೀನ ಕಾಲದಿಂದಲೂ ಇದ್ದು, ಇದರ ಮುಂದೆ ಇತ್ತೀಚಿಗೆ ಮುಖಭಾಗದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು, ದಿನನಿತ್ಯ ಪೂಜೆಯನ್ನು ನೇರವೇರಿಸಲಾಗುತ್ತದೆ.

೬.೫ ಶ್ರೀ ದ್ಯಾಮವ್ವದೇವಿ ಗುಡಿ :

ಈ ದೇವಾಲಯವು ಮುಗಳಖೋಡದ ಆದಿದೇವತೆಯಾಗಿದ್ದು, ಶ್ರೀ ಯಲ್ಲಾಲಿಂಗ ಮಹಾರಾಜರು ಮುಗಳಖೋಡಕ್ಕೆ ಆಗಮಿಸಿದ್ದಾಗ ಅವರಿಗೆ ಆಶ್ರಯವನ್ನು ನೀಡಿದ್ದಳು ಎಂದು ಹೇಳಲಾಗುತ್ತದೆ. ಈ ಗ್ರಾಮದೇವತೆಯು ಅತ್ಯಂತ ಶಕ್ತಿದೇವತೆಯಾಗಿ ಹೊರಹೊಮ್ಮಿದ್ದಳು.

ಈ ದೇವಾಲಯವು ಮಾರ್ಕೆಟ್ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂಡಿದ್ದು, ಇದು ಗರ್ಭಗೃಹ ಮುಖಮಂಟಪವನ್ನು ಹೊಂದಿದೆ. ಇದು ಕೂಡಾ ಪ್ರಾಚೀನ ಕಾಲದ ದೇವಾಲಯದಲ್ಲಿ ಒಂದಾಗಿದ್ದು, ಇದರ ಜೀರ್ಣೋದ್ಧಾರ ಇತ್ತೀಚಿಗೆ ಮಾಡಲಾಗಿದೆ. ಇದರ ಕಾಲಾವಧಿಯ ಬಗ್ಗೆ ಸರಿಯಾದ ಮಾಹಿತಿಗಳು ತಿಳಿದು ಬಂದಿರುವುದಿಲ್ಲ.

[illegible]

೬.೬ ಶ್ರೀ ಹನುಮಾನ ಮಂದಿರ (ದೇವಾಲಯ) :

ಸ್ಥಳ	:	ಮುಗಳಖೋಡ
ದೇವಾಲಯ	:	ಶ್ರೀ ಹನುಮಾನ ದೇವಾಲಯ
ತಾಲೂಕು	:	ರಾಯಬಾಗ
ದಿಕ್ಕು	:	ಪಶ್ಚಿಮಾಭಿಮುಖ
ಕಟ್ಟಡ ಮಾಧ್ಯಮ	:	ಕಾಂಕ್ರೇಟ
ಸ್ಥಿತಿ	:	ಸುಸ್ಥಿತಿ

ಈ ದೇವಾಲಯವು ಮಾರ್ಕೆಟ್ ರಸ್ತೆಯ ಪಕ್ಕದಲ್ಲಿ ವಿಶಾಲವಾದ ಸ್ಥಳದಲ್ಲಿ ನಿರ್ಮಾಣಗೊಂಡಿದ್ದು, ಗರ್ಭಗೃಹ ಮುಖಮಂಟಪಗಳನ್ನು ಹೊಂದಿದ್ದು ಇತ್ತೀಚೆಗೆ ಈ ದೇವಾಲಯದ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯ ಸುತ್ತಮುತ್ತಲೂ ಪ್ರಾಚೀನ ಕಾಲದ ಅವಶೇಷಗಳು ಚೆಲ್ಲಾಡಿವೆ. ಈ ದೇವಾಲಯದ ಮುಂದೆ ಓಕಳಿ ಕೊಂಡವನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಸರಳ ಸುಂದರ ನಿರಾಲಂಕಾರ ಗೋಡೆಗಳನ್ನು ಹೊಂದಿದ್ದು, ಇದರ ಆವರಣದಲ್ಲಿ ಪ್ರಾಚೀನ ಕಾಲದ ಹಲವಾರು ನಾಗದೇವತೆ ವಿಗ್ರಹಗಳು ಇದ್ದು, ಅವು ಕೂಡಾ ಹಾಳಾಗಿವೆ. ಈ ದೇವಾಲಯದ ಗರ್ಭಗುಡಿಯ ಮೇಲೆ ಗೋಪುರವನ್ನು ನಿರ್ಮಿಸಲಾಗಿದೆ.

೬.೭ ಶ್ರೀ ಮಲ್ಲಿಕಾರ್ಜುನ ದೇವಾಲಯ :

ಮುಗಳಖೋಡದ ಇನ್ನೊಂದು ಪ್ರಸಿದ್ಧ ದೇವಾಲಯ ಶ್ರೀ ಮಲ್ಲಿಕಾರ್ಜುನ (ಪರತಮಲ್ಲಯ್ಯ) ದೇವಾಲಯ. ಇದು ಕೂಡಾ ಪ್ರಾಚೀನ ಕಾಲದಿಂದಲೂ ಅಡವಿಯಲ್ಲಿ ನಿರ್ಮಾಣಗೊಂಡು ಇತ್ತೀಚೆಗೆ ಏಳಿಗೆಯನ್ನು ಪಡೆದಿದೆ.

ಸ್ಥಳ	:	ಮುಗಳಖೋಡ
ದೇವಾಲಯ	:	ಶ್ರೀ ಮಲ್ಲಿಕಾರ್ಜುನ ದೇವಾಲಯ
ತಾಲೂಕು	:	ರಾಯಬಾಗ
ದಿಕ್ಕು	:	ಪೂರ್ವಾಭಿಮುಖ
ಕಟ್ಟಡ ಮಾಧ್ಯಮ	:	ಕಪ್ಪು ಶಿಲೆ ಮತ್ತು ಕಾಂಕ್ರೇಟ್
ಸ್ಥಿತಿ	:	ಸುಸ್ಥಿತಿ

ಈ ದೇವಾಲಯವು ಮುಗಳಖೋಡ – ಹಾರೂಗೇರಿ ರಸ್ತೆಯ ಪಕ್ಕದ ಅಡವಿಯಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವು ಗರ್ಭಗುಡಿ ಅಂತರಾಳಗಳನ್ನು ಹೊಂದಿದ್ದು, ಸರಳ ಸುಂದರವಾಗಿ ಗೋಡೆಗಳ ನಿರ್ಮಾಣವಾಗಿದೆ. ಇಲ್ಲಿ ಪ್ರತಿ ಸೋಮವಾರ, ಗುರುವಾರ ಅಭಿಷೇಕಗಳನ್ನು ನಡೆಯುತ್ತದೆ. ಅದರೊಂದಿಗೆ ಅನ್ನಪ್ರಸಾದವು ಕೂಡಾ ಜರುಗುತ್ತದೆ. ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯಲಕ್ಕೆ ಹೋಗಿ ಬಂದ ಭಕ್ತರೆಲ್ಲರು ಇಲ್ಲಿಗೆ ಬಂದು ಪೂಜೆ ಪುರಸ್ಕಾರ ಮುಗಿಸಿದ ನಂತರವೇ ಅವರು ತಮ್ಮ ಮನೆಗಳಿಗೆ ತೆರಳುವ ವಾಡಿಕೆಯು ಕೂಡ ನಡೆದು ಬಂದಿರುವುದನ್ನು ಕಾಣಬಹುದಾಗಿದೆ.

ಈ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು, ಇದರ ಎದುರಿಗೆ ನಂದಿಯ ವಿಗ್ರಹ ಇರುವುದನ್ನು ಕಾಣುತ್ತೇವೆ. ಇದು ಮೊದಲು ಅಡಿವಿಯಲ್ಲಿ ಸಣ್ಣ ಪ್ರಮಾಣದಲ್ಲಿ **ಇದು ಹಳೆಯ ದೇವಾಲಯುಗಳಲ್ಲಿ ಒಂದಾಗಿದ್ದು, ಇತ್ತೀಚೆಗೆ ಸುಪ್ರಸಿದ್ಧಿಯನ್ನು ಪಡೆದ** ದೇವಾಲಯವಾಗಿದೆ.

೭.೮ ಮುಗಳಖೋಡದ ಬಸದಿಗಳು :

ಜನ ಜೀವನದ ಸ್ವರೂಪಕ್ಕೆ ಧರ್ಮವೇ ನಿರ್ಣಾಯಕ ಶಕ್ತಿಯಂತೆ ಇತ್ತು. ಧರ್ಮವನ್ನು ತನ್ನ ಜೀವನ ಎಲ್ಲ ಕ್ಷೇತ್ರಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ ಪರಣಿಮಿಸಿತ್ತು. ಊರಲ್ಲಿಯ ಎಲ್ಲ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರ ಬಿಂದುಗಳಾದ ಮಠಗಳು, ಬಸದಿಗಳು ಇವುಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ **"ದೇವರ ಅಂಗಭೋಗಕ್ಕೆ, ರಂಗಭೋಗಕ್ಕೆ ಸೋಡರಂಗೆ ನಿರ್ಮಾಣ ಹಾಗೂ ಜೀರ್ಣೋದ್ಧಾರ"**[೪].

ಗಂಗವಂಶ ಸ್ಥಾಪನೆಯು ಕ್ರಿ.ಶ. ೨ನೇ ಶತಮಾನದಲ್ಲಿ ಜೈನ ಯಾತ್ರಿಗಳಾದ ಶಿವನಂದಿಯಿಂದ ಮಾಡಲ್ಪಟ್ಟಿತ್ತು. ಜನರಿಂದ ಬೋಧಿಸಲಾದ ಧರ್ಮವೇ ಜೈನ ಧರ್ಮ ಜಿನ ಜಯಿಸಿದವನು. ಜಿನನು ಅವತಾರಿ ಅಲ್ಲ. ತನ್ನ ಸ್ವಂತ ಬಲದಿಂದ ಕ್ರೋಧಾಧಿ ವಿಕಾರಗಳನ್ನು ಜಯಿಸಿ ಜಿನನಾದನು[೫].

ಇಂತಹ ಜೈನ ಧರ್ಮ ಪ್ರಾಚೀನ ಕಾಲದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು. ಕ್ರಿ.ಶ. ೩ನೇ ಶತಮಾನದಿಂದಲೂ ಜೈನ ಧರ್ಮವು ಕರ್ನಾಟಕದಲ್ಲಿತ್ತು ಎನ್ನುವುದಕ್ಕೆ ಶಾಸನಗಳಿಂದ ತಿಳಿದುಬರುತ್ತವೆ. ಇಂತಹ ಜೈನ ಧರ್ಮವು ಈ ಅಧ್ಯಯನಕ್ಕೆ ಸಂಬಂಧಿಸದಂತೆ ಕಾಣಬಹುದಾಗಿದೆ. ವಾಸ್ತವಾಗಿ ಈ ಮುಗಳಖೋಡದಲ್ಲಿ ಮುಖ್ಯವಾಗಿ ಅರ್ವಾಜಿನ ಜೈನ ಬಸದಿಗಳು ಇಂದಿಗೂ ಕಾಣಬಹುದಾದ ಸಂಗತಿ. ಅವುಗಳೆಂದರೆ ಶ್ರೀ ಆದಿನಾಥ ಜೈನ ಬಸದಿ ಅದರೊಂದಿಗೆ ಈ ಬಸದಿಯು ಸುಮಾರು ೧೯–೨೦ ನೇ ಶತಮಾನಕ್ಕೆ ಸೇರಿದ್ದು ಎಂದು ಹೇಳಲಾಗಿದೆ. ಅಲ್ಲದೇ ಇನ್ನೇರಡು ಬಸದಿಗಳನ್ನು

ಕಾಣಬಹುದು. ಒಂದು ನಿರ್ಮಾಣಗೊಂಡಿದರೆ ಇನ್ನೊಂದು ನಿರ್ಮಾಣ ಹಂತದಲ್ಲಿ (ನೀರುಖೋಡಿ) ಇದೆ.

೭.೯ ಶ್ರೀ ಆಧಿನಾಥ ಬಸದಿ :

ಸ್ಥಳ	:	**ಮುಗಳಖೋಡ**
ಬಸದಿ	:	**ಶ್ರೀ ೧೦೦೮ ಆದಿನಾಥ ಜೈನ ಬಸದಿ**
ತಾಲೂಕು	:	**ರಾಯಬಾಗ**
ದಿಕ್ಕು	:	**ಪೂರ್ವಾಭಿಮುಖ**
ಕಟ್ಟಡ ಮಾಧ್ಯಮ	:	**ಶಿಲೆ ಮತ್ತು ಕಾಂಕ್ರೇಟ್**
ಸ್ಥಿತಿ	:	**ಸುಸ್ಥಿತಿ**

ಈ ಆದಿನಾಥ ಬಸದಿಯು ಸುಮಾರು ೧೯೫೦ ರಲ್ಲಿ ನಿರ್ಮಾಣಗೊಂಡಿದ್ದು, ಇದು ಗರ್ಭಗೃಹ, ಅಂತರಾಳ, ಮುಖಮಂಟಪಗಳನ್ನು ಹೊಂದಿ ಸರಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಇದರ ಮುಂದೆ ಮಾನಸ್ತಂಭವು ೧೯೭೧ ರಲ್ಲಿ ನಿರ್ಮಾಣವಾಗಿದ್ದು, ಅದರೊಂದಿಗೆ ಸುತ್ತಲೂ (ಕೌಂಪೌಂಡ) ತಡೆಗೋಡೆಯನ್ನು ೧೯೮೩ ರಲ್ಲಿ ನಿರ್ಮಿಸಲಾಯಿತು.

೧) ಗರ್ಭಗೃಹ :

ಈ ಜೈನ ಬಸದಿಯ ಗರ್ಭಗೃಹವು ಚೌಕಾಕಾರವಾಗಿದ್ದು, ಇದರ ಮಧ್ಯಭಾಗದಲ್ಲಿ ಅದರಂತೆ ಹಿಂದಿನ ಗೋಡೆಗೆ ಅಂಟಿಕೊಂಡು ಒಂದು ೩ ಅಡಿ ಎತ್ತರದ ಪೀಠದ ಮೇಲೆ ಆದಿನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅದರೊಂದಿಗೆ ಇನ್ನು ಹಲವಾರು ಮೂರ್ತಿಗಳನ್ನು ಅದರೊಂದಿಗೆ ಇಟ್ಟು ಪೂಜಿಸಲಾಗುತ್ತದೆ. ಇಲ್ಲಿ ಇದರ ಮೇಲ್ಭಾಗದಲ್ಲಿ ವೃತ್ತನ್ನು ನಿರ್ಮಿಸಲಾಗಿದ್ದು ಅದರ ಮೇಲೆ ಗೋಪುರವನ್ನು ನಿರ್ಮಿಸಲಾಗಿದೆ. ಇದರ ಗರ್ಭಗುಡಿಯ ದ್ವಾರವು ಸರಳ ಸುಂದರವಾಗಿ ನಿರ್ಮಾಣಗೊಂಡಿದ್ದು, ಮೇಲ್ಭಾಗದಲ್ಲಿ **'ಅಹಿಂಸಾ ಪರಮೋ ಧರ್ಮ'** ಎಂದು ಬರೆಯಲಾಗಿದೆ.

೨) ಅಂತರಾಳ :

ಈ ಬಸದಿಯ ಗರ್ಭಗುಡಿಗೆ ಹೊಂದಿಕೊಂಡು ಅಂತರಾಳವು ಚೌಕಾಕಾರದಲ್ಲಿ ನಿರ್ಮಾಣಗೊಂಡಿದೆ. ಈ ಅಂತರಾಳದ ಗೋಡೆಗಳು ಸರಳವಾಗಿ ಸುಂದರವಾಗಿ ನಿರ್ಮಾಣಗೊಂಡಿದ್ದು, ಇದು ೧೨ ಕಂಬಗಳನ್ನು ಒಳಗೊಂಡಿದೆ. ಇದರ ಮುಂಭಾಗದಲ್ಲಿ ಕಬ್ಬಿನದ ಚಳಿಯಿಂದ ನಿರ್ಮಿಸಿದ

[illegible]

ಬಾಗಿಲುಗಳನ್ನು ಕಾಣಬಹುದು. ಆ ಬಾಗಿಲದ ಮೇಲ್ಭಾಗದಲ್ಲಿ ೧೦೦೮ ಆದಿನಾಥ ಜೈನ ಮಂದಿರ ಎಂದು ಬರೆಯಲಾಗಿದೆ.

೩) **ಮುಖಮಂಟಪ** :

ಅಂತರಾಳಕ್ಕೆ ಹೊಂದಿಕೊಂಡಂತೆ ಮುಂದೆ ಮುಖಮಂಟಪವನ್ನು ನಿರ್ಮಿಸಲಾಗಿದೆ. ಇದರ ಛತ್ತು ಪತ್ರಾಸಗಳ ಮೂಲಕ ನಿರ್ಮಾಣಗೊಂಡಿದೆ. ಮುಂದೆ ವಿಶಾಲವಾದ ಪ್ರದೇಶವನ್ನು ಹೊಂದಿದ್ದು, ಎದುರು ಮಾನಸ್ತಂಭ ನಿರ್ಮಿಸಲಾಗಿದೆ.

೪) **ಅಧಿಷ್ಠಾನ** :

ಈ ಬಸದಿಯ ಅಧಿಷ್ಠಾನವು ಸುಮಾರು ೩ ಅಡಿಗಳಷ್ಟು ಎತ್ತರವಾಗಿದ್ದು, ಸರಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

೫) **ಗೋಡೆಗಳು** :

ಈ ಆದಿನಾಥ ಬಸದಿಯ ಗೋಡೆಗಳು ಸರಳವಾಗಿ ಮತ್ತು ನಿರಾಲಂಕಾರವಾಗಿ ನಿರ್ಮಾಣಗೊಂಡಿವೆ. ಇಲ್ಲಿ ಯಾವುದೇ ಕೆತ್ತನೆಯನ್ನು ಕಾಣಲಾರವು.

೬) **ಶಿಖರ** :

ಗರ್ಭಗೃಹದ ಮೇಲೆ ಶಿಖರವನ್ನು ನಿರ್ಮಿಸಲಾಗಿದೆ.

೭) **ಮಾನಸ್ತಂಭ** :

ಈ ಬಸದಿಯಲ್ಲಿ ೧೯೭೧ರಲ್ಲಿ ಮಾನಸ್ತಂಭವನ್ನು ನಿರ್ಮಿಸಲಾಗಿದೆ. ಈ ಸ್ತಂಭವು ಸರಳ ಸುಂದರ ಕೆತ್ತನೆಯಿಂದ ಕೂಡಿದೆ.

೮) **ತಡೆಗೋಡೆ** :

ಈ ಬಸದಿಯ ಸುತ್ತಲೂ ತಡೆಗೋಡೆಯನ್ನು ನಿರ್ಮಿಸಲಾಗಿದ್ದು, ಈ ಗೋಡೆಯು ಸುಮಾರು ೫ ಅಡಿ ಎತ್ತರವಾಗಿದ್ದು, ಇದನ್ನು ೧೯೮೩ರಲ್ಲಿ ನಿರ್ಮಾಣ ಮಾಡಲಾಗಿದೆ.

ಈ ಬಸದಿಯಲ್ಲಿ ಹಲವಾರು ಜೈನ ಕಾರ್ಯಕ್ರಮಗಳು ಜರಗುತ್ತಿದ್ದು, ಮಹಾವೀರ ಜಯಂತಿಯನ್ನು ಅದ್ದೂರಿಯಿಂದ ಆಚರಿಸಲಾಗುತ್ತದೆ. ಎಲ್ಲ ಜೈನ ಸಮಾಜವನ್ನು ಇಲ್ಲಿ ಕ್ರೂಢೀಕರಣಗೊಂಡಿರುತ್ತಾರೆ. ಈ ಜೈನ ಬಸದಿಯನ್ನು ನಾವು ಮುಗಳಖೋಡ – ಹಿಡಕಲ್ಲ ರಸ್ತೆಯ ಸ್ವಲ್ಪ ಒಳಗಡೆಯ ಪ್ರದೇಶದಲ್ಲಿ ಕಾಣಬಹುದಾಗಿದೆ.

ಮುಗಳಖೋಡದಲ್ಲಿ ಈ ಆದಿನಾಥ ಜೈನ ಮಂದಿರವನ್ನು ಅಷ್ಟೇ ಅಲ್ಲದೇ ಇನ್ನೂ ಎರಡು ಬಸದಿಗಳನ್ನು ಕಾಣಬಹುದು. ಒಂದು ಇಮಾಯ್ ತೋಟದ ಪ್ರದೇಶದಲ್ಲಿ, ಇನ್ನೊಂದನ್ನು ನೀರಲಖೋಡಿಯ ತೋಟದ ಪ್ರದೇಶದ ಮಹಾವೀರ ಶಿಕ್ಷಣ ಸಂಸ್ಥೆಯ ಪಕ್ಕದಲ್ಲಿ ಇದು ನಿರ್ಮಾಣದ ಹಂತದಲ್ಲಿದೆ.

ಮಠಗಳು :

ಪ್ರಾಚೀನ ಕಾಲದಿಂದಲೂ ಮಠಗಳು ತಮ್ಮದೇ ಆದ ಪವಿತ್ರ ಧಾರ್ಮಿಕ ಸಹಿಷ್ಣುತೆಯನ್ನು ಒಳಗೊಂಡಿದೆ. ಮುಗಳಖೋಡದಲ್ಲಿಯೂ ಕೂಡಾ ಇಂತಹ ಮಠಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ.

೬.೧೦ ಶ್ರೀ ಯಲ್ಲಾಲಿಂಗೇಶ್ವರ ಮಠ :

ಸ್ಥಳ	:	**ಮುಗಳಖೋಡ**
ದೇವಾಲಯ	:	**ಶ್ರೀ ಯಲ್ಲಾಲಿಂಗೇಶ್ವರ ಮಠ**
ತಾಲೂಕು	:	**ರಾಯಬಾಗ**
ದಿಕ್ಕು	:	**ದಕ್ಷಿಣಾಭಿಮುಖ**
ಕಟ್ಟಡ ಮಾಧ್ಯಮ	:	**ಕೆಂಪು ಶಿಲೆ ಹಾಗೂ ಕಾಂಕ್ರೇಟ್**
ಸ್ಥಿತಿ	:	**ಸುಸ್ಥಿತಿ**

ಸುಕ್ಷೇತ್ರ ಮುಗಳಖೋಡ ಗ್ರಾಮವು ಒಂದು ಪುಣ್ಯ ಕ್ಷೇತ್ರವಾಗಿದೆ. ಇಲ್ಲಿ ಹಲವಾರು ಶಿವಶರಣರು, ಮಹಾಸ್ವಾಮಿಗಳು ಆಗಿ ಹೋದ ಇತಿಹಾಸವಿದೆ. ಈ ಶ್ರೀ ಯಲ್ಲಾಲಿಂಗೇಶ್ವರ ಮಠವು ಕನ್ನಡನಾಡು ಹಾಗೂ ಹೊರರಾಜ್ಯಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಮಠವಾಗಿದೆ. ಕೋಟಿ–ಕೋಟಿ ಭಕ್ತರನ್ನು ಅರಸುವ ಈ ಮಠವು ಸುಮಾರು ೩೬೫ ಶಾಲಾಮಠಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಶ್ರೀ ಯಲ್ಲಾಲಿಂಗರು ಈ ಮಠದ ಸ್ಥಾಪನೆಗೆ ಮೂಲಕಾರಣರಾದರು. ೧೬೪೨ರಲ್ಲಿ ಶ್ರೀ ಯಲ್ಲಾಲಿಂಗರು ಮುಗಳಖೋಡಕ್ಕೆ ಆಗಮಿಸಿ ಈ ಗ್ರಾಮವನ್ನು ಪುಣ್ಯಕ್ಷೇತ್ರವಾಗಿ ಮಾಡಿದರು. ಮುಂದೆ ಈ ಗ್ರಾಮದ

ಹೆಸರು ನಾಡೆಲ್ಲ ಹಬ್ಬಿತು. ನಂತರ ಶ್ರೀ ಸಿದ್ಧರಾಮೇಶ್ವರ ಮಹಾರಾಜರು ೧೯೬೪ರಲ್ಲಿ ಮಠದ ಅಧಿಕಾರ ಸ್ವೀಕರಿಸಿ ೨೦೦೦ರವರೆಗೆ ನಾಡಿನುದ್ದಕ್ಕೂ ಸಂಚರಿಸಿ ಜನರ ಏಳಿಗೆಯನ್ನು ಮಾಡಿದರು. ನಂತರದಲ್ಲಿ ೨೦೦೩ರಲ್ಲಿ ಜಿಡಗಾ ಮಠದಲ್ಲಿ ಲಿಂಗೈಕ್ಯರಾದರು. ಇವರ ನಂತರದಲ್ಲಿ ಶ್ರೀ ಮುರುಘರಾಜೇಂದ್ರ ಶಿವಯೋಗಿಗಳು ೨೦೦೦ ರಲ್ಲಿ ಪೀಠಾಧ್ಯಕ್ಷರಾಗಿ ಸ್ವೀಕರಿಸಿದರು. ನಂತರದಲ್ಲಿ ಇತ್ತೀಚಿಗೆ ಮಠದ ವತಿಯಿಂದ 'ಸಿದ್ಧಶ್ರೀ' ಎಂಬ ಈ ಪ್ರಶಸ್ತಿಯನ್ನು ನೀಡಲು ಪ್ರಾರಂಭಿಸಿದರು. ಜನರ ಕಲ್ಯಾಣಕ್ಕಾಗಿ ಅಧ್ಯಾತ್ಮದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಇವರಿಗೆ ಗುಲಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ ಪದವಿಯನ್ನು ನೀಡಿ ಗೌರವಿಸಿದೆ.

ಶ್ರೀ ಯಲ್ಲಾಲಿಂಗೇಶ್ವರ ಮಠವು ಗರ್ಭಗುಡಿಯನ್ನು ಮುಖಮಂಟಪವನ್ನು ಹೊಂದಿದ್ದು ಸುತ್ತಲೂ ಹಲವಾರು ಕಟ್ಟಡಗಳನ್ನು ಹೊಂದಿದೆ. ಈ ಮಠದ ಆವರಣದಲ್ಲಿ ಭವ್ಯಕೆತ್ತನೆಯಿಂದ ಕೂಡಿದ ಕಲ್ಯಾಣ ಮಂಟಪವು, ಅನುಭವ ಮಂಟಪವು ನಿರ್ಮಾಣಗೊಳ್ಳುತ್ತಿದೆ. ಈ ಮಠದ ಗೋಡೆಗಳ ಸರಳ, ಸುಂದರ ಕೆತ್ತನೆಗಳಿಂದ ಕೂಡಿದ್ದು, ಹಲವಾರು ಸ್ತಂಭಗಳು ಕೂಡಾ ಕೆತ್ತನೆಯಿಂದ ಕೂಡಿ ಅಲಂಕಾರದಿಂದ ಬಿಗುತ್ತಿವೆ. ಒಟ್ಟಿನಲ್ಲಿ ಒಂದು ಭವ್ಯ ಪರಂಪರೆಯನ್ನು ಹೊಂದಿರುವ ಮಠ ಇದಾಗಿದೆ. ಈ ಮಠದ ಜಾತ್ರೆಯ ಪ್ರತಿವರ್ಷ ಜನೆವರಿಯಲ್ಲಿ ಬರುವ ಬನದ ಹುಣ್ಣಿಮೆಯೆಂದು ಪ್ರಾರಂಭವಾಗಿ ನಿರಂತರ ಹನ್ನೊಂದು ದಿನಗಳ ಕಾಲ ನಾಡಿನ ನಾನಾ ಕಡೆಯಿಂದ ಬರುವ ಸಾಧು–ಸತ್ಪುರುಷರು, ಸಂಗೀತಕಾರರು, ಪ್ರವಚನ, ಪುರಾಣ, ಭಾಷಣ, ಗಾಯನಗಳು ನಡೆಯುತ್ತವೆ.

ಪ್ರತಿ ದಿನವು ಸಾವಿರಾರು ಭಕ್ತರು ಆಗಮಿಸುತ್ತಿದ್ದು ದಿನನಿತ್ಯವು ಅನ್ನದಾಸೋಹ ಕೂಡಾ ಜರಗುತ್ತದೆ. ಈ ಕ್ಷೇತ್ರವು **'ದಾಸೋಹದ ಮಹಾಮನೆ'** ಭಕ್ತರಿಗೆ ತುಂಬು ಹೃದಯದಿಂದ ಪ್ರಸಾದ ವಿತರಿಸುವ ಜಂಗಮ ಕ್ಷೇತ್ರವಾಗಿದೆ. ಭಕ್ತಿಯ ಮಹಾಮಂದಿರ ಆಧ್ಯಾತ್ಮಯೋಗದ ಅನುಭವ ಮಂಟಪ, ಧರ್ಮ ಸಂದೇಶದ ದಿವ್ಯಧಾಮ ಕಾಯಕ ಕ್ಷೇತ್ರದ ಕ್ರಿಯಾಕೇಂದ್ರ ಈ ಕ್ಷೇತ್ರ ಗಣ್ಯಾತೀತವಾದದ್ದುದಾಗಿದೆ.

ಪ್ರಸ್ತುತವಾಗಿ ಮುಗಳಖೋಡದಲ್ಲಿ ಇನ್ನು ಹಲವಾರು ದೇವಾಲಯಗಳನ್ನು ಕಾಣಬಹುದಾಗಿದೆ. ಸುಮಾರು ಮೂವತ್ತಕ್ಕೂ ಅಧಿಕ ದೇವಾಲಯಗಳನ್ನು ಕಾಣಬಹುದು. ಅವುಗಳನ್ನು ನಾವು ಈ ಕೆಳಗಿನಂತೆ ಕಾಣಬಹುದಾಗಿದೆ.

ಶ್ರೀ ಕಂಠೇಮ್ಮದೇವಿ ದೇವಸ್ಥಾನ :

ಈ ದೇವಾಲಯವು ಮುಗಳಖೋಡದ ನೀರಲಖೋಡಿ ಭಾಗದಲ್ಲಿದ್ದು, ಇದು ಆ ಭಾಗದ ಪ್ರಸಿದ್ಧ ದೇವತೆಯಾಗಿ ಬೆಳೆದಿದೆ. ಈ ದೇವಿಯ ಜಾತ್ರೆಯು ಕೂಡಾ ಪ್ರತಿವರ್ಷ ಜರಗುತ್ತದೆ.

ಈ ದೇವಾಲಯುವು ಒಂದು ಚಿಕ್ಕದಾದ ಗರ್ಭಗುಡಿಯುನ್ನು ಹೊಂದಿದ್ದು, ಮುಂಭಾಗದಲ್ಲಿ ಪತ್ರಗಳ ಮೂಲಕ ಶೆತನ್ನು ನಿರ್ಮಿಸಲಾಗಿದೆ. ಈ ಗರ್ಭಗುಡಿಯಲ್ಲಿ ಹಲವು ಶಿಲೆಗಳ ಮೂರ್ತಿಗಳನ್ನೆ ಕ್ರೂಢಿಕರಿಸಲಾಗಿದೆ. ಇದು ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಪಕ್ಕದಲ್ಲಿ ಅಡವಿಯಲ್ಲಿದೆ.

ಶ್ರೀ ಲಕ್ಷ್ಮೀದೇವಿ :

ಈ ದೇವತೆಯು ಕೂಡಾ ನೀರಲಖೋಡಿಯ ಒಂದು ಶಕ್ತಿ ದೇವತೆಯಾಗಿದ್ದು, ಹಲವಾರು ತಲೆಮಾರಿನ ಇತಿಹಾಸ ಹೊಂದಿದೆ. ಇದು ಒಂದು ಗೀಡದ ಕೆಳಭಾಗದಲ್ಲಿ ಹಲವು ಶಿಲ್ಪಗಳು ಕ್ರೂಢಿಕರಣವಾಗಿದೆ. ಇದರ ಜೀರ್ಣೋದ್ಧಾರಕ್ಕಾಗಿ ಹಲವಾರು ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಶ್ರೀ ಬಸವಣ್ಣ ದೇವಸ್ಥಾನ :

ಈ ದೇವಾಲಯವು ಮುಗಳಖೋಡದ ಮಾರ್ಕೆಟ್ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂದಿದ್ದು, ಇವಾಗ ಈ ದೇವಾಲಯವನ್ನು ಕೆಡವಿ ಹೊಸದಾಗಿ ನಿರ್ಮಿಸಲಾಗುತ್ತಿದೆ. ಇದು ನಿರ್ಮಾಣದ ಹಂತದಲ್ಲಿದ್ದು ಬಿಳಿ ಶಿಲ್ಪಗಳನ್ನು ಬಳಸಿಕೊಂಡು ನಿರ್ಮಿಸಲಾಗುತ್ತಿದೆ. ಈ ದೇವಾಲಯವು ಗರ್ಭಗುಡಿ, ಅಂತರಾಳ, ಮುಖಮಂಟಪಗಳನ್ನು ಬಿಡಲಾಗಿದೆ. ಇದು ಕೂಡಾ ಹಳೆಯ ಕಾಲದ ದೇವಾಲಯವಾಗಿದ್ದು ಪ್ರಸ್ತುತವಾಗಿ ಜೀರ್ಣೋದ್ಧಾರ ನಡೆದಿದೆ.

ಅಷ್ಟೇ ಅಲ್ಲದೇ ಪ್ರಸ್ತುತವಾಗಿ ಮುಗಳಖೋಡದಲ್ಲಿ ಶ್ರೀ ಬೀರಲಿಂಗೇಶ್ವರ ದೇವಾಲಯ, ಶ್ರೀ ದುರ್ಗಾದೇವಿ ದೇವಾಲಯ, ಶ್ರೀ ವೆಂಕಟೇಶ್ವರ ದೇವಾಲಯ, ಶ್ರೀ ಗಣಪತಿ ದೇವಾಲಯ, ಶ್ರೀ ಅಯ್ಯಪ್ಪ ದೇವಾಲಯ, ಶ್ರೀ ರಾಮಲಿಂಗೇಶ್ವರ ದೇವಾಲಯ, ಶ್ರೀ ರೇವಣಸಿದ್ಧೇಶ್ವರ ದೇವಾಲಯ, ಶ್ರೀ ಉಣ್ಣಿಬಸವೇಶ್ವರ ದೇವಾಲಯ, ಶ್ರೀ ಸಿಧರಾಯ ಗುಡಿ, ಶ್ರೀ ವಿಠ್ಠಲ ಮಂದಿರ, ಮಸಿದಿಗಳು, ಏಳುಮಕ್ಕಳ ತಾಯಿ ಗುಡಿ, ಶ್ರೀ ರೇಣುಕಾದೇವಿ (ಎಲ್ಲಮ್ಮ) ದೇವಾಲಯ ಮೊದಲಾದ ದೇವಾಲಯಗಳನ್ನು ಕಾಣಬಹುದು.

೭.೧೧ ಮುಗಳಖೋಡ ಮೂರ್ತಿ ಶಿಲ್ಪಗಳು :

ಮೂರ್ತಿಶಿಲ್ಪಗಳು ಕಲೆಯು ಅತ್ಯಂತ ಪ್ರಾಚೀನವಾದದ್ದು, ಇದು ದೇವಾಲಯ ವಾಸ್ತುಶಿಲ್ಪಕ್ಕೆ ಪೂರಕವಾದ ಒಂದು ಕಲೆಯಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ದೇವರಿಗಾಗಿ ಆಲಯಗಳನ್ನು ನಿರ್ಮಿಸಿದರೆ ದೇವರುಗಳ ಕಲ್ಪನೆಗೆ ಸಾಂಕೇತವಾದ ಸ್ವರೂಪವನ್ನು ಕೊಡಲು

ಮೂರ್ತಿಶಿಲ್ಪಗಳು ಪ್ರಯತ್ನಿಸಿತು. ಇಲ್ಲಿ ಇವು ಧಾರ್ಮಿಕ ಶ್ರದ್ಧೆಯೇ ಮೂರ್ತಿ ಶಿಲ್ಪಕ್ಕೆ ಮೂಲ ಪ್ರೇರಣೆಯಾಗಿ ಪರಿಣಮಿಸಿತು.

ಗಣಪತಿಯ ಮೂರ್ತಿ :

ಈ ಮೂರ್ತಿಯು ಮುಗಳಖೋಡದ ಮೂರ್ತಿಶಿಲ್ಪಗಳಲ್ಲಿ ಒಂದಾಗಿದ್ದು, ಅರ್ಧದಷ್ಟು ಮೂರ್ತಿ ಅಷ್ಟೇ ಉಳಿದಿದೆ. ಇನ್ನೂಳಿದ ಭಾಗ ಹಾಳಾಗಿದೆ. ಇದು ಹನುಮಾನ ಮಂದಿರದ ಪಕ್ಕದಲ್ಲಿ ಹಿರೇಮಠ ಎಂಬ ಹಾಳದ ಮಠದ ಭಾಗದಲ್ಲಿ ಬಿದ್ದಿದೆ. ಕಪ್ಪು ಶಿಲೆಯಲ್ಲಿ ಈ ಮೂರ್ತಿಯು ನಿರ್ಮಾಣಗೊಂಡಿದೆ.

ನಾಗದೇವತೆ ಮೂರ್ತಿಗಳು :

ಈ ನಾಗದೇವತೆಯ ಮೂರ್ತಿಗಳು ಈ ಹನುಮಾನ ಮಂದಿರದ ಹಿಂಭಾಗದಲ್ಲಿ ಹಾಳಾದ ಹಿರೇಮಠದ ಪ್ರದೇಶದಲ್ಲಿ ಕಾಣುತ್ತೇವೆ. ಸುಮಾರು ೩-೪ ಅಡಿ ಎತ್ತರ ಇರುವ ಈ ಮೂರ್ತಿಗಳು ಕಪ್ಪು ಶಿಲೆಯಲ್ಲಿ ನಿರ್ಮಾಣಗೊಂಡಿದೆ. ಇಲ್ಲಿ ಜೋಡಿ ನಾಗ, ಒಂಟಿನಾಗ ದೇವತೆ ಮೂರ್ತಿಗಳು ಸುಮಾರು ೫ ಇವೆ. ಇವುಗಳು ಕೂಡಾ ನಶಿಸುವ ಹಂತದಲ್ಲಿವೆ.

ಶಿವಲಿಂಗ ಮೂರ್ತಿಗಳು :

ಈ ಶಿವಲಿಂಗ ಮೂರ್ತಿಗಳು ಕೂಡಾ ಈ ಹಿರೇಮಠದ ಪ್ರದೇಶದಲ್ಲಿಯೇ ಇವೆ. ಸುಮಾರು ೬ ರಿಂದ ೭ ಶಿವಲಿಂಗ ಮೂರ್ತಿಗಳನ್ನು ಕಾಣಬಹುದು. ಈ ಪ್ರದೇಶದ ದೇವಾಲಯುದ ಗರ್ಭಗೃಹದ ಭಾಗದಲ್ಲಿ ಒಂದು ದೊಡ್ಡ ಶಿವಲಿಂಗ ಮೂರ್ತಿಯನ್ನು ಕಾಣಬಹುದಾಗಿದೆ. ಈ ದೇವಾಲಯದ ಗರ್ಭಗುಡಿ ಎಲ್ಲವು ಹಾಳಾಗಿದ್ದು, ಆ ಸ್ಥಾನದಲ್ಲಿ ಈ ದೊಡ್ಡ ಲಿಂಗದ ಮೂರ್ತಿ ಇರುವುದನ್ನು ಕಾಣಬಹುದು. ಪ್ರಸ್ತುತವಾಗಿ ಇದಕ್ಕೆ ದಿನಾಲು ಪೂಜೆಯನ್ನು ನೆರವೇರಿಸಲಾಗುತ್ತದೆ.

ಜೋಡಿ ನಾಗದೇವತೆ ಮೂರ್ತಿ :

ಈ ಜೋಡಿ ನಾಗದೇವತೆಯ ಮೂರ್ತಿಯನ್ನು ಹನುಮಾನ ಮಂದಿರದ ಆವರಣದಲ್ಲಿ ಕಾಣಬಹುದಾಗಿದೆ. ಈ ಮೂರ್ತಿಗೆ ಜನರು ಎಣ್ಣೆಯನ್ನು ಹಾಕಿ ಅದು ಕೂಡಾ ನಶಿಸುವ ಹಂತದಲ್ಲಿದೆ. ಇವೆಲ್ಲ ಮೂರ್ತಿಗಳು ಭಿನ್ನವಾಗಿವೆ.

ವೀರಗಲ್ಲುಗಳು :

ಮುಗಳಖೋಡದಲ್ಲಿ ಈ ವೀರಗಲ್ಲುಗಳನ್ನು ಕೂಡಾ ಕಾಣಬಹುದಾಗಿದೆ. 'ವೀರ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅನೇಕ ಪ್ರಬೇಧಗಳನ್ನು ಕಾಣುತ್ತೇವೆ. ಯುದ್ಧದಲ್ಲಿ ಹೋರಾಡಿ ವೀರ ಸಾವನ್ನು ಹೇಳುವ ಸ್ಮಾರಕ ಸ್ತಂಭಗಳೇ ವೀರಗಲ್ಲುಗಳಾಗಿವೆ. ಯುದ್ಧದಲ್ಲಿ ಹೋರಾಡಿ ಮಡಿದಿರುವ ವೀರರ ಸ್ಮಾರಕವಾಗಿ ಧಾರ್ಮಿಕ ಮತ್ತು ತಾರ್ಕಿಕ ಆತ್ಮಬಲಿದಾನದಿಂದ ಮುಕ್ತಿ ದೊರೆಯುವದೆಂಬ ನಂಬಿಕೆ ಇರುತ್ತದೆ. ಇಂತಹ ವೀರಮರಣದಿಂದ ಮುಕ್ತಿ ದೊರೆಯುವುದೆಂಬ ಮೌಲ್ಯವು ಸಮಾಜದಲ್ಲಿ ಪ್ರಚಾರವಾಗುವದರೊಂದಿಗೆ ವೀರಗಲ್ಲುಗಳು ಹೆಚ್ಚು ರಚನೆಗೊಂಡಿರುತ್ತವೆ. ರಣರಂಗದಲ್ಲಿ ಮಡಿದ ವೀರನ ಶೌರ್ಯದ ಚರಿತ್ರೆಯನ್ನು ಅಚ್ಚಳಿಯದೆ ಜನರ ಮನದಲ್ಲಿ ಉಳಿಯುವಂತೆ ಮಾಡಿದವುಗಳೇ ವೀರಗಲ್ಲುಗಳಾಗಿವೆ. ರಾಜಕೀಯ ಇತಿಹಾಸ ರಚನೆಗೆ ಈ ಸ್ಮಾರಕಗಳು ಸಹಾಯಕವಾಗಿದೆ.

ಮುಗಳಖೋಡದಲ್ಲಿನ ಶ್ರೀ ಲಕ್ಕವ್ವ ದೇವಿಯ ದೇವಾಲಯದ ಮುಂಭಾಗದಲ್ಲಿ ನಶಿಸಿ ಹೋಗಿರುವ ಒಂದು ವೀರಗಲ್ಲನ್ನು ಕಾಣಬಹುದಾಗಿದೆ. ಇದು ಸಾಮಾನ್ಯವಾದ ಚಿತ್ರಗಳನ್ನು ಒಳಗೊಂಡಿದ್ದು, ಯಾವುದೇ ಲಿಪಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಇವು ಯಾರ ಆಳ್ವಿಕೆಗೆ ಸಂಬಂಧಿಸಿವೆ ಎಂಬುದು ತಿಳಿಯಲು ಅಸ್ಪಷ್ಟವಾಗಿವೆ.

ಈ ದಿಸೆಯಲ್ಲಿ ಮುಗಳಖೋಡವು ಆಕರ್ಷಕವಾಗಿ, ನೈಸರ್ಗಿಕವಾಗಿ ಸೌಂದರ್ಯದಿಂದ ದೇವಾಲಯ, ಜಿನಾಲಯ ಮತ್ತು ಋಷಿಮುನಿಗಳಿಂದ ಕೂಡಿದ ಈ ನಾಡು ನಿಜಕ್ಕೂ ಪುಣ್ಯಕ್ಷೇತ್ರವಾಗಿ ಕಂಗೊಳಿಸುತ್ತಿದೆ. ಈ ಮೇಲಿನ ಎಲ್ಲ ಸಂಗತಿಗಳಿಂದ ಮುಗಳಖೋಡವು ಇತಿಹಾಸದ ಪುಟಗಳಲ್ಲಿ ತನ್ನದೆ ಆದ ಅಚ್ಚನ್ನು ಮೂಡಿಸುವಲ್ಲಿ ಸಫಲತೆಯನ್ನು ಕಂಡಿದೆ.

: ಅಡಿಟಿಪ್ಪಣಿಗಳು :

೧) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಬಾ. ಪಾಟೀಲ : ೧೯೯೫ :
ಪುಟ ಸಂಖ್ಯೆ : ೧೧೮.

೨) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡ. ಶಿ. ಬಾ. ಪಾಟೀಲ : ೧೯೯೫.
ಪುಟ ಸಂಖ್ಯೆ :

೩) ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ : ಧಾರವಾಡ : ಡಾ. ರಾಜಶೇಕರ : ೧೯೯೮.
ಪುಟ ಸಂಖ್ಯೆ : ೧

೪) ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ. ಬಾ. ಪಾಟೀಲ : ೧೯೯೫
ಪುಟ ಸಂಖ್ಯೆ : ೬೬.

೫) ದಿ ರೂಪಮಂಡಕ : ಶ್ರೀ ಬಿ. ಸಿ. ಭಟ್ಟಾಚಾರ್ಯ : ಪುಟ ಸಂಖ್ಯೆ : ೧೭.

ಅಧ್ಯಾಯ - ೭

ಸಮಾರೋಪ

[illegible]

[illegible]

ಅಧ್ಯಾಯ – ೭

ಸಮಾರೋಪ

ಕನ್ನಡ ನಾಡಿನ ಗಂಡು ಮೆಟ್ಟಿನ ನೆಲೆ ಹಾಗೂ ವೀರರ ನಾಡು ಎಂದು ಪ್ರಸಿದ್ಧಿ ಪಡೆದ ಜಿಲ್ಲೆ ಬೆಳಗಾವಿ. ಇದು ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಹೋರಾಟದಲ್ಲಿ ಬೆಳಗಾವಿಯ ಪಾತ್ರವು ವಿಶಿಷ್ಟ ಪೂರ್ಣವಾಗಿರುವುದು ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಬರುವ ತಾಲೂಕುಗಳಲ್ಲಿ ರಾಯಬಾಗವು ಕೂಡಾ ಒಂದು. ಈ ತಾಲೂಕವು ತನ್ನದೇ ಆದ ವಿಶಿಷ್ಟತೆಯಿಂದ ಇತಿಹಾಸವನ್ನೇ ನಿರ್ಮಿಸಿದೆ. ಈ ತಾಲೂಕಿನಿಂದ ಸುಮಾರು ೨೫ ಕಿ.ಮೀ. ಅಂತರದಲ್ಲಿ ಆಗ್ನೇಯ ದಿಕ್ಕಿಗೆ ಬರುವ ಪ್ರದೇಶ ಮುಗಳಖೋಡ. ಇದು ಐತಿಹಾಸಿಕ ಪುಣ್ಯಕ್ಷೇತ್ರವಾಗಿದೆ. ಇಲ್ಲಿ ರಾಜಕೀಯವಾಗಿ ಪ್ರಾಚೀನ ಕಾಲದಿಂದಲೂ ಆಡಳಿತ ನಡೆದಿರುವುದು ಕಂಡು ಬರುತ್ತದೆ. ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಈ ಪ್ರದೇಶವು ಬೆಳೆದು ಬಂದಿರುವುದನ್ನು ತಿಳಿಸಲಾಗಿದೆ.

ನಮ್ಮ ಕನ್ನಡ ನಾಡಿನ ಬೆಳಗಾವಿ ಜಿಲ್ಲೆಯ ಕುಹೂಂಡಿ ಮೂರು ಸಾವಿರದ ಭಾಗವಾಗಿತ್ತು ಎಂಬುದಾಗಿ ತಿಳಿಯುತ್ತದೆ. ಇಲ್ಲಿ ಈ ಮುಗಳಖೋಡವು ಮೂರು ಸಾವಿರದ ನೆಲೆಯಲ್ಲಿ ಒಂದಾಗಿರುವುದು ಕಂಡುಬರುತ್ತದೆ. ಇಲ್ಲಿ ಸವದತ್ತಿಯ ರಟ್ಟರು, ಕಲ್ಯಾಣದ ಚಾಳುಕ್ಯರ ಆಡಳಿತವು ಹೆಚ್ಚಾಗಿ ಆಗಿರುವುದುನ್ನು ಇಲ್ಲಿನ ರಾಜಮನೆತನಗಳಿಂದ, ಶಾಸನಗಳಿಂದ ಸಮರ್ಥಿಸಲಾಗಿದೆ. ಸವದತ್ತಿಯ ರಟ್ಟರು ಕೃಷ್ಣಾನದಿಯ ಮಧ್ಯಭಾಗವಿದ್ದು ಪೂರ್ವ ಹಾಗೂ ಪಶ್ಚಿಮ ಬೆಳಗಾವಿ ಜಿಲ್ಲೆಯ ಸೀಮೆ ಇದ್ದು, ಇಂದಿನ ಮಹಾರಾಷ್ಟ್ರದ ಚಂದಗಡ, ಗಡಹಿಂಗ್ಲಜ ತಾಲೂಕು ಮತ್ತು ವಿಜಾಪುರ ಜಿಲ್ಲೆಯ ಮುಧೋಳ ಹಾಗೂ ಜಮಖಂಡಿ ತಾಲೂಕುಗಳು ಸೇರಿ **"ಮೂರು ಕುಹೂಂಡಿ ಮೂರು ಸಹಸ್ರ"** ಎಂಬ ಹೆಸರಿನಿಂದ ಆಳುತ್ತಿದ್ದರು. ಇಲ್ಲಿನ ದೇವಾಲಯಗಳ ವಾಸ್ತುಶಿಲ್ಪವು ಮತ್ತು ಕಟ್ಟಡಗಳ ಸ್ವರೂಪವು ಅಧ್ಯಯನದ ನಿದರ್ಶನಗಳಾಗಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ರಾಯಬಾಗವು ರಾಷ್ಟ್ರಮಟ್ಟದಲ್ಲಿ ಬೆಳೆದಿರುವುದನ್ನು ನಾವು ಈ ಭಾಗದ ಹಲವು ಹೋರಾಟಗಾರರ ಮೂಲಕ ತಿಳಿಯಬಹುದು. ಅದೇ ರೀತಿಯಾಗಿ ಮುಗಳಖೋಡದ ಹೋರಾಟಗಾರರಾದ ಶ್ರೀ ನಾರಾಯಣ ಭೀಮಾಜಿ ಕುಲಕರ್ಣಿ ಹಾಗೂ ಶ್ರೀ ಗೀರಮಲ್ಲ ಯಡವನ್ನವರ

[illegible]

[illegible]

[illegible]

[illegible]

[illegible]

ಅವರು ಭಾಗವಹಿಸಿದ್ದನ್ನು ನಾವು ಇಲ್ಲಿ ಚರಿತ್ರೆಯಿಂದ ತಿಳಿಯಬಹುದು. ಇವರು ರಾಷ್ಟ್ರೀಯ ಚಳುವಳಿ ಮತ್ತು ಹೋರಾಟಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಈ ಪ್ರದೇಶದ ಜನತೆಗೆ ಸ್ವಾತಂತ್ರ್ಯದ ಕಿಚ್ಚನ್ನು ಮನವರಿಕೆಯಾಗಿ ತಿಳಿಸಿ ಹೋರಾಟಕ್ಕೆ ಸಿದ್ಧಗೊಳಿಸಿದರು. ಈ ಎಲ್ಲ ಘಟನೆಗಳಿಂದ ಬೆಳಗಾವಿಯ ಐತಿಹಾಸಿಕ ಅಧಿವೇಶನವು ೧೯೨೪ ರಲ್ಲಿ ಗಾಂಧೀಜಿಯವರ ಮುಖಂಡತ್ವದಲ್ಲಿ ನಡೆದು ಅಸಂಖ್ಯಾತ ಜನರು ಭಾಗವಹಿಸಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯ ಹೋರಾಟದ ಜೊತೆಗೆ ಹಲವಾರು ವಿಷಯಗಳನ್ನು ಯೋಜನೆಗಳನ್ನು ತಿಳಿಸಿ ಅನುಸರಿಸುವುದು ತಿಳಿದುಬರುತ್ತದೆ.

ಮುಗಳಖೋಡವು ವಿಭಿನ್ನ ಸಾಂಸ್ಕೃತಿಕತೆಯಿಂದ ಕೂಡಿದ್ದು ವರ್ಣನಾತ್ಮಕವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಾಚೀನ ಕಾಲದ ಚತುರ್ವರ್ಣ ಪದ್ಧತಿಯನ್ನು ಸಮಾಜವು ರಚನೆಗೊಂಡಿರುತ್ತದೆ. ಅನೇಕ ಹಬ್ಬ-ಹರಿದಿನಗಳು ಮತ್ತು ಉತ್ಸವಗಳನ್ನು ವಿಜೃಂಭನೆಯಿಂದ ಎಲ್ಲ ಧರ್ಮದವರು ಸೇರಿಕೊಂಡು ಆಚರಿಸುತ್ತಿರುವುದು ಕಂಡುಬರುತ್ತದೆ.

ಮುಗಳಖೋಡವು ಸಹಜವಾಗಿ ನಿಸರ್ಗ ಸೌಂದರ್ಯದಿಂದ ಕೂಡಿದ ಪ್ರದೇಶವಾಗಿದೆ. ಸುತ್ತಲೂ ಫಲವತ್ತಾದ ಭೂಮಿಯಲ್ಲಿ ಕೆಂಪು, ಕಪ್ಪು ಮಣ್ಣನ್ನು ಹೊಂದಿದೆ. ಘಟಪ್ರಭಾ ನದಿಯ ವರದಿಂದ ಕಾಲುವೆಗಳು, ಬಾವಿಗಳು, ಕೊಳವೆ ಬಾವಿಗಳು, ಹಳ್ಳಕೊಳ್ಳಗಳು ಹಲವು ಮರಗಳಿಂದ ಆವೃತ್ತವಾಗಿದೆ. ಆರ್ಥಿಕ ಸಂಪನ್ಮೂಲಗಳಿಂದ ಈ ಗ್ರಾಮ ಶ್ರೀಮಂತವಾಗಿದೆ. ಇಲ್ಲಿರುವ ಸಂಪತ್ಭರಿತ ಭೂಮಿ ಉತ್ತಮ ಬೇಸಾಯ ಪ್ರದೇಶಗಳನ್ನು ನೀಡುತ್ತದೆ. ಇಲ್ಲಿ ವ್ಯವಸಾಯ ಮುಖ್ಯ ಕಸಬು ಆಗಿದೆ. ರೈತರು ಪ್ರಮುಖವಾಗಿ ಕಬ್ಬು, ಅರಶಿನ, ಗೋವಿನಜೋಳ, ಗೋಧಿ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆದು ನೆರೆ-ಹೊರೆ ರಾಜ್ಯಗಳೊಂದಿಗೆ ವ್ಯಾಪಾರ ವಹಿವಾಟು ಹೊಂದಿರುವುದು ಹಾಗೇ ಇನ್ನಿತರ ಬೆಳೆಗಳ ಜೊತೆಗೆ ತರಕಾರಿಗಳನ್ನು ಸಹ ಬೆಳೆಯುವರು.

ಮುಗಳಖೋಡದಲ್ಲಿ ರಚನೆಗೊಂಡಿರುವ ದೇವಾಲಯಗಳು, ಮಠಗಳು, ಬಸದಿಗಳು, ಪ್ರಾಚೀನ ವೈಭವದ ಸಂಕೇತಗಳಾಗಿವೆ. ಶೈವ, ವೈಷ್ಣವ ಪಂಥದ ದೇವಾಲಯಗಳು ನಿರ್ಮಾಣಗೊಂಡಿರುವುವು. ಕೆಲವು ಮೂರ್ತಿಶಿಲ್ಪಗಳನ್ನು ಕಾಣಬಹುದಾಗಿದೆ. ಇವು ನೈಜ, ವಾಸ್ತವಿಕ ಅಂಶಗಳನ್ನೊಳಗೊಂಡು ನಿರ್ಮಾಣಗೊಂಡಿರುತ್ತದೆ.

ಮುಗಳಖೋಡ : ಒಂದು ಚಾರಿತ್ರಿಕ ಅವಲೋಕನದಿಂದ ದೊರೆತ ಆಧಾರತ ಮಾಹಿತಿಗಳ ಮೂಲಕ ಹೆಚ್ಚಾಗಿ ಕಂಡು ಬರುತ್ತದೆ. ಇವುಗಳ ಆಧಾರವಾಗಿ ಇಲ್ಲಿ ಸ್ಪಷ್ಟ ಐತಿಹಾಸಿಕತೆಯ ಚಿತ್ರಣವನ್ನು ವಿವರಣಾತ್ಮಕವಾಗಿ ನೀಡಲಾಗಿರುತ್ತದೆ.

ಹೀಗೆ ಹಲವು ಮೂಲತಃ ಕ್ಷೇತ್ರ ಕಾರ್ಯವನ್ನೊಳಗೊಂಡ ರಚಿತ ಸಂಪ್ರಬಂಧವಾಗಿದೆ. ಈ ಪ್ರದೇಶವು ಭೌಗೋಳಿಕ ಪರಿಸರವನ್ನು ಹಾಗೂ ಚಾರಿತ್ರಿಕ ಹಿನ್ನಲೆಯನ್ನು ತಿಳಿಸಲಾಗಿದೆ. ಇಲ್ಲಿ ಆಳ್ವಿಕೆ ನಡೆಸಿದ ಚಾಳುಕ್ಯರು, ರಟ್ಟರು, ಸುಲ್ತಾನರು, ಮರಾಠರು ಪ್ರಭಾವವನ್ನು ಹಲವು ಶಾಸನಗಳ ಹಾಗೂ ಮಾಹಿತಿಯ ಸಂಗ್ರಹಣೆಯಿಂದ ಅಧ್ಯಯನಿಸಲಾಗಿದೆ.

ಈ ಗ್ರಾಮದಲ್ಲಿ ಬ್ರಿಟಿಷರ ಜೊತೆಗೆ ಹೋರಾಡಿದ ಸ್ವತಂತ್ರ್ಯ ಹೋರಾಟಗಾರರು ಕನ್ನಡ ಪರ ಚಳುವಳಿಯಲ್ಲಿ ಈ ನೆಲದ ಮೇಲೆ ನೆಲೆಸಿ ಹೋಗಿದ್ದನ್ನು ಇಲ್ಲಿ ಸ್ಮರಿಸಬಹುದು. ಶ್ರೀ ಯಲ್ಲಾಲಿಂಗ ಮಠದ ಕೃಪಾಶೀರ್ವಾದದಿಂದ ಸ್ಥಳೀಯರು ರಾಜಕೀಯ ರಂಗದಲ್ಲಿ ತೊಡಗಿ ಸರಕಾರ ಸೌಲಭ್ಯಗಳನ್ನು ಸ್ಥಳೀಯರಿಗೆ ಒದಗಿಸುವಲ್ಲಿ ನಿಪುಣರಾಗಿದ್ದಾರೆ. ವಿದ್ಯಾದೃಷ್ಟಿಯಿಂದ ಮತ್ತು ಸುಕ್ಷೇತ್ರದಿಂದ ಮುಗಳಖೋಡ ಗ್ರಾಮವನ್ನೇ ರಾಷ್ಟ್ರಮಟ್ಟದಲ್ಲಿ ಮಿಂಚುವಂತೆ ಮಾಡುವ ಮನಸ್ಸು ಸ್ಥಳೀಯರಲ್ಲಿ ಅಡಕವಾಗಿದೆ ಅಂತಾ ಹೇಳಬಹುದು.

ಸಾಂಸ್ಕೃತಿಕವಾಗಿ ಮುಗಳಖೋಡವು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಹಾಗೂ ಸುಧಾರಣೆಗಳನ್ನು ಅನುಸರಿಸಿರುವುದು ತಿಳಿಯುತ್ತದೆ.

ಈ ನಿಟ್ಟಿನಲ್ಲಿ ಇಷ್ಟೊಂದು ಮಾಹಿತಿಯನ್ನು ಪ್ರಥಮ ಬಾರಿಗೆ ಏಳು ಅಧ್ಯಾಯಗಳಲ್ಲಿ ಒಂದೆಡೆಗೆ ತರಲಾಗಿದೆ. ಇಲ್ಲಿ ದೊರೆತಿರುವ ಶಾಸನಗಳ ಆಧಾರಗಳಿಂದ ಇತಿಹಾಸವನ್ನು ರಚಿಸಬಹುದಾಗಿ ವಿಷಯದ ವಿಶ್ಲೇಷಣೆಗೆ ಇಲ್ಲಿ ಪ್ರಯತ್ನಿಸಲಾಗಿದೆ.

ಇಂತಹ ಪ್ರಸ್ತುತ ಗ್ರಾಮದ ಚಾರಿತ್ರಿಕ ಹಿನ್ನಲೆ ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಊರಿನ ಪ್ರಸಕ್ತ ಪರಿಸ್ಥಿತಿಯ ಸ್ವರೂಪಗಳು ಅರಿತು ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಭೌಗೋಳಿಕ, ಐತಿಹಾಸಿಕ ಸ್ಥಿತಿಯನ್ನು ಕಟ್ಟಿಕೊಂಡು ಈ ಸಂಪ್ರಬಂಧ ಒಂದು ಸಣ್ಣ ಸಾಹಸವನ್ನೇ ಇಲ್ಲಿ ಮಾಡಲಾಗಿದೆ ಎಂದು ಹೇಳಬಹುದು. ಇಂತಹ ಗ್ರಾಮದ ಚಾರಿತ್ರಿಕ ಅವಲೋಕನದಿಂದ ಪ್ರತಿಯೊಂದು ಗ್ರಾಮದ ಚಾರಿತ್ರಿಕ ಹಿನ್ನಲೆ ಆಗುವಂತಾದರೆ ನಾಡಿನ ಸಾಂಸ್ಕೃತಿಕ ಇತಿಹಾಸವನ್ನೇ ಅರ್ಥಪೂರ್ಣವಾಗಿ ಸಂರಕ್ಷಿಸಿಕೊಂಡು ಬರಲು ಇಂತಹ ಸಂಪ್ರಬಂಧಗಳು ಪ್ರಯೋಜನಕಾರಿ ಆಗಿದೆ ಎಂದು ಹೇಳಬಹುದು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

	ಲೇಖಕರ ಹೆಸರು	ಗ್ರಂಥದ ಹೆಸರು	ಪ್ರಕಟಗೊಂಡ ವರ್ಷ
೧)	ಶ್ರೀ ಆರ್. ಆರ್. ಮುತಾಲಿಕ	ಹುಕ್ಕೇರಿ ತಾಲೂಕ ದರ್ಶನ	೧೯೪೭
೨)	ಶ್ರೀ ಆರ್. ಎಸ್. ಪಂಚಮುಖಿ	ಕರ್ನಾಟಕ ಶಿಲಾಶಾಸನಗಳು	
೩)	ಶ್ರೀ ಕೆಂಪಣ್ಣನವರ ಪಿ. ಜಿ.	ಜೈನ ಕ್ಷೇತ್ರಗಳ ಐತಿಹ್ಯ	೧೯೯೦
೪)	ಶ್ರೀ ಚಿದಾನಂದಮೂರ್ತಿ ಎಂ.	ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.	
೫)	ಶ್ರೀ ಚಿದಾನಂದಮೂರ್ತಿ ಎಂ.	ಕನ್ನಡ ಶಾಸನಗಳ ಸಂಸ್ಕೃತಿಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.	
೬)	ಡಾ. ಶಿ. ಬಾ. ಪಾಟೀಲ	ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ, ಪ್ರಕಟಿತ ಪಿ.ಎಚ್.ಡಿ. ಪ್ರಬಂಧ, ಕ.ವಿ.ವಿ. ಧಾರವಾಡ.	೧೯೯೫
೭)	ಡಾ. ಎಸ್. ಎಂ. ಹರದಗಟ್ಟಿ	ಬೆಳಗಾವಿ ಸಿರಿ (ಸಂ) ಸ್ಮರಣ ಸಂಚಿಕೆ	೨೦೦೩
೮)	ಡಾ. ಎಸ್. ಆರ್. ಗುಂಜಾಳ	ಬೆಳಗಾವಿ ಬೆಳಕು (ಸಂ) ಸಂಸ್ಮರಣ ಸಂಪುಟ	೨೦೦೩
೯)	ಡಾ. ಗುರುಪಾದ ಮರಿಗುದ್ದಿ	ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ, ಗ್ರಂಥಾಲಯ ಸಮಿತಿ, ವಿಧಾನ ಮಂಡಲ, ವಿಧಾನಸೌದ, ಬೆಂಗಳೂರು.	೨೦೦೮
೧೦)	ಡಾ. ಆರ್. ಸಿ. ಹಿರೇಮಠ	ಕನ್ನಡ ಶಾಸನ ಸಂಪದ	
೧೧)	ಡಾ. ಎಂ. ಎಂ. ಕಲಬುರ್ಗಿ	ಬಸವಣ್ಣನವರ ಕುರಿತ ಶಾಸನಗಳು	
೧೨)	ಶ್ರೀ ಪಿ. ಬಿ. ದೇಸಾಯಿ	ಕನ್ನಡ ನಾಡಿನ ಶಾಸನಗಳು	
೧೩)	ಶ್ರೀ ಪಂಚಮುಖಿ ಆರ್. ಎಸ್.	ಕರ್ನಾಟಕ ಇತಿಹಾಸ ಸಂಪುಟ–೧ ಕೆ.ಎಚ್.ಆರ್.ಎಸ್. ಧಾರವಾಡ.	೧೯೬೭

	ಲೇಖಕರ ಹೆಸರು	ಗ್ರಂಥದ ಹೆಸರು	ಪ್ರಕಟಗೊಂಡ ವರ್ಷ
೧೪)	ಶ್ರೀ ಮನೋಜ ಪಾಟೀಲ	ಬೆಳಗಾವಿ ಜಿಲ್ಲಾ ಮಾರ್ಗದರ್ಶಿ (ಸಂ) ಪವನ ಪ್ರಕಾಶನ, ಟಿಳಕವಾಡಿ. ಬೆಳಗಾವಿ.	೧೯೮೭
೧೫)	ಶ್ರೀ ಅಣ್ಣಾರಾಯ ಮಿರ್ಜಿ	ಬೆಳಗಾವಿ ಬಳುವಳಿ (ಸಂ) ವಿಜಯಲಕ್ಷ್ಮೀ ಆರ್ಟ್ಸ ಪ್ರಿಂಟರ್ಸ್, ಬೆಳಗಾವಿ.	೧೯೭೧
೧೬)	ಡಾ. ಪಿ. ಬಿ. ಕೊರವಿ	ಬೆಳಗಾವಿ ಜಿಲ್ಲೆ ಸ್ಥಳನಾಮ ಅಪ್ರಕಟಿತ ಮಹಾಪ್ರಬಂಧ	೨೦೧೧
೧೭)	ಶ್ರೀ ನಾಗಲಿಂಗ ರಾ. ಬಡಿಗೇರ	ಸಂಕೇಶ್ವರ ಚಾರಿತ್ರಿಕ ಅಧ್ಯಯನ ಅಪ್ರಕಟಿತ ನಿಬಂಧ	೨೦೧೧
೧೮)	ಶ್ರೀ ಎಂ. ವ್ಹಿ. ನರಸಿಂಹಮೂರ್ತಿ	ಕರ್ನಾಟಕದ ಯಾದವರ ಇತಿಹಾಸ	೧೯೭೧
೧೯)	ಶ್ರೀ ವೆಂಕಟರಾವ ಆಲೂರ	ಕರ್ನಾಟಕದ ಗತವೈಭವ	೧೯೨೭
೨೦)	ಡಾ. ಸೂರ್ಯನಾಥ ಕಾಮತ	ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೭೭೩

: English Book :

1)	Desai P. B.	Jainism in South India and Some Jaina Epigraphs	1957
2)	Dr. Suryanath Kamath	Belgaum District Gazetteer	1987

: ಶಾಸನ ಸಂಪುಟಗಳು :

೧)	ಶ್ರೀ ಗೋಪಾಲ ಬಿ. ಆರ್.	ಕರ್ನಾಟಕ ಇನ್ಸ್‌ಸ್ಕ್ರಿಪ್ಷ್ಯನ್ಸ್, ಸಂಪುಟ – ೨೧
2)	Epigraphia Indica	Vol - 21.

ನಕ್ಷೆಗಳು

ಕರ್ನಾಟಕ ರಾಜ್ಯದ ನಕ್ಷೆ





ಬೆಳಗಾವಿ ಜಿಲ್ಲೆಯ ನಕ್ಷೆ




ರಾಯಬಾಗ ತಾಲೂಕಿನ ನಕ್ಷೆ






ಮುಗಳಖೋಡ ನಕ್ಷೆ



ಹಾರೂಗೇರಿ
ಹಿಡಕಲ್ಲ
ಸಸಾಲಟ್ಟಿ
ಖನದಾಳ
ಮುಗಳಖೋಡ
ಪಾಲಬಾಂವಿ
ನಿರಲಖೋಡಿ
ಗುರ್ಲಾಪೂರ
ಕಪ್ಪಲಗುದ್ದಿ
ಹಳ್ಳೂರ
ಉತ್ತರ
ಪಶ್ಚಿಮ
ಪೂರ್ವ
ದಕ್ಷಿಣ

ತಲವಿನ್ಯಾಸಗಳು


ದೇಗುಲ ಗುಡಿಯ ತಲವಿನ್ಯಾಸ, ಮುಗಳಖೋಡ



೧೦೦೮ ಆದಿನಾಥ ಜೈನ ಬಸದಿ ತಲವಿನ್ಯಾಸ, ಮುಗಳಖೋಡ.



ಶ್ರೀ ಮಲ್ಲಿಕಾರ್ಜುನ (ಮಲ್ಲಯ್ಯ) ದೇವಸ್ಥಾನದ ತಲವಿನ್ಯಾಸ, ಮುಗಳಖೋಡ



ಕೆಲವು ಪ್ರಮುಖ ದೇವಾಲಯಗಳ ಛಾಯಾಚಿತ್ರಗಳು



ದೇಗುಲ ಗುಡಿ



ದೇಗುಲ ಗುಡಿಯಲ್ಲಿ ಇರುವ ಕಂಬ



ದೇಗುಲ ಗುಡಿಯಲ್ಲಿ ಇರುವ ಕಂಬ



ದ್ಯಾಮವ್ವದೇವಿ




ಶಿವಲಿಂಗ



ಶ್ರೀ ಚನ್ನಬಸವೇಶ್ವರ ಮುಖ್ಯದ್ವಾರ



ವೀರಗಲ್ಲು



ಆದಿನಾಥ ಜೈನ ಬಸದಿ ಮುಗಳಖೋಡ



ಮಾನಸ್ಥಂಭ



ಜೈನ ಬಸದಿಯಲ್ಲಿರುವ ವಿಗ್ರಹಗಳು



ಶ್ರೀ ಮಲ್ಲಿಕಾರ್ಜುನ ಕತೃ ಗದ್ದಿಗೆ



ಶ್ರೀ ಅಡವಿಸಿದ್ಧೇಶ್ವರ ಕತೃ ಗದ್ದಿಗೆ



ಶ್ರೀ ಯಲ್ಲಾಲಿಂಗೇಶ್ವರ ಮಠ



ಶ್ರೀ ಯಲ್ಲಾಲಿಂಗೇಶ್ವರ ಕತೃ ಗದ್ದಿಗೆ



ಶ್ರೀ ಯಲ್ಲಾಲಿಂಗೇಶ್ವರ ಬೆಳ್ಳಿ ತೊಟ್ಟಿಲು



ರಥ ಮುಗಳಖೋಡ



ಮುಗಳಖೋಡದ ಮೂರ್ತಿಶಿಲ್ಪಗಳು